ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜನವರಿ 20 ಸೋಮವಾರ 2025

ಸಂಪುಟ: 45 | ಸಂಚಿಕೆ: 273 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಇಂದು ಅಮೆರಿಕ ಅಧ್ಯಕ್ಷರಾಗಿ
ಟ್ರಂಪ್ ಪ್ರಮಾಣ ವಚನ



ವಾಷಿಂಗ್ಟನ್, ಜ.19– ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಅಮೆರಿಕಕ್ಕೆ ಹೊಸ ಅಧ್ಯಕ್ಷರ ಆಗಮನವಾಗುತ್ತದೆ. ಈ ಬಾರಿ ಡೊನಾಲ್ಡ್ ಟ್ರಂಪ್ 2ನೇ ಬಾರಿಗೆ ಅಮೆರಿಕ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಇದಕ್ಕಾಗಿ ಎಲ್ಲ ಸಿದ್ಧತೆಗಳು ಪೂರ್ಣಗೊಂಡಿವೆ. ಅಮೆರಿಕಾದ 47ನೇ ಅಧ್ಯಕ್ಷರಾಗಿ ಟ್ರಂಪ್ ಅಧಿಕಾರದ ಗದ್ದುಗೆ ಏರಲಿದ್ದಾರೆ.

ಅಮೆರಿಕಾದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಜಾನ್ ರಾಬರ್ಟ್ಸ್ ಅವರು ಸೋಮವಾರ ಟ್ರಂಪ್ ಅವರಿಗೆ ಪ್ರಮಾಣವಚನ ಬೋಧಿಸಲಿದ್ದಾರೆ. 2ನೇ ಬಾರಿಗೆ ಅಮೆರಿಕ ಅಧ್ಯಕ್ಷರಾಗಿ ಟ್ರಂಪ್ ಅಧಿಕಾರ ಮತ್ತು ಗೌಪ್ಯತೆಯ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಪ್ರಮಾಣ ವಚನ ಸ್ವೀಕಾರದ ಬಳಿಕ ಹೊಸ ಅಧ್ಯಕ್ಷರು ಉದ್ಘಾಟನಾ ಭಾಷಣ ಮಾಡುತ್ತಾರೆ. ಮುಂದಿನ ನಾಲ್ಕು ವರ್ಷಗಳ ಯೋಜನೆಗಳನ್ನು ಅಮೆರಿಕನ್ನರ ಮುಂದೆ ಇಡಲಿದ್ದಾರೆ. ಟ್ರಂಪ್ ತಮ್ಮ ಮೊದಲ ಅವಧಿಯಲ್ಲಿ ಅಂದರೆ 2017ರಲ್ಲಿ 'ಅಮೆರಿಕನ್ ಕಾರ್ನೇಜ್' ಪ್ರಚೋದಿಸುವ ಪ್ರಖರ ಭಾಷಣ ಮಾಡಿದ್ದರು. ಅಮೆರಿಕ ಉಪಾಧ್ಯಕ್ಷರಾಗಿ (ವೈಸ್ ಪ್ರೆಸಿಡೆಂಟ್) ಆಗಿ ಜೆಡಿ ವ್ಯಾನ್ಸ್ ಕೂಡ ನಾಳೆಯೇ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ■6ನೇ ಪುಟಕ್ಕೆ

ಪಾಲಹಳ್ಳಿ ಹೊರವಲಯದಲ್ಲಿ ರೌಡಿಶೀಟರ್ ಭೀಕರ ಹತ್ಯೆ

● ಕುಂಟ ಸುನಿ ಹತ್ಯೆಗೆ ಪ್ರತೀಕಾರ ಶಂಕೆ ● ಸ್ನೇಹಿತರ ಮೂಲಕ ಶೆಡ್‌ಗೆ ಕರೆಸಿಕೊಂಡು ಹತ್ಯೆ

ಶ್ರೀರಂಗಪಟ್ಟಣ, ಜ.19– ತಾಲೂಕಿನ ಪಾಲಹಳ್ಳಿಯ ರಕ್ತಸಿಕ್ತ ಅಧ್ಯಾಯಕ್ಕೆ ಮತ್ತೊಂದು ಕೊಲೆ ಸೇರ್ಪಡೆಯಾಗಿದೆ. ರೌಡಿಶೀಟರ್ ಒಬ್ಬನನ್ನು ಭೀಕರವಾಗಿ ಹತ್ಯೆ ಮಾಡಿ, ಮತ್ತಿಬ್ಬರ ಮೇಲೆ ಹಲ್ಲೆ ನಡೆಸಲಾಗಿದ್ದು ತಾಲೂಕಿನ ಜನತೆಯನ್ನು ಬೆಚ್ಚಿಬೀಳಿಸಿದೆ

ಪಾಲಹಳ್ಳಿ ಗ್ರಾಮದ ಹೊರವಲಯದಲ್ಲಿ ಕಳೆದ ರಾತ್ರಿ ಘಟನೆ ಸಂಭವಿಸಿದ್ದು, ಗ್ರಾಮದ ಬಾವಿಕಟ್ಟೆ ತಿಮ್ಮೇಗೌಡರ ಕುಟುಂಬದ ವೆಂಕಟರಮಣ ಅವರ ಪುತ್ರ ಸುಪ್ರೀತ್ ಅಲಿಯಾಸ್ ಸುಪ್ಪಿ (30) ಕೊಲೆಯಾದ ರೌಡಿಶೀಟರ್. ಜೊತೆಗೆ ಈತನ ಸ್ನೇಹಿತರಾದ ಅರ್ಜುನ್ ಮತ್ತು ರಿಷಿ ಮೇಲೂ ಹಲ್ಲೆ ನಡೆಸಲಾಗಿದ್ದು, ಗಂಭೀರವಾಗಿ ಗಾಯಗೊಂಡಿರುವ ಅರ್ಜುನ್‌ನನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಕೊಲೆಯಾದ ರೌಡಿಶೀಟರ್ ಸುಪ್ರೀತ್ ಗ್ರಾಮದ ಹೊರವಲಯದಲ್ಲಿರುವ ತಮ್ಮ ಒಂದು ಎಕರೆಯಷ್ಟು ಜಮೀನಿನಲ್ಲಿ ಶೆಡ್ ನಿರ್ಮಿಸಿಕೊಂಡು ರೇಸ್ ಎತ್ತುಗಳನ್ನು ಸಾಕಿಕೊಂಡಿದ್ದ. ಎರಡು ದಿನಗಳ ಹಿಂದೆ ಸಾಲಿ ಗ್ರಾಮದಲ್ಲಿ ನಡೆದ ಒಂಟಿ ಎತ್ತಿನ ಗಾಡಿ ಓಟದ ಸ್ಪರ್ಧೆಯಲ್ಲಿ ಪಾಲ್ಗೊಂಡು ದ್ವಿತೀಯ ಬಹುಮಾನ ಪಡೆದು, ಶನಿವಾರ ಬೆಳಗ್ಗೆ ವಾಪಸ್ ಗ್ರಾಮಕ್ಕೆ ಹಿಂತಿರುಗಿದ್ದ ಸ್ನೇಹಿತರಾದ ಅರ್ಜುನ್ ಹಾಗೂ ರಿಷಿ ಜಮೀನಿನ ಶೆಡ್‌ನಲ್ಲಿಯೇ ಉಳಿದುಕೊಂಡಿದ್ದರೆ, ಸುಪ್ರೀತ್ ಮನೆಗೆ ತೆರಳಿದ್ದ.



ಸುಪ್ರೀತ್

ಸುಪ್ರೀತ್ ಹಂತಕರು ಆತನ ಬಗ್ಗೆ ಮಾಹಿತಿ ಕಲೆ ಹಾಕಿದ್ದು, ಸುಪ್ರೀತ್ ಶೆಡ್‌ನಲ್ಲಿದ್ದಾನೆಂದು ಶನಿವಾರ ರಾತ್ರಿ ಶೆಡ್ ಬಳಿ ಬಂದು ಅರ್ಜುನ್ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಿದ್ದಾರೆ. ಅಲ್ಲದೆ ರಿಷಿ ಎಂಬಾತನ ಮೇಲೂ ಹಲ್ಲೆ ಮಾಡಿ ಮನೆಯಲ್ಲಿರುವ ರೌಡಿಶೀಟರ್ ಸುಪ್ರೀತ್‌ನನ್ನು ಶೆಡ್ ಬಳಿ ಕರೆಸುವಂತೆ ಹೇಳಿದ್ದಾರೆ. ಹೀಗಾಗಿ ರಿಷಿ ಕರೆ ಮಾಡಿದಾಗ ಸುಪ್ರೀತ್ ಮನೆಯವರು ಕರೆ ಸ್ವೀಕರಿಸಿ, ಆತ ಮನೆಯಲ್ಲಿಯೇ ಫೋನ್ ಬಿಟ್ಟು ಹೊರಗೆ ಹೋಗಿದ್ದಾನೆ ಎಂದು ತಿಳಿಸುತ್ತಾರೆ.

ಈ ವೇಳೆ ರಿಷಿ ತನ್ನ ಸ್ನೇಹಿತ ಕಾರ್ತಿಕ್‌ಗೆ ಕರೆ ಮಾಡಿ ಕರೆಸಿಕೊಂಡ. ಸ್ಥಳಕ್ಕೆ ಬಂದ ಕಾರ್ತಿಕ್ ■9ನೇ ಪುಟಕ್ಕೆ

ಚೊಚ್ಚಲ ಖೋ ಖೋ ವಿಶ್ವಕಪ್ ಪಂದ್ಯಾವಳಿ
ಭಾರತ ಮಹಿಳಾ, ಪುರುಷ ತಂಡಗಳು ಚಾಂಪಿಯನ್

ವಿಶ್ವ ಮಟ್ಟದಲ್ಲಿ ಮಿಂಚಿದ ಮೈಸೂರು ಕುವರಿ ಚೈತ್ರಾ ಪಂದ್ಯದ ಅತ್ಯುತ್ತಮ ಆಟಗಾರ್ತಿ

ನವದೆಹಲಿ, ಜ.19– ಚೊಚ್ಚಲ ಖೋ ಖೋ ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ನೇಪಾಳ ವಿರುದ್ಧ ಭರ್ಜರಿ ಗೆಲುವು ಸಾಧಿಸುವ ಮೂಲಕ ಭಾರತದ ಮಹಿಳೆಯರ ಹಾಗೂ ಪುರುಷರ ತಂಡ ಚಾಂಪಿಯನ್ ಪಟ್ಟ ಅಲಂಕರಿಸಿದೆ.

ಇಲ್ಲಿನ ಇಂದಿರಾಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ತವರಿನ ಪ್ರೇಕ್ಷಕರ ಮುಂದೆ ಪ್ರಿಯಾಂಕಾ ಇಂಗ್ಳೆ ಮತ್ತು ಪ್ರತೀಕ್ ವೈಕರ್ ಬಳಗವು ಗೆದ್ದು ಬೀಗಿತು. ಎರಡು ವಿಭಾಗಗಳಲ್ಲೂ ಭಾರತ ಚಾಂಪಿಯನ್ ಪಟ್ಟ ಅಲಂಕರಿಸಿದರೆ, ನೇಪಾಳ ತಂಡ ರನ್ನರ್ಸ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು. ಆತಿಥೇಯ ತಂಡಗಳು ಜಯ ಸಾಧಿಸುತ್ತಿದ್ದಂತೆ ಕ್ರೀಡಾಂಗಣದಲ್ಲಿ ಕಿಕ್ಕಿರಿದು ಸೇರಿದ್ದ ಕ್ರೀಡಾಭಿಮಾನಿಗಳು ಎದ್ದು ನಿಂತು ಚಪ್ಪಾಳೆ ತಟ್ಟಿ, ರಾಷ್ಟ್ರಧ್ವಜದೊಂದಿಗೆ ಕುಣಿದು ಕುಪ್ಪಳಿಸಿದರು. ಮಹಿಳೆಯರ ತಂಡ ನೇಪಾಳ ವಿರುದ್ಧ 78–40 ಅಂಕಗಳ ಅಂತರದಲ್ಲಿ ಜಯ ಸಾಧಿಸಿದರೆ, ಪುರುಷರು 54–36 ಅಂಕಗಳ ಅಂತರದ ಜಯ ದಾಖಲಿಸಿದರು.

19 ತಂಡಗಳಿದ್ದ ಮಹಿಳೆಯರ ವಿಭಾಗದಲ್ಲಿ ಭಾರತ ಮತ್ತು ನೇಪಾಳ ಅಜೇಯವಾಗಿ ಫೈನಲ್ ಪ್ರವೇಶಿಸಿದ್ದವು. ಹೀಗಾಗಿ, ಅವುಗಳ ಸೆಣಸಾಟ ಭಾರಿ ಕುತೂಹಲ ಮೂಡಿಸಿತ್ತಾದರೂ, ಅಂತಿಮವಾಗಿ ಕರ್ನಾಟಕದ ತಿ.ನರಸೀಪುರ ತಾಲೂಕಿನ ರೈತನ ಮಗಳಾದ ಬಿ.ಚೈತ್ರಾ ಅವರ ಅಮೋಘ ಆಟದ ಬಲದಿಂದ ಆತಿಥೇಯ ಬಳಗವು ಪಾರಮ್ಯ ಮೆರೆಯಿತು. ಆ ಮೂಲಕ ಭಾರತ ಇತಿಹಾಸ ನಿರ್ಮಿಸಿತು. ವೇಗ, ಕಾರ್ಯತಂತ್ರ, ಪ್ರತಿಭೆ ಹಾಗೂ ಮಾಸ್ಟರ್ ಕ್ಲಾಸ್ ಗೇಮ್ ಪ್ಲಾನ್ ಮೂಲಕ ಭಾರತೀಯ ಮಹಿಳಾ ತಂಡ ಈ ಸಾಧನೆ ಮಾಡಿತು. ■6ನೇ ಪುಟಕ್ಕೆ





ಗಣ್ಯರಿಂದ ಫೈನಲ್ ಪಂದ್ಯದ ಅತ್ಯುತ್ತಮ ಆಟಗಾರ್ತಿ ಪ್ರಶಸ್ತಿ ಸ್ವೀಕರಿಸುತ್ತಿರುವ ಬಿ.ಚೈತ್ರಾ.

"ಮೊದಲ ಬಾರಿಗೆ ಖೋ ಖೋ ವಿಶ್ವಕಪ್ ಗೆದ್ದ ತಂಡಗಳಿಗೆ ಅಭಿನಂದನೆಗಳು! ಈ ಐತಿಹಾಸಿಕ ಗೆಲುವು ಅವರ ಅಪ್ರತಿಮ ಕೌಶಲ, ದೃಢಸಂಕಲ್ಪ ಮತ್ತು ತಂಡದ ಕೆಲಸ. ಈ ವಿಜಯೋತ್ಸವವು ಭಾರತದ ಅತ್ಯಂತ ಹಳೆಯ ಸಾಂಪ್ರದಾಯಿಕ ಕ್ರೀಡೆಗಳಲ್ಲಿ ಒಂದಾದ ಖೋ ಖೋ ಕ್ರೀಡೆಗೆ ಹೆಚ್ಚಿನ ಗಮನ ಸೆಳೆಯುವಂತೆ ಮಾಡಿದೆ. ರಾಷ್ಟ್ರದಾದ್ಯಂತ ಅಸಂಖ್ಯಾತ ಯುವ ಕ್ರೀಡಾಪಟುಗಳನ್ನು ಪ್ರೇರೇಪಿಸಿದೆ. ಈ ಸಾಧನೆಯು ಮುಂದಿನ ದಿನಗಳಲ್ಲಿ ಇನ್ನಷ್ಟು ಯುವಕರು ಈ ಕ್ರೀಡೆಯನ್ನು ಮುಂದುವರಿಸಲು ದಾರಿಮಾಡಿಕೊಡಲಿ. – ನರೇಂದ್ರ ಮೋದಿ, ಪ್ರಧಾನಿ.

"ಯಾವುದಾದರೂ ಅಂತರರಾಷ್ಟ್ರೀಯ ಪಂದ್ಯದಲ್ಲಿ ಆಡುತ್ತೇನೆ ಅಂದುಕೊಂಡಿದ್ದೇನೇ ಹೊರತು ವಿಶ್ವಕಪ್ ಪಂದ್ಯಾವಳಿಯಲ್ಲಿ ಆಡುವ ಅವಕಾಶ ದೊರೆಯುತ್ತದೆ ಎಂದು ನಿರೀಕ್ಷಿಸಿರಲಿಲ್ಲ. ಅಂತಹ ಒಂದು ಅವಕಾಶ ದೊರೆತದ್ದಲ್ಲದೇ ಫೈನಲ್ ಪಂದ್ಯದಲ್ಲಿ ಅತ್ಯುತ್ತಮ ಆಟಗಾರ್ತಿ ಪ್ರಶಸ್ತಿ ಬಂದಿರುವುದು ಅತ್ಯಂತ ಸಂತೋಷವಾಗಿದೆ. ಮೊದಲನೇ ವಿಶ್ವಕಪ್ ಖೋ ಖೋ ಪಂದ್ಯಾವಳಿಯಲ್ಲಿ ಭಾರತ ತಂಡ ಗೆಲುವು ಸಾಧಿಸಿರುವುದು, ಆ ತಂಡದಲ್ಲಿ ನಾನು ಆಟವಾಡಿದ್ದು, ಅದರಲ್ಲೂ ಐದಾರು ಪಂದ್ಯಗಳಲ್ಲಿ ಬೆಸ್ಟ್ ಡಿಫೆಂಡರ್ ಆಗಿದ್ದು ಜೀವಮಾನದ ಸಾಧನೆ ಎಂದು ಭಾವಿಸುತ್ತೇನೆ. ಕ್ರಿಕೆಟ್ ಆಟಗಾರರ ಬಳಿ ಅಭಿಮಾನಿಗಳು ಬಂದು ಫೋಟೋ ತೆಗೆಸಿಕೊಳ್ಳುವಂತೆ ಇಲ್ಲಿ ನನ್ನಲ್ಲಿಗೆ ಬಂದು ಹಲವಾರು ಅಭಿಮಾನಿಗಳು ಫೋಟೋ ಕ್ಲಿಕ್ಕಿಸಿಕೊಳ್ಳುತ್ತಿದ್ದಾರೆ. ಈ ಒಂದು ಸಂತೋಷಕ್ಕೆ ಪಾರವೇ ಇಲ್ಲ. ಫೈನಲ್ ಪಂದ್ಯದ ವೇಳೆ ನಮ್ಮ ತಂಡದ ನಾಯಕಿ ಪ್ರಿಯಾಂಕ ಇಂಗ್ಳೆ ಅವರು ನನಗೆ ಬಹಳಷ್ಟು ಪ್ರೋತ್ಸಾಹ ನೀಡಿದರು. ನೀನು ಬೆಸ್ಟ್ ಡಿಫೆಂಡರ್, ಫೈನಲ್‌ನಲ್ಲೂ ಉತ್ತಮವಾಗಿ ಆಡಬೇಕೆಂದು ಹುರಿದುಂಬಿಸಿದರು.

– 'ಮೈಸೂರು ಮಿತ್ರ' ಪ್ರತಿನಿಧಿ ವೆಂಕಟನಾಗ್ ಸೋಭರ್ಸ್ ಅವರಿಗೆ ಬಿ.ಚೈತ್ರಾ ಮೊದಲ ಪ್ರತಿಕ್ರಿಯೆ.


ಸುಪ್ರಸಿದ್ಧ ನಾಟಕಗಳ ಪ್ರದರ್ಶನ, ಕೊರಗ ಡೋಲು, ಲಂಬಾಣಿ ನೃತ್ಯ ವೈಭವದೊಂದಿಗೆ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಸಂಪನ್ನ

ಮೈಸೂರು, ಜ.19(ಎಂಕೆ)– ಹಿರಿಯ ಜೀವಗಳ ಬದುಕಿನ ವಿಶ್ಲೇಷಣೆಯ ಜೊತೆಗೆ ವ್ಯಕ್ತಿಯ ಆಂತರಿಕ ಸ್ವಭಾವವನ್ನು ತಿಳಿಸುವ ಮತ್ತು ಸಂಪ್ರದಾಯಗಳಲ್ಲಿ ಬೆಸೆದ ಜೀವಸೆಲೆಗಳ ಜೊತೆಗೆ ವರ್ಚ್ಯುಯಲ್ ಜಗತ್ತನ್ನು ಅನಾವರಣಗೊಳಿಸಿದ ನಾಟಕಗಳ ಪ್ರದರ್ಶನ ಹಾಗೂ ಕೊರಗ ಡೋಲು, ಲಂಬಾಣಿ ನೃತ್ಯ ವೈಭವದೊಂದಿಗೆ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಸಂಪನ್ನಗೊಂಡಿತು...

ಮೈಸೂರು ರಂಗಾಯಣದಲ್ಲಿ ಕೆಲ ವರ್ಷದ ನಂತರ ಸಂಕ್ರಾಂತಿಯಂದೇ 'ಬಿಡುಗಡೆ; ಸಾಮಾಜಿಕ ನ್ಯಾಯ–ಚಳವಳಿಗಳು ಮತ್ತು ರಂಗಭೂಮಿ' ಪರಿಕಲ್ಪನೆಯಲ್ಲಿ ಆರಂಭಗೊಂಡು, 6 ದಿನಗಳು ರಂಗಾಸಕ್ತ ಹೃನ್ಮನ ಸೆಳೆದ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಭರ್ತಿ ಪ್ರದರ್ಶನಗಳೊಂದಿಗೆ ವೈಭವದ ತೆರೆಕಂಡಿತು. ಕಡೆಯ ದಿನವಾದ ಭಾನುವಾರ ಭೂಮಿಗೀತ ವೇದಿಕೆಯಲ್ಲಿ ಅಸ್ಸಾಂನ ಸೀಗಲ್ ಥಿಯೇಟರ್ ತಂಡದ 'ಉಂಚಾಯಿ' ನಾಟಕ ಪ್ರದರ್ಶನಗೊಂಡಿತು. ಇತಿಹಾಸದಲ್ಲಿ ತನ್ನನ್ನು ಸ್ಥಿರವಾಗಿಸಿಕೊಳ್ಳಲು ಕೆಟ್ಟ ಕೃತ್ಯಕ್ಕೆ ಮುಂದಾಗುವ ವ್ಯಕ್ತಿ ರಿವಾಲ್ವರ್‌ಗಿಂತ ನಿಜವಾದ ಶಕ್ತಿ ತನ್ನೊಳಗೆ ಅಡಗಿದೆ ಎಂಬುದನ್ನು ಮನಗಾಣುತ್ತಾ, ತನ್ನಲ್ಲಿನ ಆಂತರಿಕ ಸ್ವಭಾವಗಳನ್ನು ಅಭಿವ್ಯಕ್ತಪಡಿಸುವ ಕಥಾಹಂದರವುಳ್ಳ ಉಂಚಾಯಿ ಕಲಾಭಿಮಾನಿಗಳ ಗಮನ ಸೆಳೆಯಿತು. ಬಹರುಲ್ ಇಸ್ಲಾಂ ನಿರ್ದೇಶನದಲ್ಲಿ, ಸೀಗಲ್ ಥಿಯೇಟರ್‌ನ ಕಲಾವಿದರ ಅಭಿನಯ ಅಚ್ಚುಕಟ್ಟಾಗಿತ್ತು.

ಕಿರುರಂಗಮಂದಿರದಲ್ಲಿ ಹಿರಿಯ ಜೀವಗಳ ಬದುಕಿನ ವಿಶ್ಲೇಷಣೆ ಕುರಿತಾದ 'ಅಯಾನ್ ಶಾಂತಿ ಕುಟೀರ' ಕನ್ನಡ ನಾಟಕ ಪ್ರದರ್ಶನವಾಯಿತು. ಪ್ರೀತಿಯ ಆಸರೆ ಬಯಸುವ ಹಿರಿಯ ಜೀವಗಳ ಬದುಕಿನ ಚಿತ್ರಣ ನೆರೆದಿದ್ದವರ ಮನ ಕಲಕಿತು. ಡಾ.ನ.ರತ್ನ ರಚನೆ, ಹೆಚ್.ಎಸ್.ಉಮೇಶ್ ನಿರ್ದೇಶನದಲ್ಲಿ ಮೈಸೂರಿನ ಸಮತೆಂತೋ ತಂಡದ ಹಿರಿಯ ಕಲಾವಿದರ ಅಭಿನಯ ಮನಮುಟ್ಟುವಂತಿತ್ತು.

ಹಾಗೆಯೇ ವನರಂಗದಲ್ಲಿ ಹಾಸನದ ದಿಂಡಿಗೂರಿನ ಸಾವಿತ್ರಿ ಬಾಫುಲೆ ಸ್ತ್ರೀಶಕ್ತಿ ತಂಡ 'ಕೇರಿ ಹಾಡು' ನಾಟಕ ಪ್ರದರ್ಶನವಾಯಿತು. ಕೆ.ಚಂದ್ರಶೇಖರ್ ನಿರ್ದೇಶನದಲ್ಲಿ ಗ್ರಾಮೀಣ ಸೊಗಡು, ಸಂಪ್ರದಾಯಗಳ ಆಚರಣೆ, ಕಲೆ ■6ನೇ ಪುಟಕ್ಕೆ



ವನರಂಗದಲ್ಲಿ ಪ್ರದರ್ಶನಗೊಂಡ 'ಕೇರಿ ಹಾಡು' ನಾಟಕದ ದೃಶ್ಯ.

ಪ್ರಯಾಗ್‌ರಾಜ್ ಮಹಾ ಕುಂಭಮೇಳದಲ್ಲಿ ಅಗ್ನಿ ಅವಘಡ: ಸಿಲಿಂಡರ್‌ಗಳು ಸ್ಫೋಟ, ಹೊತ್ತಿ ಉರಿದ 25ಕ್ಕೂ ಹೆಚ್ಚು ಟೆಂಟ್‌ಗಳು



ಪ್ರಯಾಗ್‌ರಾಜ್, ಜ.19–ಪ್ರಯಾಗ್‌ರಾಜ್‌ನ ಮಹಾ ಕುಂಭಮೇಳದಲ್ಲಿ ಅಗ್ನಿ ಅವಘಡ ಸಂಭವಿಸಿದೆ. ಕುಂಭಮೇಳ ಪ್ರದೇಶದ ಸೆಕ್ಟರ್ 19ರಲ್ಲಿ ಎರಡು–ಮೂರು ಸಿಲಿಂಡರ್‌ಗಳು ಸ್ಫೋಟಗೊಂಡ ಪರಿಣಾಮ 25 ಕ್ಕೂ ಹೆಚ್ಚು ಟೆಂಟ್‌ಗಳು ಹೊತ್ತಿ ಉರಿದಿದ್ದು, ಕುಂಭಮೇಳ ಪ್ರದೇಶದ ಸೆಕ್ಟರ್ 20ಕ್ಕೂ ಬೆಂಕಿ ವ್ಯಾಪಿಸಿದೆ. ಅದೃಷ್ಟವಶಾತ್ ಯಾವುದೇ ಸಾವು ನೋವು ಸಂಭವಿಸಿಲ್ಲ.

ವಿವೇಕಾನಂದ ಸೇವಾ ಸಮಿತಿಗೆ ಸೇರಿದ ಟೆಂಟ್‌ಗಳಲ್ಲಿ ಇಟ್ಟಿದ್ದ ಸಿಲಿಂಡರ್‌ಗಳು ಒಂದೊಂದಾಗಿ ಸ್ಫೋಟಗೊಳ್ಳುತ್ತಿರುವುದರಿಂದ ಬೆಂಕಿ ತೀವ್ರತೆ ಹೆಚ್ಚಾಗಿದೆ. ಬೆಂಕಿ ಅವಘಡದಿಂದಾಗಿ ಮಹಾ ಕುಂಭಮೇಳ ಪ್ರದೇಶದಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಗಿದೆ. ಟೆಂಟ್‌ನಲ್ಲಿ ಇರುವವರನ್ನು ಅಧಿಕಾರಿಗಳು ದೂರ ಕಳುಹಿಸಿದ್ದಾರೆ.

ಅಗ್ನಿ ಅವಘಡದ ಕುರಿತು ಪ್ರಯಾಗ್‌ರಾಜ್ ಎಡಿಜಿ ಭಾನುಭಾಸ್ಕರ್ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದು, ಮಹಾ ಕುಂಭಮೇಳದ ಸೆಕ್ಟರ್ 19ರಲ್ಲಿ ಎರಡು–ಮೂರು ಸಿಲಿಂಡರ್‌ಗಳು ಸ್ಫೋಟಗೊಂಡಿವೆ. ಹಾಗಾಗಿ ಶಿಬಿರಗಳಲ್ಲಿ ಭಾರಿ ಬೆಂಕಿ ಕಾಣಿಸಿಕೊಂಡಿದೆ. ■9ನೇ ಪುಟಕ್ಕೆ

ವೀರಶೈವ–ಲಿಂಗಾಯತ ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್ 2025ಕ್ಕೆ ಯಶಸ್ವಿ ತೆರೆ

● ಗ್ರಾಮೀಣ ಭಾಗದ ಬಡ ಯುವಕರಿಗೂ ಉದ್ಯಮದಲ್ಲಿ ಅವಕಾಶ ಕಲ್ಪಿಸಲು ಖಂಡ್ರೆ ಕರೆ ● ಮೂರು ದಿನಗಳಲ್ಲಿ 111 ಕೋಟಿಗೂ ಹೆಚ್ಚು ವ್ಯವಹಾರ

ಮೈಸೂರು, ಜ.19(ಎಸ್‌ಪಿಎನ್)– ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಅಂತರರಾಷ್ಟ್ರೀಯ ಲಿಂಗಾಯತ ಯೂತ್ ಫೋರಂ (ಐಎಲ್‌ವೈಎಫ್) ಮೈಸೂರು ಘಟಕದ ವತಿಯಿಂದ ಏರ್ಪಡಿಸಿದ್ದ ಮೂರು ದಿನಗಳ ವೀರಶೈವ–ಲಿಂಗಾಯತ ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್–2025ಕ್ಕೆ ಭಾನುವಾರ ಅದ್ಧೂರಿ ತೆರೆಕಂಡಿತು.

ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್‌ನಲ್ಲಿ 183 ವಿವಿಧ ಮಳಿಗೆಗಳು ಸ್ಥಾಪನೆಗೊಂಡು ಮೂರು ದಿನಗಳಲ್ಲೇ 111 ಕೋಟಿಗೂ ಹೆಚ್ಚು ಬಿಸಿನೆಸ್ ನಡೆದಿದ್ದು, 112 ಕೋಟಿಗೂ ಹೆಚ್ಚು ಲೀಡ್ ಬಂದಿದ್ದು, ಇಲ್ಲಿಯವರೆಗೆ ಅಂದಾಜು 35 ಸಾವಿರ ಮಂದಿ ಮಳಿಗೆಗಳಿಗೆ ಭೇಟಿ ನೀಡಿದ್ದಾರೆ ಎಂದು ಆಯೋಜಕರು ಪ್ರಕಟಿಸಿದರು. ತದನಂತರ ಸಮಾರೋಪದಲ್ಲಿ ಭಾಗವಹಿಸಿದ್ದ ಅರಣ್ಯ ಹಾಗೂ ಪರಿಸರ ಖಾತೆ ಸಚಿವ ಈಶ್ವರ್ ಖಂಡ್ರೆ ಮಾತನಾಡಿ, ದೇಶ–ವಿದೇಶಗಳಲ್ಲಿ ನೆಲೆಸಿ ಉದ್ಯಮ ಸ್ಥಾಪಿಸಿರುವ ಅನೇಕ ಮಂದಿ ಲಿಂಗಾಯತ ಉದ್ಯಮಿಗಳು ಐಎಲ್‌ವೈಎಫ್ ಸಂಘಟನೆಯೊಂದಿಗೆ ಕೈಜೋಡಿಸಿ, 3ನೇ ವರ್ಷದ ಗ್ಲೋಬಲ್ ಬಿಸಿನೆಸ್ ಸಮ್ಮೇಳನವನ್ನು ಆಯೋಜಿಸಿರುವುದು ಸಂತೋಷದ ಸಂಗತಿ ಎಂದು ತಿಳಿಸಿದರು.

ನಮ್ಮ ಸಮುದಾಯ ಎಲ್ಲಾ ವರ್ಗದವರನ್ನು ಪ್ರೀತಿಸುವ ಸಮುದಾಯ. ಇದೀಗ ಸಮುದಾಯದ ಉದ್ಯಮಿಗಳು ಒಗ್ಗಟ್ಟಾಗಿ ಐಎಲ್‌ವೈಎಫ್ ಮೂಲಕ ಮೈಸೂರಿನಲ್ಲಿ ಬಿಸಿನೆಸ್ ಸಮ್ಮೇಳನ ಮಾಡಿರುವುದು ಸಂತೋಷದಾಯಕ ಹಾಗೂ ಸಮುದಾಯ ಉದ್ಯಮಿಗಳು ವೈಯಕ್ತಿಕವಾಗಿ ಎಲ್ಲರೂ ಬಲಿಷ್ಠರೇ, ಆದರೆ, ಸಾಮೂಹಿಕವಾಗಿ ಒಂದುಗೂಡಿದಾಗ ಸಂಘಟನಾ ಕೊರತೆಯಿಂದ ಶಕ್ತಿ ಕಡಿಮೆಯಾಗುತ್ತದೆ. ಜೊತೆಗೆ ಒಳಪಂಗಡಗಳ ಆಂತರಿಕ ಸಮಸ್ಯೆಯಿಂದ ಬಳಲುತ್ತಿದೆ ಎಂದು ಬೇಸರ ಹೊರಹಾಕಿದರು.

ಅಖಿಲ ಭಾರತ ವೀರಶೈವ ಮಹಾಸಭಾ ವತಿಯಿಂದ ಶಿವ ಸಾಹಿತ್ಯೋತ್ಸವ, ವಚನ ಸಾಹಿತ್ಯೋತ್ಸವ ಹಾಗೂ ಪ್ರತಿಭಾವಂತ ಮಕ್ಕಳಿಗೆ ಪುರಸ್ಕಾರ, ಉನ್ನತ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಿ, ಸಮುದಾಯದ ಏಳಿಗೆಗೆ ಶ್ರಮಿಸುತ್ತಿದೆ. ಇದೀಗ ಐಎಲ್‌ವೈಎಫ್ ವತಿಯಿಂದ ಗ್ಲೋಬಲ್ ಬಿಸಿನೆಸ್ ಸಮ್ಮೇಳನ ನಡೆಸಿ, ಉದ್ಯಮ ಕ್ಷೇತ್ರದಲ್ಲೂ ಒಗ್ಗಟ್ಟು ಸಾಧಿಸುತ್ತಿರುವುದು ಸಂತೋಷದ ಸಂಗತಿ ಎಂದರು. ■9ನೇ ಪುಟಕ್ಕೆ



ವೀರಶೈವ–ಲಿಂಗಾಯತ ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್–2025ರ ಮಳಿಗೆಯೊಂದಕ್ಕೆ ಅರಣ್ಯ ಹಾಗೂ ಪರಿಸರ ಖಾತೆ ಸಚಿವ ಈಶ್ವರ್ ಖಂಡ್ರೆ ಭೇಟಿ ನೀಡಿದ ಸಂದರ್ಭದಲ್ಲಿ ಐಎಲ್‌ವೈಎಫ್‌ನ ಮೈಸೂರು ಕಾನ್‌ಕ್ಲೇವ್ ಚೇರ್ಮನ್ ಬಿ.ಎಸ್.ಪ್ರಶಾಂತ್ ಸೇರಿದಂತೆ ಇತರೆ ಸದಸ್ಯರು ಗಿಡ ನೀಡಿ, ಸ್ವಾಗತಿಸಿದರು.

ಉದ್ಯೋಗಪತಿಗಳಲ್ಲಿ ನನ್ನದೊಂದು ಮನವಿ. ಕಡಿಮೆ ಅಂಕ ತೆಗೆದಿದ್ದರೂ ಪರಿಣತಿ ಇರುವ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಉದ್ಯೋಗ ನೀಡಿ, ಮುಖ್ಯವಾಹಿನಿಗೆ ತನ್ನಿ. ಸಮಾಜ ನಿಮಗೆ ಎಲ್ಲವನ್ನೂ ಕೊಟ್ಟಿದೆ. ಹಾಗಾಗಿ ಸಮುದಾಯದ ಬಡ ಯುವಕರಿಗೆ ನೀವೇ ಮುಂದೆ ನಿಂತು ತರಬೇತಿ ನೀಡಿ, ಉದ್ಯೋಗ ಕಲ್ಪಿಸಿ, ಆ ಬಡ ಕುಟುಂಬಕ್ಕೆ ದಾರಿದೀಪವಾಗಿ.

- ಈಶ್ವರ್ ಖಂಡ್ರೆ, ಸಚಿವ




ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್–2025ರ ಸಮಾರೋಪದಲ್ಲಿ ಅನನ್ಯಭಟ್ ಮತ್ತು ತಂಡದಿಂದ ಅದ್ಭುತ ಗಾಯನ

ಮೈಸೂರು ಮಿತ್ರ

ಸೋಮವಾರ 20 ಜನವರಿ 2025

ಮತ್ತೊಮ್ಮೆ ನರಬಲಿಗಾಗಿ ಕಾದಿರುವ ಉಂಡುಬತ್ತಿ ಕೆರೆ

ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದೆ ದಿವ್ಯ ನಿರ್ಲಕ್ಷ್ಯ ವಹಿಸಿರುವ ಅಧಿಕಾರಿ ವರ್ಗ



ಗಿಡಗಂಟಿ ಹಾಗೂ ಪೊದೆಗಳು ಬೆಳೆದು ತಡೆಗೋಡೆಗಳನ್ನು ಮರೆಮಾಚಿರುವುದು.

ಮೈಸೂರು,ಜ.19–ಮೈಸೂರು ತಾಲೂಕಿನ ಕಡಕೊಳ ಬಳಿಯ ಉಂಡುಬತ್ತಿ ಕೆರೆ ಮತ್ತೆ ನರಬಲಿಗಾಗಿ ಕಾಯುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳ ನಿರ್ಲಕ್ಷ್ಯದಿಂದ ಮುಗ್ಧಜೀವಿಗಳನ್ನು ಬಲಿಪಡೆದು ಮತ್ತೊಂದು ದುರಂತದ ನಿದರ್ಶನಕ್ಕೆ ನಾಂದಿ ಹಾಡುವ ಸನ್ನಾಹದಲ್ಲಿದೆ.

ರಾಷ್ಟ್ರೀಯ ಹೆದ್ದಾರಿ 766ರಲ್ಲಿ ಬರುವ ಕಡಕೊಳ ಸಮೀಪದ ಉಂಡುಬತ್ತಿ ಕೆರೆಗೆ ವರುಣ ನಾಲೆಗೆ ನೀರು ಬಿಟ್ಟಿದ್ದರಿಂದ ಮತ್ತು ಉತ್ತಮ ಮಳೆಯಿಂದಾಗಿ ಕೆರೆ ಭರ್ತಿಯಾಗಿದೆ. ಕೆರೆಯ ಮುಂಭಾಗದಲ್ಲಿ ಅದರ ಆಳದಷ್ಟೇ ಹಳ್ಳವಿದೆ. ಈ ಕೆರೆಯ ಎರಡೂ ಬದಿಯಲ್ಲಿ ತಡೆಗೋಡೆ ಇದ್ದು, ಅಪಾರ ಪ್ರಮಾಣದಲ್ಲಿ ಗಿಡಗಂಟಿ ಹಾಗೂ ಪೊದೆಗಳು ಬೆಳೆದು ತಡೆಗೋಡೆಗಳನ್ನು ಮರೆಮಾಚಿವೆ. ಈ ರಸ್ತೆಯಲ್ಲಿ ಪ್ರತಿನಿತ್ಯ ಸಾವಿರಾರು ವಾಹನಗಳು ಚಾಮರಾಜನಗರ, ಗುಂಡ್ಲುಪೇಟೆ, ಕೇರಳ ಮತ್ತು ತಮಿಳುನಾಡಿಗೆ ಸಂಚರಿಸುತ್ತವೆ. ವಾಹನ ಸವಾರರಿಗೆ ಪಕ್ಕದಲ್ಲಿ ಭರ್ತಿಯಾದ ಕೆರೆ ಇದೆ ಎಂಬುದು ಗೋಚರಿಸುವುದಿಲ್ಲ. ಇದರ ಜೊತೆಗೆ ಯಾವುದೇ ರೀತಿಯ ಸೂಚನಾ ಫಲಕಗಳು ಕೂಡ ಇಲ್ಲ. ಏನಾದರೂ ಅವಘಡ ನಡೆದರೆ ನೇರವಾಗಿ ವಾಹನಗಳು ಕೆರೆಗೆ ಉರುಳಿ ಬೀಳುವ ಸಂಭವವಿದೆ.

2010 ಡಿಸೆಂಬರ್ 14ರಂದು ನಂಜನಗೂಡಿನಿಂದ ಮದುವೆಯ ಬೀಗರ ಔತಣದಿಂದ ಬರುವ ಜನರ ತುಂಬಿಕೊಂಡ ಬಂದ ಮಿನಿ ಟೆಂಪೋ ಕೆರೆಗೆ ಉರುಳಿ ಸುಮಾರು 31 ಮಂದಿ ಜೀವಂತ ಸಮಾಧಿಯಾಗಿ ಐದು ಮಂದಿ ಬದುಕಿ ಬಂದು ದೇಶಾದ್ಯಂತ ಸುದ್ದಿಯಾಗಿತ್ತು.


ಈ ಘಟನೆಯ ನಂತರ ಕಡಕೊಳ ಗ್ರಾಮಸ್ಥರು ರಸ್ತೆ ಅಗಲೀಕರಣ ಮತ್ತು ತಡೆಗೋಡೆ ನಿರ್ಮಾಣಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆದಾಗ ಪರಿಸ್ಥಿತಿ ವಿಕೋಪಕ್ಕೆ ತಿರುಗಿ ಲಾಠಿಚಾರ್ಜ್ ನಡೆದು ಅಶ್ರುವಾಯು ಪ್ರಯೋಗಿಸಿ ವಿದ್ಯಾರ್ಥಿಗಳು, ಕೂಲಿಕಾರ್ಮಿಕರು, ಅಮಾಯಕರು ಸೇರಿದಂತೆ 10 ಮಂದಿಯನ್ನು ಬಂಧಿಸಿ 75 ಮಂದಿಗೂ ಹೆಚ್ಚಿನ ಜನರ ಮೇಲೆ ಪ್ರಕರಣ ದಾಖಲಾಗಿ ನ್ಯಾಯಾಲಯಕ್ಕೆ ಅಲೆಯುವಂತಾಗಿತ್ತು. ಸಂಘ ಸಂಸ್ಥೆಗಳ ಆಗ್ರಹಕ್ಕೆ ಮಣಿದ ಸರ್ಕಾರ ವಾಸ್ತವತೆಯನ್ನು ಅರಿತು ಏಳು ವರ್ಷಗಳ ನಂತರ ಪ್ರಕರಣವನ್ನು ಹಿಂಪಡೆದಿತ್ತು.

ಇದಾದ ನಂತರ ರಸ್ತೆ ಅಗಲೀಕರಣಗೊಂಡು ಕೆರೆಯ ಎರಡೂ ಬದಿಯಲ್ಲಿ ತಡೆಗೋಡೆಗಳ ನಿರ್ಮಾಣ ಮಾಡಲಾಗಿತ್ತು. ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳ ನಿರ್ಲಕ್ಷ್ಯತನದಿಂದ ಕೆರೆ ಕಾಣದಂತೆ ಗಿಡಗಂಟಿಗಳು ಬೆಳೆದು ಅಪಘಾತಗಳಿಗೆ ಆಹ್ವಾನ ನೀಡುತ್ತಿದ್ದು, ಇದು ಅವರ ಸಮಯಪ್ರಜ್ಞೆ ಮತ್ತು ಕಾರ್ಯವೈಖರಿಗೆ ಹಿಡಿದ ಕೈಗನ್ನಡಿಯಾಗಿದೆ. ಕೂಗಳತೆ ದೂರದಲ್ಲೇ ಟೋಲ್ ಸಂಗ್ರಹಿಸುವ ಕೇಂದ್ರವಿದ್ದು, ದಿನಂಪ್ರತಿ ಲಕ್ಷಾಂತರ ರೂ.ಗಳ ಟೋಲ್ ಸಂಗ್ರಹಣೆ ಕೂಡ ನಡೆಯುತ್ತಿದೆ. ಅಲ್ಲದೆ ಪ್ರತಿದಿನ ಹಲವಾರು ಹಿರಿಯ ಅಧಿಕಾರಿಗಳು ಹಾಗೂ ಹಲವಾರು ಜನಪ್ರತಿನಿಧಿಗಳು ಈ ರಸ್ತೆಯಲ್ಲಿ ಸಂಚರಿಸುತ್ತಿದ್ದು, ಈ ಅವ್ಯವಸ್ಥೆ ಅವರ ಕಣ್ಣಿಗೆ ಕಾಣದಿರುವುದು ಆಶ್ಚರ್ಯವೇ ಸರಿ.

ಮತ್ತೊಂದು ದುರಂತ ಸಂಭವಿಸುವ ಮುನ್ನ ಕೂಡಲೇ ಅಧಿಕಾರಿ ವರ್ಗ ಎಚ್ಚೆತ್ತು ಗಿಡಗಂಟಿಗಳನ್ನು ತೆರವುಗೊಳಿಸಿ ಸೂಚನಾ ಫಲಕಗಳನ್ನು ಅಳವಡಿಸಿ ತಡೆಗೋಡೆಯನ್ನು ಸುಸ್ಥಿತಿಯಲ್ಲಿ ನಿರ್ವಹಣೆ ಮಾಡಬೇಕೆಂದು ಸಾಮಾಜಿಕ ಹೋರಾಟಗಾರ ಕಡಕೊಳ ಕುಮಾರಸ್ವಾಮಿ ಆಗ್ರಹಿಸಿದ್ದಾರೆ. ತಪ್ಪಿದ ಪಕ್ಷದಲ್ಲಿ ಕೆರೆ ಮುಂದೆ ಅಣುಕು ಶವಗಳ ಪ್ರದರ್ಶನವನ್ನು ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಮೈಸೂರು ವಿಮಾನ ನಿಲ್ದಾಣ ವಿಸ್ತರಣೆ ಸಂಬಂಧ ಕೇಂದ್ರ ವಿಮಾನಯಾನ ಸಚಿವರಿಗೆ ಸಂಸದ ಯದುವೀರ್ ಮನವಿ

● ವಿಮಾನ ಸಂಖ್ಯೆ ಹೆಚ್ಚಳಕ್ಕೆ ಕೋರಿಕೆ ● ಮೈಸೂರು ಆರ್ಥಿಕ ಬೆಳವಣಿಗೆ ದೃಷ್ಟಿಯಿಂದ ವಿಸ್ತರಣೆ ಅನಿವಾರ್ಯ ಪ್ರತಿಪಾದನೆ



ಮೈಸೂರು–ಕೊಡಗು ಸಂಸದ ಯದುವೀರ್ ಅವರು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕಿಂಜರಪು ರಾಮ್ ಮೋಹನ್ ನಾಯ್ಡು ಅವರಿಗೆ ಮನವಿ ಸಲ್ಲಿಸಿದರು.

ನವದೆಹಲಿ,ಜ.19–ಮೈಸೂರಿನಲ್ಲಿ ಆರ್ಥಿಕ ಚಟುವಟಿಕೆಗಳನ್ನು ಹೆಚ್ಚಿಸಲು ವಿಮಾನ ನಿಲ್ದಾಣ ವಿಸ್ತರಣೆ ಅತೀ ಮುಖ್ಯ. ಈ ನಿಟ್ಟಿನಲ್ಲಿ ತ್ವರಿತಗತಿಯಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕಿಂಜರಪು ರಾಮ್ ಮೋಹನ್ ನಾಯ್ಡು ಅವರಿಗೆ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಸಲ್ಲಿಸಿದರು.

ನವದೆಹಲಿಯಲ್ಲಿ ಕೇಂದ್ರ ಸಚಿವರನ್ನು ಭೇಟಿ ಮಾಡಿದ ಸಂಸದ ಯದುವೀರ್, ವಿಮಾನ ನಿಲ್ದಾಣ ವಿಸ್ತರಣೆಗೆ ಇರುವ ಅಡೆತಡೆಗಳು ಹಾಗೂ ಮುಂದಾಗಬೇಕಿರುವ ಕೆಲಸಗಳ ಬಗ್ಗೆ ಮನವರಿಕೆ ಮಾಡಿಕೊಟ್ಟು, ತ್ವರಿತ ಕ್ರಮಕ್ಕೆ ಆಗ್ರಹಿಸಿದರು. ಕೇಂದ್ರ ಸಚಿವರ ಭೇಟಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಂಸದ ಯದುವೀರ್, ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ನಂತರ ಭೂಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಸಂಬಂಧ ನಾಗರಿಕ ವಿಮಾನಯಾನ ಸಚಿವರಾದ ರಾಮ್ ಮೋಹನ್ ನಾಯ್ಡು ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದೇನೆ. ಭೂಮಿ ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಳಿಸಲು ಒತ್ತಡ ಹೇರಿ, ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಭೂಮಿ ಹಸ್ತಾಂತರ ಸಂಬಂಧ ಕ್ರಮ ಕೈಗೊಳ್ಳುವಂತೆ ಕೋರಿದ್ದೇನೆ. ಭೂಸ್ವಾಧೀನ ಪ್ರಕ್ರಿಯೆಗೆ ಅಡ್ಡಿಯಾಗುತ್ತಿರುವ ವಿವಿಧ ಸಮಸ್ಯೆಗಳನ್ನು ಅವರ ಗಮನಕ್ಕೆ ತಂದು, ಅದನ್ನು ಪರಿಹರಿಸಲು ಸೂಚನೆ ನೀಡುವಂತೆಯೂ ಮನವಿ ಮಾಡಿದ್ದೇನೆ ಎಂದು ಹೇಳಿದರು.

ಭೂಸ್ವಾಧೀನಕ್ಕೆ ವಿಶೇಷ ಜಿಲ್ಲಾಧಿಕಾರಿಗಳ ಒಪ್ಪಿಗೆ ಸಿಕ್ಕಿದೆ. ಭೂ ಮಾಲೀಕರಿಗೆ ಬಾಕಿ ಹಣ ಪಾವತಿಸಿ ಭೂಮಿ ಹಸ್ತಾಂತರಕ್ಕೆ ರಾಜ್ಯ ಸರ್ಕಾರ ಕೂಡ ಕ್ರಮಕ್ಕೆ ಮುಂದಾಗಿದೆ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿಗಳೊಂದಿಗೆ ಕಳೆದ ವಾರ ಮಾತುಕತೆ ಕೂಡ ನಡೆಸಲಾಗಿತ್ತು. ಒಟ್ಟಾರೆಯಾಗಿ ಈ ಪ್ರಕ್ರಿಯೆಯನ್ನು ಕ್ಷಿಪ್ರಗತಿಯಲ್ಲಿ ಪೂರ್ಣಗೊಳಿಸಲು ಎಲ್ಲ ರೀತಿಯ ಪ್ರಯತ್ನ ಮಾಡುತ್ತಿದ್ದೇನೆ. ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಿರುವ ಮೈಸೂರು ಅಭಿವೃದ್ಧಿ ಮಾಡುವುದೇ ನನ್ನ ಸದ್ಯದ ಗುರಿ. ದೇಶ–ವಿದೇಶಗಳಿಂದ ಆಗಮಿಸುವ ಪ್ರಯಾಣಿಕರಿಗೆ, ಉದ್ಯಮಿಗಳಿಗೆ ಅನುಕೂಲವಾಗಲು ಮೈಸೂರು ವಿಮಾನ ನಿಲ್ದಾಣ ವಿಸ್ತರಣೆ ಮಾಡಬೇಕಾದ ತುರ್ತು ಅಗತ್ಯವಿದೆ. ಇದರಿಂದ ಸಂಪರ್ಕ ಸುಲಭವಾಗಲಿದೆ ಎಂದು ತಿಳಿಸಿದರು.

ಭೂಸ್ವಾಧೀನ ಪ್ರಕ್ರಿಯೆಗೆ ಕೆಲವು ತಾಂತ್ರಿಕ ಅಡೆತಡೆಗಳಿವೆ. ಅವುಗಳನ್ನು ನಿಭಾಯಿಸಿಕೊಂಡು ನಾವು ಮುನ್ನಡೆಯಬೇಕಿದೆ. ಭೂಮಿ ಹಸ್ತಾಂತರ ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜಂಟಿ ಪ್ರಯತ್ನದಿಂದ ಪ್ರಕ್ರಿಯೆ ಪೂರ್ಣಗೊಳ್ಳಬೇಕು. ಈ ನಿಟ್ಟಿನಲ್ಲಿ ಸಂಬಂಧಪಟ್ಟವರನ್ನು ಭೇಟಿ ಮಾಡಿ, ಒತ್ತಾಯಿಸುತ್ತಿದ್ದೇನೆ. ಇದೇ ವೇಳೆ ಮೈಸೂರಿಗೆ ಹೆಚ್ಚಿನ ವಿಮಾನಗಳನ್ನು ಮಂಜೂರು ಮಾಡಬೇಕೆಂಬ ಮನವಿಗೂ ಸಚಿವರು ಸ್ಪಂದಿಸಿದ್ದಾರೆ. ಮುಂಬರುವ ದಿನಗಳಲ್ಲಿ ಇದು ಕಾರ್ಯರೂಪಕ್ಕೆ ಬರುವ ವಿಶ್ವಾಸವೂ ಇದೆ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಯನ್ನು ಮತ್ತೊಂದು ಹಂತಕ್ಕೆ ಕೊಂಡೊಯ್ಯಲು ಪ್ರಯತ್ನ ಮಾಡುತ್ತಿದ್ದೇನೆ. ಜನರ ಸೇವೆ ಮಾಡಲು ಸಿಕ್ಕಿರುವ ಈ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳುತ್ತೇನೆ ಎಂದರು.

‘ಪಂಚಾಯತ್ ಸೆ ಪಾರ್ಲಿಮೆಂಟ್’ನಲ್ಲಿ ನಾಗವಾಲ ಗ್ರಾಪಂ ಅಧ್ಯಕ್ಷೆ ಕಾಮಾಕ್ಷಮ್ಮ ಭಾಗಿ



ಮೈಸೂರು, ಜ.19–ರಾಷ್ಟ್ರೀಯ ಮಹಿಳಾ ಆಯೋಗ, ಲೋಕಸಭಾ ಸಚಿವಾಲಯ ಹಾಗೂ ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಸಹಯೋಗದಲ್ಲಿ ಇತ್ತೀಚೆಗೆ ನವದೆಹಲಿಯಲ್ಲಿ ಆಯೋಜಿಸಿದ್ದ ‘ಪಂಚಾಯತ್ ಸೆ ಪಾರ್ಲಿಮೆಂಟ್’ ಕಾರ್ಯಕ್ರಮದಲ್ಲಿ ನಾಗವಾಲ ಗ್ರಾಪಂ ಅಧ್ಯಕ್ಷೆ ಶ್ರೀಮತಿ ಕಾಮಾಕ್ಷಮ್ಮ ಭಾಗವಹಿಸಿದ್ದರು. ರಾಜ್ಯದಿಂದ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು 9 ಮಂದಿಗೆ ಮಾತ್ರ ಅವಕಾಶ ಲಭಿಸಿತ್ತು. ಪಂಚಾಯ್ತಿ ಪ್ರತಿನಿಧಿಗಳ ಕರ್ತವ್ಯ, ಜವಾಬ್ದಾರಿ, ಆಡಳಿತ ನಿರ್ವಹಣೆ ಕುರಿತು ವಿಶೇಷ ಕಾರ್ಯಾಗಾರದ ಜೊತೆಗೆ ರಾಷ್ಟ್ರಪತಿ ಮುರ್ಮು ಅವರೊಂದಿಗೆ ಸಂವಾದದಲ್ಲೂ ಪಾಲ್ಗೊಂಡಿದ್ದರು.

ಬಿ.ಆರ್.ರಮ್ಯಗೆ ಪಿಹೆಚ್.ಡಿ ಪದವಿ



ಮೈಸೂರು, ಜ.19– ಡಾ.ಎಸ್.ಲೀಲಾವತಿ ಅವರ ಮಾರ್ಗದರ್ಶನದಲ್ಲಿ ಬಿ.ಆರ್.ರಮ್ಯ ಅವರು ಸಸ್ಯಶಾಸ್ತ್ರ ವಿಭಾಗದಲ್ಲಿ ಮಂಡಿಸಿದ ‘ಸ್ಟಡೀಸ್ ಆನ್ ಬಯೋ ಆಕ್ಟಿವ್ ಪೊಟೆನ್ಷಿಯಲ್ ಆಫ್ ಡಿಪ್ಲೋಸೈಕ್ಲೋಸ್ ಪಲ್ಮಟಸ್(ಲಿ), ಜೆಫೆರಿ ಆನ್ ಇಂಪೋರ್ಟೆಂಟ್ ಮೆಡಿಸಿನಲ್ ವೈಲ್ಡ್ ಕುಕುರ್ಬಿಟೇಸಿ ಸ್ಪೀಸೀಸ್’ ಎಂಬ ಮಹಾಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾನಿಲಯ ಪಿಹೆಚ್.ಡಿ ಪದವಿ ನೀಡಿದೆ ಎಂದು ಪ್ರಕಟಣೆ ತಿಳಿಸಿದೆ.

ವ್ಯಂಗ್ಯಚಿತ್ರ ಹಸ್ತಾಂತರ



ಬೆಂಗಳೂರಿನ ಅರಮನೆ ಮೈದಾನದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸುವರ್ಣ ಮಹೋತ್ಸವದಲ್ಲಿ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಅವರಿಗೆ ಮೈಸೂರಿನ ಖ್ಯಾತ ವ್ಯಂಗ್ಯಚಿತ್ರಕಾರ, ಎಕೆಬಿಎಂಎಸ್‌ನ ಕಾರ್ಯಕಾರಿ ಸಮಿತಿ ಸದಸ್ಯ ಎಂ.ವಿ.ನಾಗೇಂದ್ರಬಾಬು ತಾವು ರಚಿಸಿರುವ ವ್ಯಂಗ್ಯಚಿತ್ರವನ್ನು ನೀಡಿದರು. ಇದೇ ವೇಳೆ ಮೈಸೂರಿನ ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ, ಉದ್ಯಮಿ ಎಂ.ವಿ.ಸತ್ಯನಾರಾಯಣ, ಎಕೆಬಿಎಂಎಸ್ ಸಹ ಕಾರ್ಯದರ್ಶಿ ಜಯಸಿಂಹ, ಸಮಿತಿಯ ವಿಜಯ್‌ಕುಮಾರ್, ಡಾ.ರಾಘವೇಂದ್ರ ಭಾರದ್ವಾಜ್ ಹಾಜರಿದ್ದರು.

ಬಿಜೆಪಿ ಯುವ ಮೋರ್ಚಾದಿಂದ ವಯವಂದನಾ ಕಾರ್ಡ್ ವಿತರಣೆ




ಬಿಜೆಪಿ ಚಾಮುಂಡೇಶ್ವರಿ ನಗರ ಮಂಡಲದ ಯುವ ಮೋರ್ಚಾ ವತಿಯಿಂದ ವಯವಂದನಾ ಕಾರ್ಡ್ ವಿತರಣೆ ಮಾಡಲಾಯಿತು.

ಮೈಸೂರು,ಜ.19–ಬಿಜೆಪಿ ಚಾಮುಂಡೇಶ್ವರಿ ನಗರ ಮಂಡಲದ ಯುವ ಮೋರ್ಚಾ ವತಿಯಿಂದ ಪ್ರಧಾನ ಮಂತ್ರಿ ಜನ ಆರೋಗ್ಯ ರಕ್ಷಾ ಯೋಜನೆಯ ಆಯುಷ್ಮಾನ್ ಭಾರತ್ ವಯ ವಂದನಾ ಕಾರ್ಡ್ ನೋಂದಣಿ ಹಾಗೂ ವಿತರಣಾ ಕಾರ್ಯಕ್ರಮದ ಸಮಾರೋಪ ಸಮಾರಂಭವನ್ನು ರಾಮಕೃಷ್ಣನಗರದ ಸಾಲುಮರದ ತಿಮ್ಮಕ್ಕ ಉದ್ಯಾನವನದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಯುವ ಮೋರ್ಚಾ ವತಿಯಿಂದ ‘ಯುವಕರಿಂದ ಹಿರಿಯರಿಗೆ ನಮನ’ ಹೆಸರಿನಲ್ಲಿ ವಾಜಪೇಯಿಯವರ ಜನ್ಮದಿನದಿಂದ ಸ್ವಾಮಿ ವಿವೇಕಾನಂದ ಜಯಂತಿವರೆಗೂ ಅನೇಕ ಸಾರ್ವಜನಿಕ ಸ್ಥಳಗಳಲ್ಲಿ 70 ವರ್ಷಕ್ಕೂ ಅಧಿಕ ವಯಸ್ಸಿನ 500ಕ್ಕೂ ಅಧಿಕ ಜನರನ್ನು ಯೋಜನೆಗೆ ನೋಂದಾಯಿಸಲಾಯಿತು. ಈ ಸಂದರ್ಭದಲ್ಲಿ ಮಂಡಲದ ಯುವ ಮೋರ್ಚಾ ಅಧ್ಯಕ್ಷ ಮಧು ಸೋಮಶೇಖರ್, ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಮಂಡಲದ ಅಧ್ಯಕ್ಷ ರಾಕೇಶ್‌ಭಟ್, ನಗರ ಯುವ ಮೋರ್ಚಾ ಅಧ್ಯಕ್ಷ ರಾಕೇಶ್‌ಗೌಡ, ಪ್ರಧಾನ ಕಾರ್ಯದರ್ಶಿ ಸಚ್ಚಿನ್‌ಗೌಡ, ಲೋಹಿತ್, ಮಂಡಲದ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಚಂದನ್ ಗೌಡ, ಸಾಗರ್‌ಸಿಂಗ್, ಉಪಾಧ್ಯಕ್ಷರಾದ ರಾಘವೇಂದ್ರ, ಮಧು, ಮುಖಂಡರಾದ ರಾಜಮಣಿ, ವಿಜಯ ಮಂಜುನಾಥ್, ತುಳಸಿ, ಕಲಾವತಿ, ಪ್ರತಾಪ್, ಶಿವು, ಅವಿನಾಶ್, ರಾಘವೇಂದ್ರ, ಸೋಮಣ್ಣ, ರಂಗೇಶ್, ಶುಭಶ್ರೀ, ಪುಟ್ಟಮ್ಮಣ್ಣಿ ಇತರರಿದ್ದರು.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಜ.19–ಜನವರಿ 20 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆ ವರೆಗೆ ರಾಮಕೃಷ್ಣನಗರ ಉಪವಿಭಾಗದ ಹಂಪಾಪುರ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ ಸಿ.ಆರ್. ಹುಂಡಿ ಹಾಗೂ ಕುವೆಂಪುನಗರ ಉಪ ವಿಭಾಗದ ಆರ್.ಕೆ. ವಿದ್ಯುತ್ ವಿತರಣಾ ಕೇಂದ್ರದಿಂದ ಹೊರ ಹೊಮ್ಮುವ ಟಿಕೆ ವಿದ್ಯುತ್ ಮಾರ್ಗದಲ್ಲಿ ತುರ್ತು ನಿರ್ವಹಣಾ ಕೆಲಸವನ್ನು ಹಮ್ಮಿಕೊಳ್ಳಲಾಗಿರುವುದರಿಂದ ಸಿ.ಆರ್.ಹುಂಡಿ ವಿದ್ಯುತ್ ಮಾರ್ಗದ ವ್ಯಾಪ್ತಿಯ ಮದ್ದೂರು, ಮದ್ದೂರು ಹುಂಡಿ, ಎಸ್.ಕಲ್ಲಹಳ್ಳಿ, ಗುಮ್ಮಚನಹಳ್ಳಿ, ಸಿ.ಆರ್.ಹುಂಡಿ ಹಾಗೂ ಸುತ್ತಮುತ್ತಲಿನ ಪ್ರದೇಶ ಹಾಗೂ ಟಿ.ಕೆ ವಿದ್ಯುತ್ ಮಾರ್ಗದ ಕುವೆಂಪುನಗರ ಕಾಂಪ್ಲೆಕ್ಸ್‌ಯಿಂದ ಅಕ್ಷಯ ಭಂಡಾರ್, ಮಹಾಲಕ್ಷ್ಮಿ ಸ್ವೀಟ್ಸ್‌ನಿಂದ ಶಿವಕುಮಾರ್ ಸ್ವಾಮಿ ವೃತ್ತ, ಕಾವೇರಿ ಸ್ಕೂಲ್, ಜೋಡಿ ಬಸವೇಶ್ವರ ರಸ್ತೆ, ಕುವೆಂಪುನಗರ ಎ ಮತ್ತು ಬಿ, ಸಿ ಮತ್ತು ಡಿ, ಹೆಚ್ ಮತ್ತು ಐ, ಜೆ ಬ್ಲಾಕ್, ಕುವೆಂಪುನಗರ ಹುಡ್ಕೋ ಮನೆಗಳು, ಭಾಗಶಃ ಕುವೆಂಪುನಗರ ಕೆಹೆಚ್‌ಬಿ ಗೃಹಗಳು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರ್ ಲಯನ್ಸ್ ಶಾಲೆಯ ವಾರ್ಷಿಕೋತ್ಸವ



ಮೈಸೂರಿನ ಬನ್ನಿಮಂಟಪದಲ್ಲಿರುವ ಮೈಸೂರ್ ಲಯನ್ಸ್ ಶಾಲೆಯ 43ನೇ ಶಾಲಾ ವಾರ್ಷಿಕೋತ್ಸವ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ನೆರವೇರಿತು.

ಮೈಸೂರು, ಜ.19–ಮೈಸೂರಿನ ಬನ್ನಿಮಂಟಪದಲ್ಲಿರುವ ಮೈಸೂರ್ ಲಯನ್ಸ್ ಶಾಲೆಯ 43ನೇ ಶಾಲಾ ವಾರ್ಷಿಕೋತ್ಸವ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ನೆರವೇರಿತು. ಶಾಸಕ ತನ್ವೀರ್ ಸೇಠ್ ಜ್ಯೋತಿ ಬೆಳಗಿಸಿ ಕಾರ್ಯಕ್ರಮಕಕ್ಕೆ ಚಾಲನೆ ನೀಡಿ, ಮಾತನಾಡಿ, ಲಯನ್ ಸಂಸ್ಥೆ ಒಂದು ಸೇವಾ ಮನೋಭಾವ ಇರುವ ಸಂಸ್ಥೆ. ಒಂದು ಶಾಲೆ ನಡೆಸುವುದು ಸುಲಭದ ಮಾತಲ್ಲ. ಲಯನ್ಸ್ ಶಾಲೆಯು 43 ವರ್ಷಗಳಿಂದ ತುಂಬಾ ಕಡಿಮೆ ಶುಲ್ಕದಲ್ಲಿ ಉತ್ತಮ ವಿದ್ಯಾಭ್ಯಾಸ ನೀಡುತ್ತಾ ಬಂದಿದೆ.

ಈ ಶಾಲೆಗೆ ಕಳೆದ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನೂರಕ್ಕೆ ನೂರರಷ್ಟು ಫಲಿತಾಂಶ ಬಂದಿದ್ದು, ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನನ್ನ ಕ್ಷೇತ್ರದ 7 ಶಾಲೆಗಳಲ್ಲಿ ನೂರಕ್ಕೆ ನೂರಷ್ಟು ಫಲಿತಾಂಶ ಬಂದಿರುತ್ತದೆ. ಅದರಲ್ಲಿ ಈ ಲಯನ್ಸ್ ಶಾಲೆಯೂ ಇರುವುದು ಹೆಮ್ಮೆಯ ವಿಷಯ. ಶಾಲೆ ಅಭಿವೃದ್ಧಿಗೋಸ್ಕರ ಶೌಚಾಲಯ ನಿರ್ಮಾಣಕ್ಕೆ ಶಾಸಕರ ನಿಧಿಯಿಂದ 15 ಲಕ್ಷ ರೂ. ನೀಡುವುದಾಗಿ ಘೋಷಿಸಿದರು.

ಸಂಸ್ಥೆಯ ಖಜಾಂಚಿ ಲಯನ್ ಲೋಕೇಶ್ ಅವರು ತಮ್ಮ ಧರ್ಮಪತ್ನಿ ದಿವಂಗತ ಲೀನಾ ಲೋಕೇಶ್ ಸವಿನೆನಪಿಗಾಗಿ ಕಳೆದ ಸಾಲಿನ ಎಲ್ಲಾ ತರಗತಿಯ ಟಾಪರ್ ವಿದ್ಯಾರ್ಥಿಗಳಿಗೆ ನಗದು ಹಾಗೂ ಪಾರಿತೋಷಕ ನೀಡಿ ಮಕ್ಕಳಿಗೆ ಪ್ರೋತ್ಸಾಹ ನೀಡುತ್ತಿರುವುದು ಹೆಮ್ಮೆಯ ವಿಷಯ ಎಂದು ಶಾಸಕರು ತಿಳಿಸಿದರು.

ಗೌರವ ಅತಿಥಿಗಳಾಗಿ ಡಿಡಿಪಿಐ ಜವರೇಗೌಡ, ಉತ್ತರ ವಲಯ ಬಿಇಓ ರೇವಣ್ಣ ಭಾಗವಹಿಸಿದ್ದರು. ಸಂಸ್ಥೆಯ ಚೇರ್ಮನ್ ಲಯನ್ ಶಿವಕುಮಾರ್, ಕಾರ್ಯದರ್ಶಿ ಲಯನ್ ಸಿ.ಮೋಹನ್‌ಕುಮಾರ್, ಖಜಾಂಚಿ ಲಯನ್ ಜೆ.ಲೋಕೇಶ್, ಲಯನ್ಸ್ ಕ್ಲಬ್ ಆಫ್ ಮೈಸೂರ್ ಅಧ್ಯಕ್ಷ ಲಯನ್ ಬಿ.ಶಿವಣ್ಣ, ಪ್ರಾಂತೀಯ ಅಧ್ಯಕ್ಷರಾದ ಬಿ.ಎಲ್.ಗಿರೀಶ್, ಶಾಲಾ ಮುಖ್ಯ ಶಿಕ್ಷಕಿ ಹೇಮಾವತಿ ಉಪಸ್ಥಿತರಿದ್ದರು. ನಂತರ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನೆರವೇರಿತು.

ಸಂಸದ ಜಿ.ಕುಮಾರ್ ನಾಯಕ್ ಅಭಿಮಾನಿಗಳ ಸಂಘದಿಂದ 2025ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ



ಸಂಸದ ಜಿ.ಕುಮಾರ್ ನಾಯಕ್ ಅಭಿಮಾನಿಗಳ ಸಂಘದ ಕ್ಯಾಲೆಂಡರ್ ಬಿಡುಗಡೆ

ಮೈಸೂರು,ಜ.19(ಜಿಎ)–ರಾಯಚೂರು–ಯಾದಗಿರಿ ಸಂಸದ ಜಿ.ಕುಮಾರ್ ನಾಯಕ್ ಅಭಿಮಾನಿಗಳ ಸಂಘದ ವತಿಯಿಂದ ಹೊರತಂದಿರುವ ನೂತನ ವರ್ಷದ ಕ್ಯಾಲೆಂಡರನ್ನು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಡುಗಡೆಗೊಳಿಸಿದರು.


ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, ಸ್ವಾತಂತ್ರ್ಯ ನಂತರ ತಮ್ಮ ಅಸ್ತಿತ್ವ ತೋರಿಸಿಕೊಳ್ಳಲು ಹಲವರು ಕ್ಯಾಲೆಂಡರ್ ಹೊರತರುವುದು ವಾಡಿಕೆ. ಇದರ ಅಗತ್ಯವೂ ಇದೆ. ಇನ್ನು, ವ್ಯಕ್ತಿ ಶಾಶ್ವತ ಅಲ್ಲ, ಆತನ ಕೆಲಸ ಶಾಶ್ವತವಾಗಿಸುವ ಕೆಲಸ ಕ್ಯಾಲೆಂಡರ್‌ಗಳು ಮಾಡುತ್ತಿವೆ. ಜಿ.ಕುಮಾರ ನಾಯಕ್ ಅವರೂ ಉತ್ತಮ ಆಡಳಿತಾಧಿಕಾರಿಯಾಗಿ, ಉತ್ತಮ ಸಂಸದರಾಗಿ ಹೆಸರು ಮಾಡಿದ್ದಾರೆ. ಅವರ ಗೌರವಾರ್ಥ ಅವರ ಅಭಿಮಾನಿಗಳು ಕ್ಯಾಲೆಂಡರ್ ಹೊರತಂದಿರುವುದು ಸ್ವಾಗತಾರ್ಹ ಎಂದರು. ಡಾ.ಬಸವರಾಜು, ಹರೀಶ್ ಹಳೇಬೀಡು, ಶಂಕರ್ ಉಪಸ್ಥಿತರಿದ್ದರು.

ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಕೆಸಿಇಟಿ ತರಗತಿ

ಮೈಸೂರು, ಜ. 19–ದೇಶದ ಪ್ರಮುಖ ಪರೀಕ್ಷಾ ತಯಾರಿ ಸೇವಾ ಸಂಸ್ಥೆ ಆಕಾಶ್ ಎಜುಕೇಶನಲ್ ಸರ್ವೀಸಸ್ ಲಿಮಿಟೆಡ್, ಕರ್ನಾಟಕದ ಕ್ಲಾಸ್ XI ಮತ್ತು XII ವಿದ್ಯಾರ್ಥಿಗಳಿಗಾಗಿ ಕೆಸಿಇಟಿ (ಕರ್ನಾಟಕ ಕಾಮನ್ ಎಂಟ್ರನ್ಸ್ ಟೆಸ್ಟ್) ಕೋರ್ಸ್‌ಗಳನ್ನು ಪ್ರಾರಂಭಿಸಿದೆ. ಈ ಕೋರ್ಸ್‌ಗಳು ವಿದ್ಯಾರ್ಥಿಗಳಿಗೆ ಪ್ರಾದೇಶಿಕ ಎಂಜಿನಿಯರಿಂಗ್ ಕಾಲೇಜು ಪ್ರವೇಶ ಪರೀಕ್ಷೆಗಳು ಮತ್ತು ಎಇಇ (ಮೇನ್)ನಲ್ಲಿ ಸಾಧಿಸಲು ಸಹಾಯ ಮಾಡುತ್ತವೆ. ಇಂಗ್ಲಿಷ್ ಭಾಷೆಯಲ್ಲಿ ನಡೆಸಲಾಗುವ ಈ ತರಗತಿಗಳು ಬೋರ್ಡ್ ಪರೀಕ್ಷೆಗಳು ಮುಗಿದ ನಂತರ ಆರಂಭವಾಗಲಿವೆ ಎಂದು ಆಕಾಶ್ ಎಜುಕೇಷನಲ್ ಸರ್ವಿಸಸ್ ಲಿಮಿಟೆಡ್‌ನ ಮುಖ್ಯ ವ್ಯವಹಾರ ಮತ್ತು ಅಕಾಡೆಮಿಕ್ ಮುಖ್ಯಸ್ಥರಾದ ಮಿಥ್ರಧಿರಾಜ್ ಕುಮಾರ್ ಮಿಶ್ರಾ ತಿಳಿಸಿದ್ದಾರೆ.

ಕೆಸಿಇಟಿ ಕೋರ್ಸುಗಳು ಆಕಾಶ್‌ನ ಪ್ರಾದೇಶಿಕ ಮಾರುಕಟ್ಟೆಗಳಲ್ಲಿ ತಮ್ಮ ಪ್ರಭಾವವನ್ನು ವಿಸ್ತರಿಸಲು ಮತ್ತು ರಾಜ್ಯ ಬೋರ್ಡ್ ವಿದ್ಯಾರ್ಥಿಗಳಿಗೆ ಸಿಬಿಎಸ್‌ಇ ಪಠ್ಯಕ್ರಮಗಳೊಂದಿಗೆ ಹೊಂದಾಣಿಕೆಯ ಗುಣಮಟ್ಟದ ತರಬೇತಿಯನ್ನು ನೀಡಲು ಉದ್ದೇಶಿಸಿರುವ ಸಮಗ್ರ ಯೋಜನೆಯ ಭಾಗವಾಗಿದೆ. ಇವು ರಾಜ್ಯ ಇಂಜಿನಿಯರಿಂಗ್ ಪ್ರವೇಶ ಮತ್ತು ರಾಷ್ಟ್ರೀಯ ಮಟ್ಟದ ಇಂಜಿನಿಯರಿಂಗ್ ಪ್ರವೇಶ ಪರೀಕ್ಷೆಗಳಿಗೆ ಸಿದ್ಧರಾಗಲು ವಿದ್ಯಾರ್ಥಿಗಳಿಗೆ ಸಮಗ್ರ ಮಾರ್ಗವನ್ನು ಒದಗಿಸುತ್ತವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.01.2025 ಭಾನುವಾರ, ಮಳೆ ನಕ್ಷತ್ರ: ಉತ್ತರಾಷಾಢ 11.01.2025ರಿಂದ 23.01.2025 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಹಸ್ತ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಡಯಾಬಿಟಿಕ್ ರೆಟಿನೋಪತಿ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :** ಬ್ರೈಡಲ್ ಜ್ಯೂವೆಲ್ಲರಿ ಶೋ, ಸ್ಥಳ: ಮೈಸೂರು ಶೋರೂಮ್, ಬಿ.ಎನ್. ರಸ್ತೆ, ಬೆಳಗ್ಗೆ 10 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ ಜಾನಪದ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ:** ಪ್ರೊ.ಮೊಗಳ್ಳಿ ಗಣೇಶ್ ಅವರ ‘ದಲಿತ ಜಾನಪದ’ ಕೃತಿ ಬಿಡುಗಡೆ ಕಾರ್ಯಕ್ರಮ, ಕೃತಿ ಬಿಡುಗಡೆ: ಪ್ರಗತಿಪರ ಚಿಂತಕ ಪ್ರೊ.ಕಾಳೇಗೌಡ ನಾಗವಾರ, ಉಪಸ್ಥಿತಿ: ಜಾನಪದ ವಿದ್ವಾಂಸ ಮೊಗಳ್ಳಿ ಗಣೇಶ್, ಅಧ್ಯಕ್ಷತೆ: ಜಾನಪದ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ. ಎಂ.ನಂಜಯ್ಯ ಹೊಂಗನೂರು, ಸ್ಥಳ: ಎಂಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಮಹಾನಗರಪಾಲಿಕೆ ನೌಕರರ ಸಹಕಾರ ಸಂಘ:** ಸರ್ವ ಸದಸ್ಯರ ಶ್ರಮದ ಫಲ ಶತಮಾನೋತ್ಸವ ಭವನ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸ್ಥಳ: ಡಿ.ಸುಬ್ಬಯ್ಯ ರಸ್ತೆ, (ನಂ.463/1, ಸಿ.ಹೆಚ್.–1/1) ಚಾಮರಾಜ ಮೊಹಲ್ಲಾ, ಬೆಳಗ್ಗೆ 11 ಗಂಟೆಗೆ.

■ **ಪರಂಪರೆ:** ಆಧ್ಯಾತ್ಮಿಕ ಉಪನ್ಯಾಸಗಳು, ಡಾ.ವೀಣಾ ಬನ್ನಂಜೆ ಅವರಿಂದ ಆಧ್ಯಾತ್ಮಿಕ ಉಪನ್ಯಾಸ, ವಿಷಯ: ವೈರಾಗ್ಯ ನಿಧಿ ಅಪ್ಲೆ, ಸ್ಥಳ: ಮೈಸೂರು ಕೆ.ವಾಸುದೇವಾಚಾರ್ಯ ಭವನ (ನಾದಬ್ರಹ್ಮ), ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ–ಡಾ.ಪರಮೇಶ್ವರ ಸಾಲಿಮಠ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಆಧಾರ ಶಿಲೆ–ಬಾನುಲಿ ಸರಣಿ, ಪ್ರಸ್ತುತಿ: ಡಾ.ರಾಮದಾಸ್ ರೆಡ್ಡಿ, 6.40–ಅರಿವಿನ ಶಿಖರ, ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ.ಆರ್. ಸುಧಾ, ಹಂಸಿನಿ. ಎಸ್.ಕುಮಾರ್, ವ್ಯಾಖ್ಯಾನ–ಡಾ.ಪ್ರದೀಪ್‌ಕುಮಾರ್ ಹೆಬ್ರಿ, 6.50–ರೈತರಿಗೆ ಸಲಹೆ, 7.15– “ಭರವಸೆ ಹೊನಲು–ವೈದ್ಯರ ಕಿವಿಮಾತು” ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, 8.30–ಕನ್ನಡ ಚಿತ್ರಗೀತೆಗಳು, 9.05–ಗರ್ಭಕಂಠದ ಕ್ಯಾನ್ಸರ್ ಕುರಿತು ಮಾಹಿತಿ, ಪ್ರಾಯೋಜಕರು: ಇಂಡಿಯನ್ ಕ್ಯಾನ್ಸರ್ ಸೊಸೈಟಿ, 9.10–ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ರಂಗಕರ್ಮಿ ಪ್ರಸನ್ನ ಅವರೊಂದಿಗೆ ಎಂ. ಶ್ರೀನಿವಾಸ್ ಅವರು ನಡೆಸಿದ್ದ ಸಂವಾದದ ಎರಡನೇ ಭಾಗ. 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಲಾಲ್‌ಗುಡಿ ಜಿ.ಜೆ.ಆರ್.ಕೃಷ್ಣನ್ ಮತ್ತು ವಿಜಯಲಕ್ಷ್ಮಿ–ಯುಗಳ ವಯೋಲಿನ್ ವಾದನ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಗೇಮ್ ಶೋ– ಪ್ರಸ್ತುತಿ: ದಿಗ್ವಿಜಯ್. ಬಿ, 12.05–ವನಿತಾ ವಿಹಾರ–ಮದುವೆ ಕಾರಣದ ಹಾಡುಗಳು ವಾಹ್ ತಂಡದ ಗೆಳತಿಯರಿಂದ ಕಾರ್ಯಕ್ರಮ ವೈವಿಧ್ಯ ಪ್ರಸ್ತುತಿ–ಮಂಜುಳಾ ಪುರಾಣಿಕ, 12.35–ದೇವರನಾಮ–ನಿತಿನ್ ರಾಜಾರಾಂ ಶಾಸ್ತ್ರಿ, 12.45–ನಮ್ಮ ಆರೋಗ್ಯ: ‘ಆಹಾರವೇ ಆರೋಗ್ಯ’ ಕುರಿತು ಮಂಡ್ಯ ಜಿಲ್ಲಾ ಆಯುಷ್ ಅಧಿಕಾರಿ ಡಾ.ಬಿ.ಎಸ್. ಸೀತಾಲಕ್ಷ್ಮೀ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 1.00–ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, ಗುಣಮಟ್ಟದ ಆರೋಗ್ಯ ಮತ್ತು ಶಿಕ್ಷಣ ಈ ಕುರಿತು ಮಾಹಿತಿ ನೀಡುತ್ತಾರೆ ಭವ್ಯ ಎನ್. 1.20–ಭಾವಗೀತೆಗಳು–ವಸಂತ ಪಿ.ಎಸ್., 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ವಿ.ಕೆ.ರಾಮನ್– ಕೊಳಲು ವಾದನ, 4.00–ಮಹಿಳಾರಂಗ–“ನಾನು ನನ್ನ ಕಂಪನಿ” ವಿವಿಧ ರೀತಿಯ ಉಪ್ಪಿನಕಾಯಿಗಳನ್ನು ಮನೆಯಲ್ಲಿಯೇ ತಯಾರಿಸುವ ಮೀರಾ ಅವರೊಂದಿಗೆ ಮಾತುಕತೆ. ಪ್ರಸ್ತುತಿ : ಸಹನ, 4.45–ಹಿಂದಿ ಪಾಠ –ಪ್ರಸ್ತುತಿ: ಶಾಂತಾ ಡಿ.ಕಿಣಿ, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50–ಕೃಷಿರಂಗ: ತೋಟಗಾರಿಕಾ ಇಲಾಖೆಯ ಅಭಿವೃದ್ಧಿ ಯೋಜನೆಗಳು ಈ ಕುರಿತು ಟಿ. ನರಸೀಪುರ ತಾಲೂಕು ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರಾದ ಎಂ. ಶಾಂತಾ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00–ಯುವವಾಣಿ, ರಾಷ್ಟ್ರೀಯ ಹೆಣ್ಣುಮಗುವಿನ ದಿನದ ಸಂದರ್ಭದಲ್ಲಿ ‘ಹೆಣ್ಣು ಮಕ್ಕಳ ಕನಸುಗಳು ಮತ್ತು ಆಕಾಂಕ್ಷೆಗಳು’ ಕುರಿತು ಮಾತುಕತೆ. ಭಾಗವಹಿಸುತ್ತಾರೆ– ಮೈಸೂರಿನ ಯುವರಾಜ ಕಾಲೇಜಿನ ವಿದ್ಯಾರ್ಥಿಗಳಾದ ಶ್ರೇಯಾ. ಜಿ.ಹೆಚ್, ಅನಾಮಿಕಾ ಸಿಂಘಾ, ಪ್ರಿಯಾ.ಕೆ.ವಿ ಮತ್ತು ಭುವನಾ.ಎಸ್.ಹೆಗ್ಡೆ, ನಡೆಸಿಕೊಡುತ್ತಾರೆ–ಚರಣ್. ಹೆಚ್. ಎನ್. 9.30–ಕರ್ನಾಟಕ ಶಾಸ್ತ್ರೀಯ ಸಂಗೀತ : ರಾಧಾ ಮತ್ತು ಜಯಲಕ್ಷ್ಮಿ–ಹಾಡುಗಾರಿಕೆ, 10.00 ರೂಪಕ–ಹರಿಯನ್ನರಸಿದ ವನಿತೆಯರು, ರಚನೆ ಮತ್ತು ಪ್ರಸ್ತುತಿ: ಡಾ.ಸುಕನ್ಯಾ ಪ್ರಭಾಕರ್, 10.30–ಸವಿನೆನಪು

ಮೈಸೂರು ಮಿತ್ರ

ಮೈಸೂರು ಲಿಟರರಿ ಫೆಸ್ಟ್ -2025

ಸಾಮಾಜಿಕ ಮಾಧ್ಯಮದಿಂದ ಜನರ ಸ್ವಾಭಾವಿಕ ಚಿಂತನೆ ಮೇಲೆ ಪ್ರತಿಕೂಲ ಪರಿಣಾಮ

●ಅಂಕಣಕಾರ ಪ್ರೊ. ಪಿ.ಸಾಯಿನಾಥ್ ಆತಂಕ ●ಅತಿರೇಕದ ಸಾಮಾಜಿಕ ಮಾಧ್ಯಮದ ಗೀಳು ●ಪುಸ್ತಕದ ಮಹತ್ವ, ಶ್ರೇಷ್ಠತೆ ಈಗ ಅರಿವಾಗುತ್ತಿದೆ ●ಕೇರಳ ಸರ್ಕಾರದಿಂದ ಪುಸ್ತಕ ಓದಿಗೆ ಉತ್ತೇಜನ ●ಕೃತಕ ಬುದ್ಧಿಮತ್ತೆ ಎರವಲು ಪಡೆದರೆ ಗೊಂದಲ ಖಚಿತ

ಮೈಸೂರು, ಜ.19(ಬಿಎಲ್‌ಯು)– ಸಾಮಾಜಿಕ ಮಾಧ್ಯಮಗಳು (ಸೋಷಿಯಲ್ ಮೀಡಿಯಾ) ಜನರ ಸ್ವಾಭಾವಿಕ ಚಿಂತನೆ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ ಎಂದು ಲೇಖಕರೂ ಆದ ಅಂಕಣಕಾರ ಡಾ.ಪಿ.ಸಾಯಿನಾಥ್ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಇಂದು ಮೈಸೂರು ಲಿಟರರಿ ಅಸೋಸಿಯೇಷನ್ ಆಯೋಜಿಸಿದ್ದ 6 ನೇ ಮೈಸೂರು ಲಿಟರರಿ ಫೆಸ್ಟ್ ಉದ್ಘಾಟಿಸಿ ಮಾತನಾಡಿದ ಅವರು, ಆಕ್ಸ್‌ಫರ್ಡ್ ಡಿಕ್ಷನರಿ ಪ್ರಕಾಶಕರು ಪ್ರತಿ ವರ್ಷ 'ವರ್ಲ್ಡ್ ಆಫ್ ದಿ ಇಯರ್' ಆಯೋಜಿಸುತ್ತಾರೆ. ಬ್ರೈನ್ ರಾಟ್ ಎಂಬುದು ಕಳೆದ ವರ್ಷದ ವಿಷಯ ವಸ್ತುವಾಗಿತ್ತು. ಅದರಲ್ಲಿ ಸಾಮಾಜಿಕ ಮಾಧ್ಯಮಗಳ ಗೀಳು ಜನರ ಸ್ವಾಭಾವಿಕ ಚಿಂತನೆಯನ್ನು ಯಾವ ರೀತಿ ಕುಗ್ಗಿಸುತ್ತಿದೆ, ಬುದ್ಧಿವಂತಿಕೆ ಹಾಗೂ ಚುರುಕುತನದ ಮೇಲೆ ಯಾವ ರೀತಿ ದುಷ್ಪರಿಣಾಮ ಬೀರುತ್ತದೆ ಎಂದು ವಿವರಿಸಲಾಯಿತು ಎಂದು ಪ್ರೊ.ಸಾಯಿನಾಥ್ ಹೇಳಿದರು.

ಗಂಟೆಗಟ್ಟಲೆ ಮೊಬೈಲ್ ಫೋನ್‌ನಲ್ಲಿ ಮಾತನಾಡುವುದು ಸೇರಿದಂತೆ ಸಾಮಾಜಿಕ ಮಾಧ್ಯಮಗಳಲ್ಲಿ ತಲ್ಲೀನವಾಗುವುದರಿಂದ ಜನರ ಚಿಂತನೆ ಕ್ಷೀಣಗೊಳ್ಳುತ್ತಿರುವುದನ್ನು ಅಲ್ಲಿ ವಿವರಿಸಿ ಹೇಳಲಾಯಿತು ಎಂದು ತಿಳಿಸಿದರು.

ಓವರ್ ದಿ ಟಾಪ್ (ಒಟಿಟಿ) ಪ್ಲಾಟ್‌ಫಾರ್ಮ್‌ಗಳಲ್ಲಿ ಸಿನಿಮಾ ಸೇರಿದಂತೆ ಹಲವು ಮನೋರಂಜನಾ ದೃಶ್ಯಗಳನ್ನು ಪ್ರದರ್ಶಿಸಲಾಗುತ್ತದೆ. ಇದರಿಂದ ಕೂಡ ನಮ್ಮ ಗ್ರಹಣ ಶಕ್ತಿ ಕ್ಷೀಣಿಸುತ್ತಿದೆ. ಅಲ್ಲದೆ ಮನುಷ್ಯನ ಮಾನಸಿಕ ಸಾಮರ್ಥ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಇದರಿಂದ ಜನರು ಗೊಂದಲದ ಸ್ಥಿತಿಯಲ್ಲಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಪುಸ್ತಕಗಳ ಅವಶ್ಯಕತೆ ಇಲ್ಲವೆಂದು ಸ್ವೀಡನ್‌ನಲ್ಲಿ ಆನ್‌ಲೈನ್ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೊಳಿಸಲಾಯಿತು. ಆದರೆ ತಾಂತ್ರಿಕ ಶಿಕ್ಷಣದಿಂದ ಯಾವುದೇ ಉಪಯೋಗವಿಲ್ಲವೆಂದು ಮತ್ತೆ ಪುಸ್ತಕ ರೂಪದ ಶಿಕ್ಷಣ ಜಾರಿಗೊಳಿಸಲಾಯಿತು. ಇದರಿಂದ ನಿಧಾನವಾಗಿ ಜನರಿಗೆ ಪುಸ್ತಕಗಳ ಮಹತ್ವ ಹಾಗೂ ಶ್ರೇಷ್ಠತೆ ಅರಿವಾಗುತ್ತಿದೆ ಎಂಬುದು ಸಮಾಧಾನದ ಸಂಗತಿ ಎಂದರು.

ಇತ್ತೀಚೆಗೆ ಪಿಹೆಚ್.ಡಿ ಪಡೆಯಲು ಪ್ರಬಂಧ ಮಂಡನೆಗೆ ಎಐ (ಕೃತಕ ಬುದ್ಧಿಮತ್ತೆ)ನಿಂದ ಕೆಲವು ವಿಚಾರಗಳನ್ನು ಎರವಲು ಪಡೆಯುತ್ತಾರೆ. ಜೊತೆಗೆ ತಾವು ಸಂಶೋಧನೆ ಮಾಡಿದ ವಿಚಾರಗಳನ್ನು ಕೂಡ ಉಲ್ಲೇಖಿಸಿರುತ್ತಾರೆ. ಅಂತಿಮವಾಗಿ ಪಿಹೆಚ್.ಡಿ ಪ್ರಬಂಧ ಮಂಡಿಸುವ ಸಂದರ್ಭದಲ್ಲಿ ಕಣ್ಣಾಡಿಸಿದಾಗ ಎಐನಿಂದ ಎರವಲು ಪಡೆದ ವಿಚಾರಗಳು ಯಾವುವು, ತಾವು ಉಲ್ಲೇಖಿಸಿದ ವಿಚಾರಗಳು



ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಭಾನುವಾರ ಮೈಸೂರು ಲಿಟರರಿ ಅಸೋಸಿಯೇಷನ್ ಆಯೋಜಿಸಿದ್ದ ಮೈಸೂರು ಲಿಟರರಿ ಫೆಸ್ಟ್‌ನ್ನು ಅಂಕಣಕಾರ ಪ್ರೊ.ಪಿ.ಸಾಯಿನಾಥ್ ಉದ್ಘಾಟಿಸಿದರು. (ಎಡದಿಂದ) ಮೈಸೂರು ಲಿಟರರಿ ಅಸೋಸಿಯೇಷನ್ ಕಾರ್ಯದರ್ಶಿ ಡಾ. ರೆಜಿನಾಲ್ಡ್ ವೆಸ್ಲಿ, ಕಾರ್ಯಕಾರಿ ಸಮಿತಿ ಸದಸ್ಯೆ ನಿರ್ಮಲಾ ಚಂದ್ರಪ್ರಕಾಶ್, ಹರಿದಾಸ್, ಅಸೋಸಿಯೇಷನ್ ಅಧ್ಯಕ್ಷ ಪ್ರೊ.ಕೆ.ಸಿ.ಬೆಳ್ಳಿಯಪ್ಪ, ನಿವೃತ್ತ ಐಎಎಸ್ ಅಧಿಕಾರಿ ಎ.ಕೆ.ಮೊನ್ನಪ್ಪ, ಕಾರ್ಯಕಾರಿ ಸಮಿತಿ ಸದಸ್ಯ ಪ್ರೊ.ಸಿ.ನಾಗಣ್ಣ, ಪ್ರೊ.ಬಾಲಾಜಿ, ಸಹಾಯಕ ಪ್ರಾಧ್ಯಾಪಕ ಬಿ.ಚೇತನ್, ಕಾರ್ಯಕಾರಿ ಸಮಿತಿ ಸದಸ್ಯೆ ಅನಿತಾ ವಿಮಲಾ ಬ್ರಾಗ್ಸ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಯಾವುವು ಎಂದು ತಿಳಿಯದೆ ಅಭ್ಯರ್ಥಿ ಗೊಂದಲಕ್ಕೀಡಾಗುತ್ತಾರೆ ಎಂದು ಪ್ರೊ.ಸಾಯಿನಾಥ್ ಹೇಳಿದರು.

ಲೇಖಕರೆ ಆಗಲಿ ಅಥವಾ ಪಿಹೆಚ್.ಡಿ ಪ್ರಬಂಧ ಮಂಡಿಸುವವರಾಗಲೀ ಒಂದು ಸ್ಥಳದಲ್ಲಿ ಕುಳಿತು ತಮ್ಮ ಚಿಂತನೆಗೆ ಬಂದ ವಿಚಾರವನ್ನು ಉಲ್ಲೇಖಿಸುವುದರ ಜೊತೆಗೆ ವಿಷಯ ವಸ್ತುವಿಗೆ ಸಂಬಂಧಿಸಿದ ಸ್ಥಳಕ್ಕೆ ಹೋಗಿ ಅಧ್ಯಯನ ಮಾಡಬೇಕು ಎಂದು ಸಲಹೆ ನೀಡಿದರು.

ಆಧುನಿಕ ತಂತ್ರಜ್ಞಾನದ ಅಳವಡಿಕೆ ಬೇಡವೇ ಬೇಡ ಎಂದು ನಾನು ಹೇಳುವುದಿಲ್ಲ. ಆದರೆ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಅಧ್ಯಯನ ಮಾಡಿದರೆ ವಿಚಾರಗಳು ಅಪೂರ್ಣವಾಗುತ್ತದೆ. ಅದೇ ಪುಸ್ತಕಗಳನ್ನು ಓದಿದರೆ ವಿಚಾರ ಮಂಥನವಾಗುತ್ತದೆ. ಇದರಿಂದ ಪರಿಪೂರ್ಣ ಚಿಂತನೆಗೆ ಬರುತ್ತದೆ ಎಂದು ಅಭಿಪ್ರಾಯಪಟ್ಟರು.

ಕೇರಳದಲ್ಲಿ ಪುಸ್ತಕ ಓದಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತದೆ. ಕಳೆದ ವರ್ಷ ತಿರುವಂತನಪುರದಲ್ಲಿ ಪುಸ್ತಕ ಮೇಳ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ 166 ಪುಸ್ತಕ ಮಳಿಗೆಯನ್ನು ತೆರೆಯಲಾಗಿತ್ತು. 8.5 ಕೋಟಿ ರೂಪಾಯಿ ವಹಿವಾಟು ನಡೆಯಿತು. ಈ ಬಾರಿಯ ಪುಸ್ತಕ ಮೇಳದಲ್ಲಿ 10 ಕೋಟಿಗೂ ಮೀರಿ ವಹಿವಾಟು ನಡೆಸುವ ಗುರಿ ಹೊಂದಲಾಗಿದೆ ಪುಸ್ತಕ ಓದಿಗೆ ಕೇರಳ ಜನರು ಯಾವ ರೀತಿ ಸಕಾರಾತ್ಮಕವಾಗಿ ಸ್ಪಂದಿಸುತ್ತಾರೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ ಎಂದರು.

ಕೇರಳದಲ್ಲಿ ಪ್ರತಿಯೊಬ್ಬ ಶಾಸಕನಿಗೆ ವರ್ಷಕ್ಕೆ ತಲಾ 3 ಲಕ್ಷ ರೂಪಾಯಿ ಪ್ರತ್ಯೇಕ ಅನುದಾನ ನೀಡಲಾಗುತ್ತದೆ. ಶಾಸಕ ತನ್ನ ವಿಧಾನಸಭಾ ಕ್ಷೇತ್ರದ ಶಾಲಾ ಕಾಲೇಜುಗಳಲ್ಲಿ ಪುಸ್ತಕ ಖರೀದಿಗೆ ಈ ಅನುದಾನ ವ್ಯಯಿಸುತ್ತಾನೆ. ಪುಸ್ತಕ ಓದಿಗೆ ಕೇರಳ ಸರ್ಕಾರ ಉತ್ತೇಜಿಸುವಂತೆ ದೇಶದ ಎಲ್ಲಾ ರಾಜ್ಯಗಳು ಇದೇ ಮಾದರಿ ಅನುಸರಿಸಬೇಕು ಎಂದು ಪ್ರೊ.ಸಾಯಿನಾಥ್ ಸಲಹೆ ನೀಡಿದರು.

ಗಾಂಧೀಜಿ ಅವರ ಸ್ವರಾಜ್ ಹಾಗೂ ಅಂಬೇಡ್ಕರ್ ಅವರ ಸಾಮಾಜಿಕ ಕ್ರಾಂತಿಯ ಪುಸ್ತಗಳನ್ನು ಖರೀದಿಸಿ ಓದಬೇಕು. ಇಂತಹ ಓದು ಮನುಷ್ಯನ ಚಿಂತನಾ ಲಹರಿಗೆ ಪೂರಕವಾಗಿರುತ್ತದೆ ಎಂದು ಕಿವಿಮಾತು ಹೇಳಿದರು.


ಪತ್ರಕರ್ತರು ಸಾಮಾಜಿಕ ಸಮಸ್ಯೆಗಳ ಬಗ್ಗೆ ಹೆಚ್ಚಿನ ಒಲವು ತೋರಬೇಕು. ದೆಹಲಿಯಲ್ಲಿ ರೈತರು ಪ್ರತಿಭಟನೆ ನಡೆಸುವಾಗ ಪೊಲೀಸ್ ಸರ್ಪಗಾವಲು ಹಾಕಲಾಗಿತ್ತು. ಈ ಸಂದರ್ಭದಲ್ಲಿ ರೈತ ಸಂಘಟನೆಯ ಹೋರಾಟದ ಬಗ್ಗೆ ಪತ್ರಕರ್ತರು ಹೆಚ್ಚಿನ ಮಹತ್ವ ನೀಡಬೇಕಿತ್ತು. ಆದರೆ ಇದು ಸಾಧ್ಯವಾಗದಿರುವುದು ಬೇಸರದ ಸಂಗತಿ ಎಂದರು.

ಕೊರೊನಾ ವೇಳೆ ದೇಶದ ಜನರು ತತ್ತರಿಸಿದ್ದರು. ಭಾರತದಲ್ಲಿ 4.7 ಲಕ್ಷ ಜನರು ಕೊರೊನಾದಿಂದ ಮೃತಪಟ್ಟಿದ್ದಾರೆಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ. ಈ ಸಂದರ್ಭದಲ್ಲಿ ಲಕ್ಷಾಂತರ ಜನರು ವಲಸೆ ಹೋದರು. ಕೇವಲ ಮೂರು ತಿಂಗಳ ಅವಧಿಯಲ್ಲಿ 90 ಲಕ್ಷ ಜನರು ಶ್ರಮಿಕ ರೈಲಿನಲ್ಲಿ ಪ್ರಯಾಣ ಮಾಡಿದ್ದಾರೆಂದು ಕೇಂದ್ರ ಸರ್ಕಾರ ಮಾಹಿತಿ ನೀಡಿತು. ಆದರೆ ಆರಂಭದಿಂದ ಕೊನೆತನಕ ಶ್ರಮಿಕ ರೈಲಿನಲ್ಲಿ ಪ್ರಯಾಣ ಮಾಡಿದವರ ಬಗ್ಗೆ ಡೇಟಾ ಸಂಗ್ರಹಿಸಿದ್ದರೆ 2 ಕೋಟಿ ಮೀರುತ್ತಿತ್ತು ಎಂದರು.

ಉದ್ಘಾಟನಾ ವೇಳೆ ಮೈಸೂರು ಲಿಟರರಿ ಅಸೋಸಿಯೇಷನ್‌ನ ಅಧ್ಯಕ್ಷ ಪ್ರೊ.ಕೆ.ಸಿ.ಬೆಳ್ಳಿಯಪ್ಪ, ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ.ರೆಜಿನಾಲ್ಡ್ ವೆಸ್ಲಿ, ಪ್ರೊ.ಸಿ.ನಾಗಣ್ಣ, ಅನಿತಾ ವಿಮಲಾ ಬ್ರಾಗ್ಸ್, ಹರಿದಾಸ್, ನಿವೃತ್ತ ಐಎಎಸ್ ಅಧಿಕಾರಿ ಎ.ಕೆ.ಮೊನ್ನಪ್ಪ, ಸಹಾಯಕ ಪ್ರಾಧ್ಯಾಪಕ ಬಿ.ಚೇತನ್ ಹಾಜರಿದ್ದರು.

ಕನ್ನಡದ ಮಹಿಳಾ ಕಾವ್ಯ ಪರಂಪರೆಯಲ್ಲಿ

ವಿಮೋಚನೆಯ ಪರಮೋಚ್ಚ ಸಂಕೇತ ಅಕ್ಕಮಹಾದೇವಿ



ವಿಮರ್ಶಕ ಪ್ರೊ.ರಾಜೇಂದ್ರ ಚೆನ್ನಿ ಅಭಿಮತ

ಮೈಸೂರು,ಜ.19(ಪಿಎಂ)– ಕನ್ನಡದ ಮಹಿಳಾ ಕಾವ್ಯ ಪರಂಪರೆಯಲ್ಲಿ ಅಕ್ಕಮಹಾದೇವಿ ವಿಮೋಚನೆಯ ಪರಮೋಚ್ಚ ಸಂಕೇತವಾಗಿ ನಿಲ್ಲುತ್ತಾರೆ ಎಂದು ಶಿವಮೊಗ್ಗದ ಮಾನಸ ಸಾಂಸ್ಕೃತಿಕ ಅಧ್ಯಯನ ಕೇಂದ್ರದ ನಿರ್ದೇಶಕರೂ ಆದ ಸಾಹಿತ್ಯ ಮತ್ತು ಸಾಂಸ್ಕೃತಿಕ ವಿಮರ್ಶಕ ಪ್ರೊ. ರಾಜೇಂದ್ರ ಚೆನ್ನಿ ಅಭಿಪ್ರಾಯಪಟ್ಟರು.

ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಭಾನುವಾರ ನಡೆದ 6ನೇ ಆವೃತ್ತಿಯ ಮೈಸೂರು ಲಿಟರರಿ ಫೆಸ್ಟ್‌ನಲ್ಲಿ (ಆಂಗ್ಲ ಭಾಷಾ ಸಾಹಿತ್ಯೋತ್ಸವ) 'ಕನ್ನಡದಲ್ಲಿ ಮಹಿಳಾ ಕಾವ್ಯ (Conformity and Transgression: Women Poetry in Kannada)' ಕುರಿತು ಅವರು ಮಾತನಾಡಿದರು.

ಅಕ್ಕಮಹಾದೇವಿಯನ್ನು ಕೇವಲ ಭಕ್ತಿ ಸಾಹಿತ್ಯ ಪರಂಪರೆಗೆ ಹಾಗೂ ವಚನಗಳಿಗೆ ಸೀಮಿತಗೊಳಿಸುವುದು ಸರಿಯಾದ ವ್ಯಾಖ್ಯಾನವಲ್ಲ. ಭಾರತೀಯ ಸಾಹಿತ್ಯದಲ್ಲಿ ಅಕ್ಕಮಹಾದೇವಿಯನ್ನು ಬಂಡಾಯದ ಕವಯಿತ್ರಿಯಾಗಿ ಗುರುತಿಸಬೇಕು. ಅಕ್ಕಮಹಾದೇವಿ ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಿರುವುದು ಮಾತ್ರವಲ್ಲದೆ, ಪುರುಷರ ಕಾಮುಕ ಕಣ್ಣುಗಳ ವಿರುದ್ಧವೂ ತಮ್ಮ ವಚನಗಳ ಮೂಲಕ ಚಾಟಿ ಬೀಸಿದ್ದಾರೆ ಎಂದು ತಿಳಿಸಿದರು.

ಬಹುಶಃ ಮಹಿಳೆಯರ ಮೇಲೆ ಪುರುಷರು ನಡೆಸುವ ಲೈಂಗಿಕ ಶೋಷಣೆ ಬಗ್ಗೆ ಕನ್ನಡ ಕಾವ್ಯ ಪರಂಪರೆಯಲ್ಲಿ ಬರೆದ ಮೊದಲ ಕವಿಯತ್ರಿ ಅಕ್ಕಮಹಾದೇವಿ. 'ಎನ್ನನೇಕೆ ನೋಡುವಿರಿ ಎಲೆ ಅಣ್ಣಗಳಿರಾ?' ಎಂಬ ವಚನದ ಮೂಲಕ ಪುರುಷರ ಕಾಮುಕ ನೋಟವನ್ನು ಅವರು ತೀವ್ರವಾಗಿ ಅಣುಕಿಸಿದ್ದಾರೆ. ಪುರುಷರ ಕೆಟ್ಟ ನೋಟವು ಮಹಿಳೆಯರ ಮೇಲೆ ಬೀಳುವ ಹಿನ್ನೆಲೆಯನ್ನು ಬಹಳ ಕಟು ಶಬ್ದಗಳಲ್ಲಿ ಅವರು ವಿವರಿಸಿದ್ದಾರೆ ಎಂದರು.

ನಮ್ಮ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ ಮತ್ತು ಅಭಿವ್ಯಕ್ತಿಗೆ ಸಂಬಂಧಿಸಿದಂತೆ ನಾವು ವೈರುಧ್ಯದ ಜಗತ್ತಿನಲ್ಲಿ ಬದುಕುತ್ತಿದ್ದೇವೆ ಎಂದು ಭಾವಿಸುತ್ತೇನೆ. ಒಂದೆಡೆ ಮಹಿಳೆಯರಿಗೆ ನಿರಾಕರಿಸಲ್ಪಟ್ಟ ಸಾಮಾಜಿಕ ಸ್ಥಳಗಳಿಗೆ ಪ್ರಸ್ತುತದಲ್ಲಿ ಪ್ರವೇಶಾವಕಾಶ ಲಭಿಸಿದೆ. ಮತ್ತೊಂದೆಡೆ ಮಹಿಳೆಯರು ತಮ್ಮ ಹಕ್ಕುಗಳಿಗೆ ಮಾತ್ರವಲ್ಲದೆ, ಸಾಹಿತ್ಯ ಮತ್ತು ಕಲೆಯಲ್ಲಿ ಅವರ ಅಭಿವ್ಯಕ್ತಿಗೂ ನಿರಂತರ ಹೋರಾಟ ನಡೆಸುತ್ತಿರುವುದನ್ನೂ ಕಾಣಬಹುದು. ಇದೇ ಸಮಯದಲ್ಲಿ ಮಹಿಳೆಯರನ್ನು ಹಿಂಜರಿಯುವಂತೆ ಮಾಡುತ್ತಿರುವ ಶಕ್ತಿಗಳೂ ಇರುವುದು ದುಃಖಕರ ಎಂದು ವಿಷಾದಿಸಿದರು.

ಇಂತಹ ಶಕ್ತಿಗಳು ಮಹಿಳೆಯರ ವಿರುದ್ಧ ಪೂರ್ವಾಗ್ರಹಪೀಡಿತ ಸನ್ನಿವೇಶಕ್ಕೆ ಮರಳುವಂತೆ ಒತ್ತಡ ಹೇರುತ್ತಿವೆ. ಒಂದೆಡೆ ನಮ್ಮ ಸಮಾಜದ ಅನೇಕ ಕ್ಷೇತ್ರಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಇದ್ದರೂ ಅದೇ ಸಮಯದಲ್ಲಿ ಅನೇಕ ವರ್ಗಗಳ ಮಹಿಳೆಯರು ಎಲ್ಲದ್ದರಿಂದಲೂ ವಂಚಿತರಾಗುತ್ತಿದ್ದಾರೆ. ಮಹಿಳಾ ಸಮಸ್ಯೆಗಳು ಹಾಗೂ ಅದಕ್ಕೆ ಸೂಕ್ತ ಪರಿಹಾರಗಳ ಮೇಲೆ ಕನ್ನಡದ ಮಹಿಳಾ ಕವಯಿತ್ರಿಯರು ಸಹ ತಮ್ಮ ಬರವಣಿಗೆಯಲ್ಲಿ ಬೆಳಕು ಚೆಲ್ಲಿದ್ದಾರೆ. ಕನ್ನಡದ ಆಧುನಿಕ ಮಹಿಳಾ ಕಾವ್ಯ ಪರಂಪರೆಗೆ ಈಗ 80 ವರ್ಷಗಳು ತುಂಬಿವೆ ಎಂದು ತಿಳಿಸಿದರು.

ಸದ್ಯ ಕಾವ್ಯದ ಮೇಲಿಲ್ಲ ಜಿಎಸ್‌ಟಿ!

ಕಾವ್ಯದ ಮೇಲೆ, ಅದರಲ್ಲಿಯೂ ಮಹಿಳೆಯರ ಕಾವ್ಯದ ಮೇಲೆ ಭಾರೀ ಜಿಎಸ್‌ಟಿ ವಿಧಿಸದಿದ್ದಕ್ಕಾಗಿ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಧನ್ಯವಾದ ಹೇಳುವ ಮೂಲಕ ಗೋಷ್ಠಿಯನ್ನು ಪ್ರಾರಂಭಿಸುತ್ತೇನೆ. ಜೊತೆಗೆ ಕವಿತೆಗಳು ತುಂಬಾ ಅಪಾಯಕಾರಿ ಎಂದು ಸದ್ಯ ಇನ್ನೂ ಘೋಷಿಸದ ಎಲ್ಲಾ ಸರ್ಕಾರಗಳಿಗೂ ಧನ್ಯವಾದ ಹೇಳಬಯಸುತ್ತೇನೆ ಎಂದು ಪ್ರೊ.ರಾಜೇಂದ್ರ ಚೆನ್ನಿ ವ್ಯಂಗ್ಯವಾಡಿದರು.

ಕ್ಯಾನ್ಸರ್ ಬರಲು ಕಾರಣವಾಗಿರುವ

ಧೂಮಪಾನ ನಿಷೇಧಿಸಲು ಆದಾಯದ ದೃಷ್ಟಿಯಿಂದ ಸರ್ಕಾರ ಹಿಂದೇಟು

ಭಾರತ್ ಕ್ಯಾನ್ಸರ್ ಆಸ್ಪತ್ರೆ ಮುಖ್ಯಸ್ಥ ಡಾ. ಬಿ.ಎಸ್.ಅಜಯ್ ಕುಮಾರ್ ವಿಷಾದ

ಮೈಸೂರು, ಜ.19–ಆದಾಯ ಗಳಿಕೆಯ ದೃಷ್ಟಿಯಿಂದ ಕ್ಯಾನ್ಸರ್‌ಗೆ ಕಾರಣವಾಗಿರುವ ಧೂಮಪಾನ ನಿಷೇಧಿಸಲು ಸರ್ಕಾರ ಹಿಂದೇಟು ಹಾಕುತ್ತಿದೆ ಎಂದು ಭಾರತ್ ಕ್ಯಾನ್ಸರ್ ಆಸ್ಪತ್ರೆಯ ಮುಖ್ಯಸ್ಥ ಡಾ. ಬಿ.ಎಸ್.ಅಜಯ್ ಕುಮಾರ್ ವಿಷಾದಿಸಿದರು.



ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಮೈಸೂರು ಲಿಟರರಿ ಅಸೋಸಿಯೇಷನ್ ಆಯೋಜಿಸಿದ್ದ 'ಲಿಟರರಿ ಫೆಸ್ಟ್'ನಲ್ಲಿ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಶೇ.40ರಷ್ಟು ರೋಗಿಗಳಿಗೆ ಧೂಮಪಾನದಿಂದಾಗಿಯೇ ಕ್ಯಾನ್ಸರ್ ಬರುತ್ತಿದೆ. ಹೀಗಾಗಿ ತಾವು ದೇಶದಲ್ಲಿ ಧೂಮಪಾನ ನಿಷೇಧಿಸುವಂತೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಮನವಿ ಮಾಡಿದ್ದಾಗಿ ತಿಳಿಸಿದ ಅವರು, ಸರ್ಕಾರಕ್ಕೆ ಆದಾಯ ಗಳಿಕೆ ಕಾರಣದಿಂದಾಗಿ ಧೂಮಪಾನ ನಿಷೇಧ ಸಾಧ್ಯವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಜನರ ಆರೋಗ್ಯ ಕಾಪಾಡಲು ಯೋಜನೆವೊಂದನ್ನು ರೂಪಿಸಬೇಕಾಗಿದೆ. ದೇಶದಲ್ಲಿ ಯುನಿವರ್ಸಲ್ ಹೆಲ್ತ್‌ಕೇರ್‌ನ ಅಗತ್ಯವಿದೆ. ಗ್ರಾಮೀಣ ಪ್ರದೇಶದ ಮಕ್ಕಳಿಗೆ ಶಿಕ್ಷಣದ ನೆರವು ಬೇಕಾಗಿದೆ ಎಂದರು.

ನಾನು 1975ರಲ್ಲಿ ಅಮೇರಿಕಾಗೆ ಹೋದೆ. ಅಲ್ಲಿ ಕ್ಯಾನ್ಸರ್ ಚಿಕಿತ್ಸೆಗೆ ಸಂಬಂಧಿಸಿದಂತೆ ಸುಧಾರಿತ ತಂತ್ರಜ್ಞಾನ ಬಳಕೆಯಾಗುತ್ತಿತ್ತು. 20 ವರ್ಷದ ಬಳಿಕ ಭಾರತಕ್ಕೆ ವಾಪಸ್ಸಾದ ನಾನು ಕ್ಯಾನ್ಸರ್ ರೋಗಿಗಳಿಗೆ ಗುಣಮಟ್ಟದ ಚಿಕಿತ್ಸಾ ಸೌಲಭ್ಯ ನೀಡುವುದಕ್ಕಾಗಿ ಮೈಸೂರಿನಲ್ಲಿ ಲಾಭದಾಯಕವಲ್ಲದ ಚಿಕಿತ್ಸಾ ಕೇಂದ್ರ ಸ್ಥಾಪಿಸಬೇಕೆಂಬ ಉದ್ದೇಶದಿಂದ ಭಾರತ್ ಕ್ಯಾನ್ಸರ್ ಆಸ್ಪತ್ರೆ ಸ್ಥಾಪಿಸಿದ್ದಾಗಿ ಅವರು ಹೇಳಿದರು.

ಬಡವ–ಶ್ರೀಮಂತರೆಂಬ ಭೇದ–ಭಾವವಿಲ್ಲದೆ ಎಲ್ಲಾ ವರ್ಗದವರಿಗೂ ಕ್ಯಾನ್ಸರ್ ಬರುತ್ತಿದೆ. ಪುರುಷರು ಮಾತ್ರವಲ್ಲದೆ, ಮಹಿಳೆಯರೂ ಕೂಡ ವಿವಿಧ ಬಗೆಯ ಕ್ಯಾನ್ಸರ್‌ಗೆ ತುತ್ತಾಗುತ್ತಿದ್ದಾರೆ. ಈ ಹಿಂದೆ ಚಿಕಿತ್ಸೆಗಾಗಿ ಈ ರೋಗಿಗಳು ವಿವಿಧೆಡೆಗೆ ಹೋಗಬೇಕಾದಂತಹ ಪರಿಸ್ಥಿತಿ ಇತ್ತು. ಅದನ್ನು ತಪ್ಪಿಸುವ ಸಲುವಾಗಿ ಮೈಸೂರಿನಲ್ಲಿ ಭಾರತ್ ಕ್ಯಾನ್ಸರ್ ಆಸ್ಪತ್ರೆ ಸ್ಥಾಪಿಸಲಾಯಿತು ಎಂದು ಹೇಳಿದರು.

ಕಥೆ ಹೇಳುವುದು ಮನುಕುಲದ ಸ್ವಾಭಾವಿಕ ಗುಣ

ವೃತ್ತಿಪರ ಕಥೆಗಾರ್ತಿ ಲಾವಣ್ಯ ಪ್ರಸಾದ್ ಅಭಿಮತ

ಮೈಸೂರು,ಜ.19(ಪಿಎಂ)– ಕಥೆ ಹೇಳುವುದು ಮನುಕುಲದ ಸ್ವಾಭಾವಿಕ ಗುಣ. ಪ್ರತಿಯೊಬ್ಬರು ತಮ್ಮ ಪ್ರತಿನಿತ್ಯದ ಜೀವನದಲ್ಲಿ ಒಬ್ಬರಿಗೊಬ್ಬರು ಕಥೆ ಹೇಳುವ–ಕೇಳುವ ಸನ್ನಿವೇಶ ಇದ್ದೇ ಇರುತ್ತದೆ ಎಂದು ವೃತ್ತಿಪರ ಕಥೆಗಾರ್ತಿ ಲಾವಣ್ಯ ಪ್ರಸಾದ್ ಹೇಳಿದರು.



ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಭಾನುವಾರ ನಡೆದ 6ನೇ ಆವೃತ್ತಿಯ ಮೈಸೂರು ಲಿಟರರಿ ಫೆಸ್ಟ್‌ನಲ್ಲಿ (ಆಂಗ್ಲ ಭಾಷಾ ಸಾಹಿತ್ಯೋತ್ಸವ) 'ನಿಮ್ಮ ಕಥೆ ಏನು? (Whats your Story?)' ಕುರಿತು ಅವರು ಮಾತನಾಡಿದರು.

ನೀವು ಕೊನೆ ಬಾರಿಗೆ ಕಥೆ ಹೇಳಿದ್ದು ಯಾವಾಗ ಎಂದು ಸಭಿಕರನ್ನು ಅವರು ಪ್ರಶ್ನಿಸಿದ ಕೂಡಲೇ ಶಾಲಾ ದಿನಗಳಲ್ಲಿ, ಮೂರು ದಿನಗಳ ಹಿಂದೆಯಷ್ಟೇ ಕೇಳಿದೆ ಎಂಬಿತ್ಯಾದಿ ಉತ್ತರಗಳು ಸಭಿಕರ ಸಾಲಿನಿಂದ ಬಂದವು.

ಇದಕ್ಕೆ ಪ್ರತಿಕ್ರಿಯಿಸಿ ಲಾವಣ್ಯ ಪ್ರಸಾದ್, ನಮ್ಮ ನಿತ್ಯದ ಜೀವನದಲ್ಲಿ ಪರಸ್ಪರರು ತಮ್ಮ ಅನುಭವಗಳ ಹಿನ್ನೆಲೆಯಲ್ಲಿ ಕಥೆ ಹೇಳುತ್ತಲೇ ಇರುತ್ತೇವೆ. ಕಚೇರಿಗೆ ತಡವಾಗಿ ತೆರಳಿದ ಬಗ್ಗೆ ಬಾಸ್ ಬಳಿ ವಿವರಣೆ ಕೊಡುವುದೂ ಕಥೆ ಹೇಳುವುದೇ ಆಗಿದೆ. ಇಡೀ ಮನುಕುಲವೇ ಸ್ವಾಭಾವಿಕವಾಗಿ ಕಥೆ ಹೇಳುವ ಗುಣವನ್ನು ಹೊಂದಿದೆ ಆದರೆ ಆ ಬಗ್ಗೆ ನಮಗೆ ಅರಿವಿಲ್ಲವಷ್ಟೇ ಎಂದು ತಿಳಿಸಿದರು.

ನನ್ನ ಅಜ್ಜ ನನಗೆ ನೀಡಿದ ಅಮೂಲ್ಯವಾದ ಕಲೆ ಎಂದರೆ ಕಥೆ ಹೇಳುವುದಾಗಿದೆ. ನಾನು ಚಿಕ್ಕವಳಿದ್ದಾಗ ನಾನು ಕೇಳುವ ಯಾವುದೇ ಪ್ರಶ್ನೆಗೆ ಅವರು ಕಥೆಯ ರೂಪದಲ್ಲಿ ಉತ್ತರ ಕೊಡುತ್ತಿದ್ದರು ಎಂದು ನೆನಪಿಸಿಕೊಂಡರು. ಕಥೆ ವಿಧಾನದಲ್ಲಿ ಹೇಳಿದಾಗ ಯಾವುದೇ ವಿಷಯವು ಪರಿಣಾಮಕಾರಿಯಾಗಿ ಮನಸ್ಸಿಗೆ ಮುಟ್ಟಲಿದೆ. ಭವಿಷ್ಯದ ಪೀಳಿಗೆಯ ಸಬಲೀಕರಣದಲ್ಲಿ ಜೀವನ ಮಾಡಬೇಕಾದರೆ ಅದು ಕಥೆ ಹೇಳುವ–ಕೇಳುವ ಕಲೆಯ ಕರಗತದಿಂದ ಸಾಧ್ಯವಿದೆ. ಕಥೆ ಪ್ರಕಾರವಾಗಿ ಭಾವನೆಗಳನ್ನು ವ್ಯಕ್ತಪಡಿಸುವುದು ವಿಶ್ವಾಸ ಮೂಡಿಸಲಿದೆ ಎಂದರು.

ಮುಂದಿನ 15 ವರ್ಷದಲ್ಲಿ ಊಹೆಗೂ ನಿಲುಕದ ತಂತ್ರಜ್ಞಾನದ ಕ್ರಾಂತಿ

ಹಿರಿಯ ವಿಜ್ಞಾನಿ ಪ್ರೊ. ಎಸ್.ಎಂ.ಶಿವಪ್ರಸಾದ್ ಭವಿಷ್ಯ

ಮೈಸೂರು, ಜ.19(ಬಿಎಲ್‌ಯು)– ವಿಶ್ವದಲ್ಲಿ ಮುಂದಿನ 15 ವರ್ಷದ ಅವಧಿಯಲ್ಲಿ ನಮ್ಮ ಊಹೆಗೂ ನಿಲುಕದ ತಂತ್ರಜ್ಞಾನದ ಕ್ರಾಂತಿಯಾಗುತ್ತದೆ ಎಂದು ಹಿರಿಯ ವಿಜ್ಞಾನಿ ಪ್ರೊ. ಎಸ್.ಎಂ. ಶಿವಪ್ರಸಾದ್ ಭವಿಷ್ಯ ನುಡಿದರು.

ಮೈಸೂರಿನ ಮಹಾರಾಜ ಕಾಲೇಜು ಭವನದಲ್ಲಿ ಇಂದು ಮೈಸೂರು ಲಿಟರರಿ ಅಸೋಸಿಯೇಷನ್ ಆಯೋಜಿಸಿದ್ದ ಮೈಸೂರು ಲಿಟರರಿ ಫೆಸ್ಟ್‌ನಲ್ಲಿ 'ತಾಂತ್ರಿಕವಾಗಿ ಬದಲಾಗುತ್ತಿರುವ ಜಗತ್ತಿಗೆ ಭಾರತೀಯ ಶಿಕ್ಷಣವನ್ನು ಮರು ರೂಪಿಸುವುದು' ವಿಷಯ ಕುರಿತು ಮಾತನಾಡಿದ ಅವರು, ಈಗ ನ್ಯಾನೊ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಬಂದಿದೆ ಇದರ ಮುಂದಿನ ಭಾಗವಾಗಿ ಅತ್ಯಾಧುನಿಕ ತಂತ್ರಜ್ಞಾನ ವಿಶ್ವಕ್ಕೆ ಪರಿಚಯವಾಗಲಿದೆ ಎಂದು ಹೇಳಿದರು.

ಪ್ರಸ್ತುತ ನಾವು ಮಾಡುವ ಪ್ರತಿಯೊಂದು ಕೆಲಸ ತಂತ್ರಜ್ಞಾನವನ್ನು ಅವಲಂಬಿಸಿದೆ. ಶಿಲೆ, ಕಬ್ಬಿಣ, ಪ್ಲಾಸ್ಟಿಕ್‌ನಿಂದ ವಸ್ತುಗಳು ಹಲವು ರೂಪ ಪಡೆದಿವೆ. ಇದೆಲ್ಲವೂ ತಂತ್ರಜ್ಞಾನದಿಂದ ಸಾಧ್ಯವಾಗಿದೆ ಎಂದು ಪ್ರೊ.ಶಿವಪ್ರಸಾದ್ ಅಭಿಪ್ರಾಯಪಟ್ಟರು.

ಜಗತ್ತಿನಲ್ಲಿ ಆಗುತ್ತಿರುವ ಬದಲಾವಣೆಯಲ್ಲಿ ಶಿಕ್ಷಣದ ಬದಲಾವಣೆ ನಮಗೆ ದೊಡ್ಡ ಸವಾಲಾಗಿದೆ. ವಿಶ್ವದಲ್ಲಿ ಆಗುತ್ತಿರುವ ಬದಲಾವಣೆ ಬಗ್ಗೆ ನಾವು ವಿದ್ಯಾರ್ಥಿಗಳಿಗೆ ತಿಳಿಸಿ ಹೇಳಬೇಕು. ನಾವು ಕಲಿಸುವ ಇಂಗ್ಲಿಷ್ ಜೊತೆಗೆ ಆರ್ಥಿಕತೆ, ವಿಜ್ಞಾನ, ನೈತಿಕತೆಯ ಪಾಠವನ್ನು ಕೂಡ ತಿಳಿ ಹೇಳಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗೆ ಶಿಕ್ಷಕ ಮಾಡುವ ಪಾಠ ಅವನ ಹೃದಯ ಹಾಗೂ ಮೆದುಳನ್ನು ನಾಟಬೇಕು. ಅಗತ್ಯ ಮಾಹಿತಿ ನೀಡಿ ಉತ್ತೇಜಿಸಬೇಕು. ವಿದ್ಯಾರ್ಥಿಗಳು ಇಂಜಿನಿಯರ್, ಡಾಕ್ಟರ್ ಸೇರಿದಂತೆ ಹಲವು ಹುದ್ದೆಯಲ್ಲಿದ್ದಾರೆ. ಆದರೆ ಶಿಕ್ಷಕ ಮಾತ್ರ ಶಿಕ್ಷಕನಾಗಿಯೇ ಇರುತ್ತಾನೆ. ಈ ಹಿನ್ನೆಲೆ ಪ್ರತಿಯೊಬ್ಬ ತನ್ನ ವೃತ್ತಿಯಲ್ಲಿ ಸಾಧನೆ ಮಾಡಲು ಶಿಕ್ಷಕರ ಉತ್ತೇಜನ, ಮಾರ್ಗದರ್ಶನ ಬಹಳ ಮುಖ್ಯವಾಗಿರುತ್ತದೆ ಎಂದು ಪ್ರೊ.ಶಿವಪ್ರಸಾದ್ ಅಭಿಪ್ರಾಯಪಟ್ಟರು.

ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್, ದಿ ಮರ್ಚೆಂಟ್ ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕರ ಸ್ಥಾನಕ್ಕೆ ಚುನಾವಣೆ

ನ್ಯಾಯಾಲಯದ ಆದೇಶದ ನಂತರ ಎರಡೂ ಬ್ಯಾಂಕ್‌ಗಳ ಮತ ಎಣಿಕೆ

ಮೈಸೂರು, ಜ.19(ಎಸ್‌ಬಿಡಿ)– ಮೈಸೂರಿನ ಗಾಂಧಿಚೌಕದಲ್ಲಿರುವ 'ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್' ಹಾಗೂ ಜಗನ್ಮೋಹನ ಅರಮನೆ ರಸ್ತೆಯಲ್ಲಿರುವ 'ದಿ ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್'ನ 2025–2030ನೇ ಸಾಲಿನ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ ಭಾನುವಾರ ನಡೆದಿದ್ದು, ನ್ಯಾಯಾಲಯದ ಆದೇಶದ ನಂತರ ಮತ ಎಣಿಕೆ ನಡೆಯಲಿದೆ.

ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ 'ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್' ಹಾಗೂ ಶಿವರಾಂಪೇಟೆಯ ಶ್ರೀಮತಿ ಆಲಮ್ಮ ಛತ್ರದ ಆವರಣದಲ್ಲಿ 'ದಿ ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್' ಚುನಾವಣೆ ಇಂದು ಬೆಳಗ್ಗೆ 9ರಿಂದ ಸಂಜೆ 4ರವರೆಗೆ ಬಿರುಸಿನಿಂದ ನಡೆಯಿತು. ಎರಡೂ ಬ್ಯಾಂಕ್‌ಗಳ ಮತದಾರರು ಉತ್ಸಾಹದಿಂದ ಮತ ಚಲಾಯಿಸಿದರು. ರಾಜಕೀಯ ಚುನಾವಣೆಯನ್ನೂ ಮೀರಿಸುವಂತೆ ಅಭ್ಯರ್ಥಿಗಳ ಕಟೌಟ್, ಬ್ಯಾನರ್‌ಗಳು ರಾರಾಜಿಸುತ್ತಿದ್ದವು. ಕ್ರಮಸಂಖ್ಯೆ, ಹೆಸರು ಇನ್ನಿತರ ಮಾಹಿತಿಯನ್ನೊಳಗೊಂಡ ಮಾದರಿ ಮತಪತ್ರವನ್ನು ನೀಡಿ, ಮತಬೇಟೆ ನಡೆಸಿದರು. ಸಾರ್ವಜನಿಕರಿಗೆ ಅನಾನುಕೂಲವಾಗದಂತೆ ಹಾಗೂ ಮತದಾನದ ಸ್ಥಳದಲ್ಲಿ ಯಾವುದೇ ಗಲಾಟೆ–ಗದ್ದಲ ನಡೆಯದಂತೆ ನಗರ ಪೊಲೀಸರು ಸೂಕ್ತ ಬಂದೋಬಸ್ತ್ ಮಾಡಿದ್ದರು.

ಮತಪೆಟ್ಟಿಗೆಗಳು ಜಿಲ್ಲಾ ಖಜಾನೆಗೆ: ಸಹಕಾರ ಸಂಘಗಳ ಕಾಯ್ದೆ ನಿಯಮಾನುಸಾರ ಮತದಾನಕ್ಕೆ ಅನರ್ಹಗೊಳಿಸಲಾಗಿದ್ದ 'ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್'ನ 2 ಸಾವಿರಕ್ಕೂ ಹೆಚ್ಚು ಸದಸ್ಯರು ಹಾಗೂ 'ದಿ ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್'ನ 1200ಕ್ಕೂ ಹೆಚ್ಚು ಸದಸ್ಯರು ಹೈಕೋರ್ಟ್ ಮೊರೆ ಹೋಗಿದ್ದರು. ಪ್ರತ್ಯೇಕ ರಿಟ್ ಅರ್ಜಿಗಳನ್ನು ವಿಚಾರಣೆ ನಡೆಸಿದ್ದ ನ್ಯಾಯಾಲಯ, ಮತದಾನಕ್ಕೆ ಅವಕಾಶ ನೀಡುವಂತೆ ಹಾಗೂ ಮುಂದಿನ ಆದೇಶದವರೆಗೆ ಫಲಿತಾಂಶ ಪ್ರಕಟಿಸದಂತೆ ಮಧ್ಯಂತರ ಆದೇಶ ನೀಡಿದೆ. ಈ ಹಿನ್ನೆಲೆಯಲ್ಲಿ ನ್ಯಾಯಾಲಯದಿಂದ ಅನುಮತಿ ಪಡೆದವರಿಗೆ ಪ್ರತ್ಯೇಕ ಬೂತ್‌ಗಳಲ್ಲಿ ಮತದಾನಕ್ಕೆ ಅವಕಾಶ ಕಲ್ಪಿಸಿ, ಮತದಾನ ಮುಕ್ತಾಯವಾದ ನಂತರ ಎಲ್ಲಾ ಮತಪೆಟ್ಟಿಗೆಗಳನ್ನೂ ಜಿಲ್ಲಾ ಖಜಾನೆಯಲ್ಲಿಟ್ಟು ಭದ್ರಪಡಿಸಲಾಗಿದೆ. ಜ.25ಕ್ಕೆ ನ್ಯಾಯಾಲಯದಲ್ಲಿ ವಿಚಾರಣೆ ಮುಂದುವರೆಯಲಿದ್ದು, ನ್ಯಾಯಾಲಯದ ನಿರ್ದೇಶನದಂತೆ ಮುಂದಿನ ಪ್ರಕ್ರಿಯೆ ಕೈಗೊಳ್ಳಲಾಗುವುದು ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.



ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಭಾನುವಾರ ನಡೆದ 'ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ ಮತಚಲಾಯಿಸಲು ನೆರೆದಿದ್ದ ಮತದಾರರು.

ಶೇ.75ಕ್ಕಿಂತ ಹೆಚ್ಚು ಮತದಾನ: ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ 2025–2030ನೇ ಸಾಲಿನ ಆಡಳಿತ ಮಂಡಳಿಯ ಒಟ್ಟು 13 ನಿರ್ದೇಶಕರ ಸ್ಥಾನದಲ್ಲಿ ಹಿಂದುಳಿದ ವರ್ಗ–ಬಿ ಕ್ಷೇತ್ರಕ್ಕೆ ಟಿ.ರವಿ ಅವಿರೋಧವಾಗಿ ಆಯ್ಕೆಯಾಗಿದ್ದು, ಇನ್ನುಳಿದ 12 ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಒಟ್ಟು 39 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಸುಮಾರು 13,500 ಒಟ್ಟು ಮತದಾರರಲ್ಲಿ 10,721 ಮಂದಿ (ಶೇ.79.41) ಮತ ಚಲಾಯಿಸಿದ್ದಾರೆ ಎಂದು ಚುನಾವಣಾಧಿಕಾರಿ ಬಿ.ರಾಜು ತಿಳಿಸಿದರು.

ಹಾಗೆಯೇ ದಿ ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿಯ ಒಟ್ಟು 13 ನಿರ್ದೇಶಕರ ಸ್ಥಾನಗಳಲ್ಲಿ ಪರಿಶಿಷ್ಟ ಜಾತಿ ಕ್ಷೇತ್ರದಿಂದ ರಾಚಪ್ಪಾಜಿ ಅವಿರೋಧವಾಗಿ ಆಯ್ಕೆಯಾಗಿದ್ದು, ಇನ್ನುಳಿದ 12 ಸ್ಥಾನಗಳಿಗೆ ಇಂದು ನಡೆದ ಚುನಾವಣೆಯಲ್ಲಿ 21 ಮಂದಿ ಸ್ಪರ್ಧಿಸಿದ್ದರು. ಒಟ್ಟು 4848 ಮತದಾರರಲ್ಲಿ 3,704 ಮಂದಿ (ಶೇ.76.46) ಮತ ಚಲಾಯಿಸಿದ್ದಾರೆ. ಸದ್ಯ ಮತಪೆಟ್ಟಿಗೆಗಳನ್ನು ಸೀಲ್ ಮಾಡಿ, ಜಿಲ್ಲಾ ಖಜಾನೆಯಲ್ಲಿಟ್ಟಿದ್ದು, ನ್ಯಾಯಾಲಯದ ಮುಂದಿನ ನಿರ್ದೇಶನದಂತೆ ಕ್ರಮ ವಹಿಸಲಾಗುವುದು ಎಂದು ಚುನಾವಣಾಧಿಕಾರಿ ವಸಂತು ತಿಳಿಸಿದರು.

ಬ್ಯಾಂಕ್‌ನ 65 ವರ್ಷ ಇತಿಹಾಸದಲ್ಲೇ ಈ ಬಾರಿ ಅತೀ ಹೆಚ್ಚು ಮತದಾನವಾಗಿದೆ ಈವರೆಗೆ ಮತ ಚಲಾವಣೆ 3 ಸಾವಿರ ಮೀರಿರಲಿಲ್ಲ ಎಂದು ಸಾಮಾನ್ಯ ವರ್ಗದ ಅಭ್ಯರ್ಥಿ ಎಂ.ಎನ್.ಮಹೇಶ್ ಹೇಳಿದರು. ಈ ಎರಡೂ ಸಹಕಾರ ಸಂಘಗಳ ಚುನಾವಣೆಯಲ್ಲಿ ಶೇ.75ಕ್ಕಿಂತ ಹೆಚ್ಚು ಮತದಾನವಾಗಿರುವುದು ಗಮನಾರ್ಹವಾಗಿದೆ.

ನ್ಯಾಯಾಲಯದತ್ತ ಎಲ್ಲರ ಚಿತ್ತ: ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಚುನಾವಣೆಯಲ್ಲಿ ಕೆ.ಉಮಾಶಂಕರ್ ನೇತೃತ್ವದಲ್ಲಿ ಎಂ.ಕುಮಾರ್, ಕೆ.ಹರೀಶ್ ಕುಮಾರ್, ಕೆ.ಗಿರೀಶ್, ಪಿ.ರಾಜೇಶ್ವರಿ, ಪಿ.ಸವಿತಾ, ಎಂ.ರಾಮಕೃಷ್ಣ(ಪಡುವಾರಹಳ್ಳಿ ರಾಮಕೃಷ್ಣ), ಸಿ.ರೇವಣ್ಣ ಎಸ್‌ಬಿಎಂ ಮಂಜು ನೇತೃತ್ವದಲ್ಲಿ ಎಸ್.ಅರವಿಂದ, ಜಿ.ಕುಮಾರ ಗೌಡ, ವೈ.ವಿಶಾಖ್, ಆರ್.ರವಿಕುಮಾರ್, ಎ.ಮಂಚಪ್ಪ, ಎಂ.ಛಾಯಮ್ಮ, ಹೆಚ್. ವಸಂತ ಮುನೀಶ್, ಎಸ್.ರೋಹಿತ್, ಆರ್.ರವಿಕುಮಾರ್ ಸೇರಿದಂತೆ ಒಟ್ಟು 39 ಅಭ್ಯರ್ಥಿಗಳ ಭವಿಷ್ಯ ಮತಪೆಟ್ಟಿಗೆಯಲ್ಲಿ ಭದ್ರವಾಗಿದೆ. ಹಾಗೆಯೇ ದಿ ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಚುನಾವಣೆಯ 21 ಅಭ್ಯರ್ಥಿಗಳೂ ನ್ಯಾಯಾಲಯದ ಆದೇಶ ಎದುರು ನೋಡುತ್ತಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಟೀಚರ್ : ಒಬ್ಬ ಹೆಂಗಸು 1 ಗಂಟೆಯಲ್ಲಿ 50 ಚಪಾತಿ ಮಾಡಿದರೆ ಮೂವರು ಹೆಂಗಸರು 1 ಗಂಟೆಯಲ್ಲಿ ಎಷ್ಟು ಚಪಾತಿ ಮಾಡುತ್ತಾರೆ!

ಗುಂಡ : ಹೆಚ್ಚಂದ್ರೆ ಹತ್ತಿಪ್ಪತ್ತು ಮಾಡಬಹುದೇನೋ ಟೀಚರ್

ಟೀಚರ್ : ಅದು ಯಾಕೋ ಹಾಗೆ ಹೇಳ್ತಿಯಾ?

ಗುಂಡ : ಮತ್ತೇನ್ ಟೀಚರ್? ಮೂವರು ಹೆಂಗಸರು ಸೇರುದ್ರೆ ಹರಟೆ ಹೊಡಿಯೋಕೆ ಟೈಮ್ ಸಾಲಲ್ಲ ಅವರಿಗೆ, ಇನ್ನು ಚಪಾತಿ ಬೇರೆ ಮಾಡ್ತಾರಾ..!

ಮೈಸೂರು ಮಿತ್ರ

ಸೋಮವಾರ, 20 ಜನವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

'ಕೀರ್ತಿಯನ್ನು ನಾವು ಕಷ್ಟಪಟ್ಟು ಗಳಿಸಬೇಕು, ಅಪಕೀರ್ತಿಯನ್ನು ಜನರು ಕಷ್ಟಪಟ್ಟು ಗಳಿಸಿ ನಮಗೆ ಕೊಡುತ್ತಾರೆ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅನ್ಯಾಯದಿಂದ ಗಳಿಸಿದ್ದು, ಅಸಡ್ಡಾಳಾಗಿ ಹೋಯ್ತು

ನಿಮ್ಮ ಪತ್ರಗಳು

■ ಅಪಘಾತವಾದಾಗ ನಗದುರಹಿತ ಚಿಕಿತ್ಸೆ ಸರಿ: ಆದರೆ ಇದರ ಜೊತೆಗೆ...

ಮಾನ್ಯರೆ,

ರಸ್ತೆ ಅಪಘಾತದಲ್ಲಿ ಗಾಯಗೊಂಡವರಿಗೆ ನಗದುರಹಿತ ಚಿಕಿತ್ಸೆ ನೀಡಲು ಕೇಂದ್ರ ಸರ್ಕಾರ ನೂತನವಾಗಿ ಹೊಸ ಯೋಜನೆಯನ್ನು ಜಾರಿಗೆ ತಂದಿರುವುದು ಸ್ವಾಗತಾರ್ಹ. ಇತ್ತೀಚಿನ ವರ್ಷಗಳಲ್ಲಿ ರಸ್ತೆ ಅಪಘಾತಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿದ್ದು, ಗಾಯಾಳುಗಳು ಚಿಕಿತ್ಸೆಗೆ ಪರದಾಡುವ ನಿದರ್ಶನಗಳಿಗೆ ಕೊರತೆ ಇಲ್ಲ. ಅಪಘಾತ ನಡೆದ 24 ಗಂಟೆಯೊಳಗೆ ಪೊಲೀಸರಿಗೆ ಮಾಹಿತಿ ಒದಗಿಸಿದರೆ ತಕ್ಷಣವೇ ಗಾಯಾಳುಗಳಿಗೆ ನಗದುರಹಿತ ಚಿಕಿತ್ಸೆ ನೀಡಲಾಗುವುದು ಎಂದು ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿಯವರು ಹೇಳಿರುವುದು ಪ್ರಶಂಸನೀಯ. ಏಕೆಂದರೆ ಸಕಾಲದಲ್ಲಿ ಸೂಕ್ತ ಚಿಕಿತ್ಸೆ ದೊರೆತರೆ ಅಪಘಾತಗಳಲ್ಲಿ ಪ್ರಾಣಹಾನಿ ಪ್ರಮಾಣವನ್ನು ಖಂಡಿತವಾಗಿ ತಗ್ಗಿಸಬಹುದು. ಎಷ್ಟೋ ಬಾರಿ ಸೂಕ್ತ ಆಸ್ಪತ್ರೆ ಸಿಗದೆ ಆಗುವ ಪರದಾಟ ಅಷ್ಟಿಷ್ಟಲ್ಲ. ಆಸ್ಪತ್ರೆ ಸಿಕ್ಕರೂ ಗಾಯಾಳುವನ್ನು ದಾಖಲು ಮಾಡಿಕೊಳ್ಳಲು ನಿರಾಕರಿಸುವ, ಇಲ್ಲವೆ ಮತ್ತೊಂದು ಆಸ್ಪತ್ರೆಗೆ ಶಿಫಾರಸು ಮಾಡುವಂಥ ಬೆಳವಣಿಗೆಗಳಿಗೂ ಕಡಿವಾಣ ಬೀಳಬೇಕಿದೆ.

ಕೇವಲ ರಸ್ತೆ ಅಪಘಾತಗೊಳಪಟ್ಟವರಿಗೆ ಸರ್ಕಾರ ನಗದುರಹಿತ ಚಿಕಿತ್ಸೆ ಘೋಷಣೆ ಮಾಡಿದರಷ್ಟೇ ಸಾಲದು. ಇದರ ಜೊತೆಗೆ ರಸ್ತೆ ಅಪಘಾತಗಳಾಗಿ ಪ್ರಾಣಾಪಾಯದಲ್ಲಿ ಸಿಲುಕಿ ನರಳುತ್ತಿರುವವರಿಗೆ ಸಹಾಯ ಮಾಡಿದರೆ ಅಂತಹವರಿಗೂ ಸರ್ಕಾರದ ವತಿಯಿಂದ ಬಹುಮಾನ ನೀಡುವ ಯೋಜನೆ ಪರಿಣಾಮಕಾರಿಯಾಗಿ ಜಾರಿಯಾಗಬೇಕಿದೆ. ಏಕೆಂದರೆ ಇಂದು ಕಣ್ಣೆದುರೇ ರಸ್ತೆ ಅಪಘಾತವಾದರೂ ಅನೇಕರು ಸಹಾಯ ಮಾಡಲು ಹಿಂದೇಟು ಹಾಕುವುದೇ ಹೆಚ್ಚು. ಅಪಘಾತದ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದರೆ ತಮ್ಮನ್ನೇ ಅಪಘಾತ ಪ್ರಕರಣದಲ್ಲಿ ಸಿಲುಕಿಸಬಹುದೆಂಬ ಆತಂಕ ಹಲವರಲ್ಲಿದೆ. ಈ ಭಯವನ್ನು ಹೋಗಲಾಡಿಸಿ ಸಂಕಷ್ಟದಲ್ಲಿರುವವರ ಜೀವ ರಕ್ಷಣೆಗೆ ಜನರನ್ನು ಉತ್ತೇಜಿಸುವ ಹಿನ್ನೆಲೆಯಲ್ಲಿ ಸರ್ಕಾರ, ಅಪಘಾತದಲ್ಲಿ ನೆರವಾದವರಿಗೆ ಬಹುಮಾನ ಯೋಜನೆ ಪ್ರಕಟಿಸಿ ಅದನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದು ಹೆಚ್ಚು ಸೂಕ್ತ.

ಇಷ್ಟಕ್ಕೂ ಅಪಘಾತಗಳನ್ನು ತಗ್ಗಿಸಲು ಸಾಮೂಹಿಕ ಪ್ರಯತ್ನಗಳು ಆಗಬೇಕಿದೆ. ಸರ್ಕಾರದ ಪ್ರಯತ್ನಗಳ ಜತೆಗೆ ಜನರು ಕೂಡ ಸುರಕ್ಷಾ ಕ್ರಮಗಳನ್ನು, ಸಂಚಾರಿ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸಬೇಕು. ಗಾಯಾಳುಗಳ ನೆರವಿಗೆ ಬರುವಲ್ಲಿ ನಗದುರಹಿತ ಚಿಕಿತ್ಸೆಯೆಂಬುದು ಮಹತ್ವದ ಯೋಜನೆಯಾಗಿದೆ. ಇದರ ಜೊತೆಗೆ ಗಾಯಾಳುಗಳಿಗೆ ನೆರವಾದವರಿಗೆ ಬಹುಮಾನವು ಸಹ ಸಿಗಲಿ. ಎಲ್ಲಾ ರಾಜ್ಯಗಳು ಸಹ ಇದನ್ನು ಅನುಷ್ಠಾನಕ್ಕೆ ತರಲಿ. ಈ ನಿಟ್ಟಿನಲ್ಲಿ ಸರ್ಕಾರ ಹೆಚ್ಚಿನ ಕಾಳಜಿ ವಹಿಸಿದರೆ, ರಸ್ತೆ ಅಪಘಾತದಂತಹ ಗಂಭೀರ ಸಮಸ್ಯೆಗೆ ಪರಿಹಾರ ಲಭ್ಯವಾಗುವುದರಲ್ಲಿ ಸಂಶಯವಿಲ್ಲ. **–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.**

■ ಮಂಡ್ಯದಲ್ಲಿ ಕೃಷಿ ವಿವಿ ಸ್ಥಾಪನೆ ಶ್ಲಾಘನೀಯ

ಮಾನ್ಯರೆ,

ಮಂಡ್ಯ ಜಿಲ್ಲೆಯ ವಿಸಿ ಫಾರಂನಲ್ಲಿ ಕೃಷಿ ವಿಶ್ವವಿದ್ಯಾನಿಲಯ ಸ್ಥಾಪನೆಗೆ ಸಚಿವ



ಸಂಪುಟ ಅನುಮೋದನೆ ನೀಡಿರುವುದು ಶ್ಲಾಘನೀಯ. ಮೈಸೂರು, ಕೊಡಗು, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಗಳಲ್ಲಿನ ಕೃಷಿ ಕಾಲೇಜು ಹಾಗೂ ಸಂಶೋಧನಾ ಕೇಂದ್ರ ಒಳಗೊಂಡಂತೆ ಮಂಡ್ಯದ ವಿಸಿ ಫಾರಂನಲ್ಲಿ ಕೃಷಿ ವಿಶ್ವವಿದ್ಯಾನಿಲಯ ಸ್ಥಾಪಿಸಬೇಕೆಂಬ ವಿಷಯವನ್ನು ಹಲವಾರು ಬಾರಿ ವಿಧಾನಪರಿಷತ್‌ನಲ್ಲಿ ಮಾಜಿ ಉಪಸಭಾಪತಿ ಮರಿತಿಬ್ಬೇಗೌಡ ಅವರು ಚರ್ಚಿಸಿದ್ದು, ಈಗ ಅವರ ಬೇಡಿಕೆ ಈಡೇರಿದಂತಾಗಿದೆ.

ಕೃಷಿ ವಿಶ್ವವಿದ್ಯಾಲಯದ ಸ್ಥಾಪನೆ ಆಗಿರುವುದರಿಂದ ರೈತರ ಅನೇಕ ಸಮಸ್ಯೆಗಳಿಗೆ ವಿಶೇಷವಾಗಿ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಒಂದೇ ಮೂಲದಿಂದ ಪರಿಹಾರ ದೊರಕುವುದರಿಂದ ಈ ಮಹತ್ವಾಕಾಂಕ್ಷಿ ಯೋಜನೆ ನೆರವೇರಿರುವುದು ತುಂಬಾ ಸಂತಸದ ಸಂಗತಿ. ಪ್ರಸ್ತುತ ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದ ಅಧೀನದಲ್ಲಿ ಮೈಸೂರು ತೋಟಗಾರಿಕೆ ಕಾಲೇಜು ಇದ್ದು, ನೂತನವಾಗಿ ಅಸ್ತಿತ್ವಕ್ಕೆ ಬರುವ ಮಂಡ್ಯ ಕೃಷಿ ವಿಶ್ವವಿದ್ಯಾಲಯದ ಅಧೀನಕ್ಕೆ ಮೈಸೂರು ವಿಭಾಗದ ಕೃಷಿಗೆ ಸಂಬಂಧಪಟ್ಟ ಎಲ್ಲಾ ಶಿಕ್ಷಣ, ಸಂಶೋಧನೆ, ವಿಸ್ತರಣಾ ಘಟಕಗಳು ಹಾಗೂ ಕಾಲೇಜುಗಳು ಸೇರ್ಪಡೆಗೊಳ್ಳುವುದರಿಂದ ನಾಲ್ಕು ಜಿಲ್ಲೆಗಳ ರೈತರಿಗೆ ತುಂಬಾ ಅನುಕೂಲವಾಗಿ ರೈತರು ಅದರ ಸದುಪಯೋಗಪಡೆದುಕೊಳ್ಳುವುದು ಸೂಕ್ತ. **–ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.**

■ ರಾಜ್ಯದಲ್ಲಿ ಬಣ ರಾಜಕೀಯ!

ಮಾನ್ಯರೆ,

ರಾಜ್ಯದ ಆಡಳಿತ ಪಕ್ಷವಾದ ಕಾಂಗ್ರೆಸ್ ಹಾಗೂ ಪ್ರಮುಖ ವಿರೋಧ ಪಕ್ಷವಾದ ಭಾರತೀಯ ಜನತಾ ಪಕ್ಷಗಳ ಒಳಗಿನ ಆಂತರಿಕ ವಿದ್ಯಮಾನಗಳು ದಿನಕ್ಕೊಂದು ತಿರುವು ಪಡೆಯುತ್ತಿವೆ. ಭಾರತೀಯ ಜನತಾ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ಸಮರ ಸಾರಿರುವ ಬಸನಗೌಡ ಪಾಟೀಲ್ ಯತ್ನಾಳ್ ಬಣ, ಅವರನ್ನು ರಾಜ್ಯಾಧ್ಯಕ್ಷ ಸ್ಥಾನದಿಂದ ಇಳಿಸಲು ನಿರಂತರ ಪ್ರಯತ್ನಿಸುತ್ತಿದ್ದರೆ, ಇತ್ತ ಕಾಂಗ್ರೆಸ್‌ನಲ್ಲಿ ಕೂಡ ಮುಂದಿನ ಮುಖ್ಯಮಂತ್ರಿಯ ಬಗ್ಗೆ ಸಭೆ, ಡಿನ್ನರ್ ಪಾರ್ಟಿ ಮುಂತಾದವುಗಳು ನಡೆಯುತ್ತಿವೆ. ಕಾಂಗ್ರೆಸ್‌ನಲ್ಲಿ ಬಣ ರಾಜಕೀಯ ಕೂಡ ಹೆಚ್ಚುತ್ತಿದ್ದು, ಶಿವಕುಮಾರ್ ಬಣ, ಪರಮೇಶ್ವರ್ ಬಣ, ಸತೀಶ ಜಾರಕಿಹೊಳಿ ಬಣ ಸೇರಿದಂತೆ ಇತರ ಬಣಗಳು ದಿನಕ್ಕೊಂದು ರೀತಿಯ ಹೇಳಿಕೆ ನೀಡುತ್ತಿದ್ದು, ಇದು ಆಡಳಿತದ ಮೇಲೆ ಸಹ ವ್ಯತಿರಕ್ತ ಪರಿಣಾಮ ಬೀರಬಹುದು. ರಾಜ್ಯ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಬಡಿದಾಟವನ್ನು ಕೊನೆಗೊಳಿಸಲು ಎಐಸಿಸಿ ಪ್ರಧಾನ ಕಾರ್ಯದರ್ಶಿ ಸುರ್ಜೇವಾಲ ರಾಜ್ಯಕ್ಕೆ ಭೇಟಿ ನೀಡಿ ಹೋಗಿದ್ದರೂ ಸಹ, ಕಾಂಗ್ರೆಸ್ ಬಣ ರಾಜಕೀಯಕ್ಕೆ ತೆರೆಬಿದ್ದಿಲ್ಲ. ಈಗಲಾದರೂ ಈ ಪಕ್ಷಗಳು ತಮ್ಮ ತಮ್ಮ ಜವಾಬ್ದಾರಿಗಳನ್ನು ಅರಿತು ಕಾರ್ಯನಿರ್ವಹಿಸಿ ಮತದಾರ ಪ್ರಭುಗಳ ಋಣವನ್ನು ತೀರಿಸಬೇಕಾಗಿದೆ.

–ಕೆ.ವಿ.ವಾಸು, ವಕೀಲರು, ನೋಟರಿ, ವಿವೇಕಾನಂದನಗರ, ಮೈಸೂರು

ನಾದಲಹರಿ




ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಹೆಳವನಕಟ್ಟೆ ಗಿರಿಯಮ್ಮ

ಕನ್ನಡ ಸಾಹಿತ್ಯದ ಎರಡು ವಿಶಿಷ್ಟ ಪ್ರಕಾರಗಳೆಂದರೆ 12ನೆಯ ಶತಮಾನದ ವಚನ ಸಾಹಿತ್ಯ ಮತ್ತು 15ನೆಯ ಶತಮಾನದ ದಾಸ ಸಾಹಿತ್ಯ. ಈ ಎರಡೂ ಪ್ರಕಾರಗಳು ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆ ನೀಡುವುದರೊಂದಿಗೆ ತಮ್ಮ ಸಾಮಾಜಿಕ ಕಳಕಳಿಯಿಂದ ಜನರ ಮನಸ್ಸನ್ನು, ಬದುಕನ್ನು ಶುದ್ಧಗೊಳಿಸಿ, ಅದನ್ನು ಆಧ್ಯಾತ್ಮಿಕತೆಯತ್ತ ಮುಖ ಮಾಡುವಂತೆ ಮಾಡಿದ ಅನನ್ಯ ಸೇವೆಯನ್ನು ಕಡೆಗಣಿಸುವಂತೆಯೇ ಇಲ್ಲ. ತಮ್ಮನ್ನು ತಾವು ಪ್ರಶ್ನಿಸಿಕೊಳ್ಳುತ್ತಾ, ನಡೆ–ನುಡಿಗಳನ್ನು ಒಂದಾಗಿಸಿಕೊಂಡು, ಜನರನ್ನು ಪ್ರಾಮಾಣಿಕರನ್ನಾಗಿಸುತ್ತಾ, ಜನಜೀವನವನ್ನು ಉತ್ತಮಗೊಳಿಸುತ್ತಾ ಭಕ್ತಿ–ಪ್ರೀತಿಯ ಮೂಲಕ ಭಗವಂತನ ಕಡೆಗೆ ಮೊಗ ಮಾಡುವುದನ್ನು ಕಲಿಸಿದವರು ಶರಣರು ಮತ್ತು ದಾಸರು. ಒಬ್ಬರು ಹರಪಾರಮ್ಯವನ್ನು ಹೇಳಿದರೆ, ದಾಸರು ಹರಿ ಸರ್ವೋತ್ತಮ ತತ್ವವನ್ನು ಸಾರಿದರು. ದೇವನೊಬ್ಬ–ನಾಮ ಹಲವು ಎಂಬುದನ್ನು ಅರ್ಥ ಮಾಡಿಕೊಂಡ ಮನಗಳಿಗೆ ಈ ಎರಡೂ ಪ್ರಕಾರದ ಸಾಹಿತ್ಯ ರುಚಿಸೀತು.

ವಚನ ಸಾಹಿತ್ಯ ಎಂದೊಡನೆ ಥಟ್ಟನೆ ನೆನಪಾಗುವುದು ಬಸವಣ್ಣ, ಅಲ್ಲಮಪ್ರಭು. ಅಂತೆಯೇ ದಾಸರ ಕೀರ್ತನೆ ಎಂದೊಡನೆ ನೆನಪಾಗುವುದು ಪುರಂದರದಾಸರು, ಕನಕದಾಸರು. ಆದರೆ ಈ ಎರಡೂ ಪ್ರಕಾರಗಳಲ್ಲಿ ಅಪೂರ್ವ ಕಾಣಿಕೆಯನ್ನು ಇತ್ತಿರುವ ಅದೆಷ್ಟೋ ಮಹಿಳೆಯರು ಇದ್ದಾರೆ ಎಂಬುದು ವಾಸ್ತವ. ಒಂದು ಕೈಯಲ್ಲಿ ಸಂಸಾರ ಎಂಬ ಲೌಕಿಕಕ್ಕೆ ಹೆಗಲು ಕೊಟ್ಟು, ಮತ್ತೊಂದು ಕೈಯನ್ನು ಭಗವಂತನತ್ತ ಚಾಚಿದ ಈ ಶರಣೆಯರು, ಹರಿದಾಸಿಯರು ತಮ್ಮ ಭಕ್ತಿಯಲ್ಲಿ, ಪ್ರಾಮಾಣಿಕತೆಯಲ್ಲಿ, ಹರಿತ, ಸ್ಪಷ್ಟೋಕ್ತಿಗಳಲ್ಲಿ ಯಾವ ಪುರುಷರಿಗೂ ಸರಿಸಾಟಿಯಾಗಿ ನಿಲ್ಲಬಲ್ಲವರು. ತಮ್ಮ ಉತ್ಕಟ ಪ್ರೀತಿಯನ್ನು ಭಗವಂತನೆಡೆಗೆ ತಿರುಗಿಸಿ, ಪ್ರೀತಿಯೇ ಭಕ್ತಿ ಎಂಬುದನ್ನು ಅರಿತು, ಅದರಲ್ಲಿಯೇ ಸಾಧನೆ ಮಾಡಿ ದೈವವನ್ನು ಸಾಕ್ಷಾತ್ಕರಿಸಿಕೊಂಡವರು ಅದೆಷ್ಟೋ ಮಹಿಳಾಮಣಿಗಳು. ಅಂತಹ ಮಹಿಳಾ ಹರಿದಾಸಿಯರಲ್ಲಿ ಒಬ್ಬಳು ಹೆಳವನಕಟ್ಟೆ ಗಿರಿಯಮ್ಮ.

ಶ್ರೀಪಾದರಾಜರಿಂದ ಆರಂಭಗೊಂಡಿತೆಂದು ಹೇಳಲಾಗುವ ದಾಸ ಸಾಹಿತ್ಯದ ಪರಂಪರೆಯು ಇಂದಿಗೂ ಮುಂದುವರೆಯುತ್ತಿದೆ. ಅನೇಕರು ದಾಸ ದೀಕ್ಷೆಯನ್ನು ಕೈಗೊಂಡು, ಹರಿ ಪಾರಮ್ಯವನ್ನು ನಂಬಿ, ಭಕ್ತಿ ಸಾಧನೆಯನ್ನು ಮಾಡುತ್ತಾ ಅಂಕಿತವನ್ನಿರಿಸಿಕೊಂಡು ಇಂದಿಗೂ ಕೀರ್ತನೆಗಳನ್ನು ರಚಿಸುತ್ತಿದ್ದಾರೆ. ಸಂಗೀತ ಮಾಧ್ಯಮದ ಮೂಲಕ ಭಕ್ತಿ ಎಂಬ ಪರಿಮಳವನ್ನು ಪಸರಿಸುವುದು ಸುಲಭ ಎಂಬುದನ್ನು ಅರಿತ ದಾಸರು ಕಾಲಿಗೆ ಗೆಜ್ಜೆ ಕಟ್ಟಿ, ಹಾಡುಗಳ ಮೂಲಕ ಜನಜೀವನವನ್ನು ಹಸನು ಮಾಡುವತ್ತ ಹೆಜ್ಜೆ ಇಡುತ್ತಲೇ ಇದ್ದಾರೆ. ಶ್ರೀಪಾದರಾಜ, ವ್ಯಾಸರಾಜ, ಪುರಂದರದಾಸ, ವಾದಿರಾಜ, ಕನಕದಾಸ, ವಿಜಯದಾಸ, ಗೋಪಾಲದಾಸ ಮುಂತಾದವರ ಸಾಲಿನಲ್ಲಿಯೇ ಹೆಳವನಕಟ್ಟೆ ಗಿರಿಯಮ್ಮ ಅವರ ಹೆಸರೂ ಕಾಣಿಸಿಕೊಳ್ಳುತ್ತದೆ. ಈಕೆ ಗೋಪಾಲದಾಸರ ಸಮಕಾಲೀನಳು ಎಂಬುದು ಆಕೆಯ ರಚನೆಯಿಂದಲೇ ತಿಳಿದುಬರುವ ಸಂಗತಿ. ಗಿರಿಯಮ್ಮನ ಕಾಲ ಯಾವುದೆಂದು ನಿಖರವಾಗಿ ಉಲ್ಲೇಖ ಇರದಿದ್ದರೂ, ಲಭ್ಯವಿರುವ ಆಂತರಿಕ, ಬಾಹ್ಯ ಆಧಾರಗಳಿಂದ ಈಕೆ ಸುಮಾರು ಕ್ರಿ.ಶ. 1700–50ರ ಸುಮಾರಿನಲ್ಲಿ ಜೀವಿಸಿದ್ದಳೆಂದು ಹೇಳಬಹುದು. ಆಕೆಯ ಹುಟ್ಟೂರು ಧಾರವಾಡ ಜಿಲ್ಲೆಯ ರಾಣೆಬೆನ್ನೂರು. ಚಿತ್ರದುರ್ಗ ಜಿಲ್ಲೆಯ ಹರಿಹರ ತಾಲೂಕಿನ ಮಲೆಬೆನ್ನೂರಿನ ಶ್ಯಾನುಭೋಗ ತಿಪ್ಪರಸನೊಡನೆ ಈಕೆಯ ವಿವಾಹವಾಗಿತ್ತು. ಆ ಊರಿನ ಸಮೀಪವೇ ವಾಸಿಸುತ್ತಿದ್ದ ಹೆಳವನೊಬ್ಬ ಕಟ್ಟಿಸಿದ್ದ ಒಂದು ಕೆರೆ ಇದೆ. ಅದನ್ನು ಅವನು ಕಟ್ಟಿಸಿದುದರಿಂದ ಅದು ಹೆಳವನಕಟ್ಟೆ ಎಂಬ ಹೆಸರು ಪಡೆಯಿತು. ಅಲ್ಲೇ ಬದಿಗಿದ್ದ ಒಂದು ಹುತ್ತದಲ್ಲಿ ರಂಗನಾಥನ ಮೂರ್ತಿ ಸಿಕ್ಕು, ಅದಕ್ಕೆ ಪಕ್ಕದಲ್ಲಿಯೇ ಗುಡಿಯನ್ನೂ ಅವನೇ ಕಟ್ಟಿಸಿದನಂತೆ. ಅಂತೆಯೇ ಅದು ಹೆಳವನಕಟ್ಟೆ ರಂಗನಾಥ ಎಂಬ ಹೆಸರನ್ನು ಪಡೆಯಿತು. ಗಿರಿಯಮ್ಮನೂ ಆ ಕೆರೆಗೇ ಬಟ್ಟೆ ಒಗೆಯಲು, ನೀರು ತರಲು ಹೋಗುತ್ತಿದ್ದಳು. ಅಲ್ಲಿಯೇ ರಂಗನಾಥನ ದರುಶನವನ್ನು ಮಾಡಿದ ಈಕೆಗೆ



ಹೆಳವನಕಟ್ಟೆ ಗಿರಿಯಮ್ಮ

> " ಹೆಣ್ಣು ಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸ ಎಂಬುದು ದುರ್ಲಭವಾಗಿದ್ದ ಆ ದಿನಗಳಲ್ಲಿ ಗಿರಿಯಮ್ಮ ತನ್ನ ಕವಿತಾ ಶಕ್ತಿಯಿಂದ ಚಿಕ್ಕ ಹಾಡುಗಳನ್ನು, ಉದ್ದ ಕತೆಗಳನ್ನುಳ್ಳ ದೊಡ್ಡ ಹಾಡುಗಳನ್ನು ರಚಿಸತೊಡಗಿದುದು ಆಕೆಯಲ್ಲಿ ಅಡಗಿದ್ದ ಕವಿತಾ ಶಕ್ತಿಗೆ ಸಾಕ್ಷಿಯಾಗಿದೆ. ಆಕೆಯ ಮೇಲೆ ಆಗಿದ್ದ ಉತ್ತಮ ಸಂಸ್ಕಾರದ ಪ್ರಭಾವದಿಂದಲೋ ಎಂಬಂತೆ ರಾಮಾಯಣ, ಮಹಾಭಾರತ, ಭಾಗವತ, ಜೈಮಿನಿ ಮುಂತಾದವುಗಳಿಂದ ವಸ್ತುವನ್ನು ಆಯ್ಕೆ ಮಾಡಿಕೊಂಡಿರುವುದು ತೋರುತ್ತದೆ. ಆಕೆಯ ರಚನೆಗಳೆಲ್ಲದರಲ್ಲಿಯೂ ಎದ್ದು ಕಾಣುವುದು, ಅವಳ ದೈವದ ಮೇಲಿನ ಅನನ್ಯ ಭಕ್ತಿ.

ಅವನೇ ತನ್ನ ಮನದ ದೈವ ಎಂದನಿಸುತ್ತದೆ. ಮುಂದೆ ಅವನ ಹೆಸರಿನ ಅಂಕಿತದಲ್ಲೇ ಅನೇಕ ಹಾಡುಗಳನ್ನು ಆಕೆ ರಚಿಸುತ್ತಾಳೆ.

ಬಾಲ್ಯದಿಂದಲೂ ದೇವರಲ್ಲಿ ಅತೀವ ಭಕ್ತಿ ಇದ್ದ ಈಕೆಗೆ ಲೌಕಿಕ ಬದುಕಿನ ಆಕರ್ಷಣೆ ಇರಲೇ ಇಲ್ಲ ಎಂದರೂ ನಡೆದೀತು. ತನ್ನಿಂದ ಗಂಡನಿಗೆ ಸಂಸಾರದ ಸುಖ ಇಲ್ಲದೆ ಹೋಗಬಾರದೆಂದು ಗಂಡನಿಗೆ ಮತ್ತೊಂದು ಮದುವೆ ಮಾಡಿಸಿ, ತಾನು ತನ್ನ ಭಕ್ತಿ, ವೈರಾಗ್ಯಗಳೊಡನೆ ಸಾಂಸಾರಿಕ ಮೋಹವನ್ನು ತ್ಯಜಿಸಿ ವಿರಾಗಿಣಿಯಂತೆ ಇದ್ದುಬಿಡುತ್ತಾಳೆ. ಗಿರಿಯಮ್ಮನಿಗೆ ಸಂಬಂಧಿಸಿದಂತೆ ಅನೇಕ ಪವಾಡಗಳು ಪ್ರಚಲಿತದಲ್ಲಿವೆ. ಅವಳು ದೈವಾಂಶ ಸಂಭೂತಳೆಂಬುದನ್ನು ಅವಳ ಗಂಡ ಮತ್ತು ಮಾವ ಅರಿತಿದ್ದರೂ ಅತ್ತೆಗೆ ಅವಳ ಮೇಲೆ ಸಿಟ್ಟು, ಒಮ್ಮೆ ಅಡಿಗೆ ಮಾಡಲು ಸೌದೆ ಇಲ್ಲವೆಂದು ಅವಳು ಹೇಳಿದಾಗ ಅತ್ತೆಯು ನಿನ್ನ ಕಾಲನ್ನು ಹಚ್ಚಿ ಅಡಿಗೆ ಮಾಡು ಎಂದು ಹೇಳಿದಳಂತೆ. ಅಂತೆಯೇ ಗಿರಿಯಮ್ಮ ತನ್ನ ಕಾಲನ್ನೇ ಒಲೆಗೆ ಚಾಚಿ ಉರಿಯಲ್ಲಿ ಅಡಿಗೆ ಮಾಡಿದಳು. ಅದನ್ನು ಕಂಡ ಮಾವನಾದಿಯಾಗಿ ಎಲ್ಲರೂ ಗಾಬರಿಯಾದರು. ಗಿರಿಯಮ್ಮಳ ಕಾಲಿಗೆ ಏನೂ ಆಗಿರಲಿಲ್ಲ. ಯಾವ ಕೆಲಸವನ್ನಾದರೂ ದೇವರನ್ನು ಸ್ಮರಿಸುತ್ತಲೇ ಮಾಡುತ್ತಿದ್ದ ಗಿರಿಯಮ್ಮ ಬೆಣ್ಣೆ ಕಡೆಯುವಾಗಲೂ ಅವನ ಹಾಡುಗಳನ್ನು ಹೇಳಿಕೊಳ್ಳುತ್ತಲೇ ಕಡೆಯುತ್ತಿದ್ದಳು. ಆಗ ಅವಳ ಕಣ್ಣ ಮುಂದೆ ಕೃಷ್ಣನೇ ನಿಂತಂತೆ ತೋರುತ್ತಿತ್ತಂತೆ. ಅವಳು ಬೆಣ್ಣೆ ಕಡೆಯುವಾಗಲೆಲ್ಲಾ ಗೆಜ್ಜೆಯ ಸಪ್ಪಳ ಕೇಳಿಬರುವುದನ್ನು ಆಕೆಯೇ ನರ್ತಿಸುತ್ತಿರಬೇಕು ಎಂದು ಬಗೆದ ಅವಳ ಮಾವ ಒಮ್ಮೆ ಬಂದು ನೋಡಿದಾಗ ಕಣ್ಣುಮುಚ್ಚಿ ಹಾಡುತ್ತಾ ಬೆಣ್ಣೆ ಕಡೆಯುತ್ತಿದ್ದ ಸೊಸೆಯನ್ನೂ, ಕೇಳಿಸುತ್ತಲೇ ಇದ್ದ ಗೆಜ್ಜೆಯ ಶಬ್ದವನ್ನೂ ನೋಡಿ ಅವಳ ಮಹಿಮೆ ಅರಿತಂತಾಯಿತು.

ಒಮ್ಮೆ ರಂಗನಾಥನ ಉತ್ಸವದ ಸಮಯದಲ್ಲಿ ದೇವರಿಗೆ ಎಲ್ಲ ರೀತಿಯ ಒಡವೆಗಳನ್ನೂ ಹಾಕಿ ಅಲಂಕರಿಸಿದ್ದರು. ಅವನ ಬೆರಳಿಗೆ ರತ್ನದ ಉಂಗುರವನ್ನೂ ತೊಡಿಸಿದ್ದರು. ಮರುದಿನ ಬಂದು ನೋಡಿದಾಗ ರತ್ನದ ಉಂಗುರ ಕಣ್ಮರೆಯಾಗಿದ್ದುದನ್ನು ಕಂಡು ಅರ್ಚಕರು ಹೌಹಾರಿದರು. ಕಳುವಿನ ಆರೋಪ ತಮ್ಮ ಮೇಲೇ ಬರುವುದೆಂದುಕೊಂಡರು. ಆಗ ಅಲ್ಲಿಗೆ ಬಂದ ಗಿರಿಯಮ್ಮ ವಿಷಯ ತಿಳಿದು ಹೊನ್ನ ತಾ ಗುಬ್ಬಿ ಹೊನ್ನ ತಾ ಎಂದು ಭಕ್ತಿಯಿಂದ ಹಾಡಿದಾಗ ಒಂದು ಗುಬ್ಬಿಯು ಬಂದು, ದೇವರ ಉಂಗುರವನ್ನು ಗರ್ಭಗುಡಿಯಲ್ಲಿ ಹಾಕಿತು! ದೇವರ ದೀಪವನ್ನು ಹಚ್ಚಲು ಅವಳಿಗೆ ತುಪ್ಪ ದೊರೆಯದಾದಾಗ ತನಗೆ ಊಟಕ್ಕೆ ಬಡಿಸಿದ ತುಪ್ಪವನ್ನು ಗುಟ್ಟಾಗಿ ಎತ್ತಿಟ್ಟು, ಅದರಿಂದ ದೀಪವನ್ನು ಹಚ್ಚುತ್ತಿದ್ದಳು. ದೀಪದಿಂದ ಉಂಟಾಗುತ್ತಿದ್ದ ಕಪ್ಪನ್ನು ಶೇಖರಿಸಿ ಇಟ್ಟುಕೊಳ್ಳುತ್ತಿದ್ದಳು ಯಾರಿಗಾದರೂ ಕಣ್ಣುಬೇನೆ ಉಂಟಾದಲ್ಲಿ, ಅದೇ ಕಾಡಿಗೆಯನ್ನು ಹಚ್ಚಿ ವಾಸಿ ಮಾಡುತ್ತಿದ್ದಳು. ಒಮ್ಮೆ ಪುಂಗನೂರಿನ ಅರಸನಾದ ಜಯರಾಜನ ಮಗನಿಗೆ ಎರಡೂ ಕಣ್ಣಿನಲ್ಲಿ ಬೇನೆ ಕಾಣಿಸಿಕೊಂಡು ಆತ ಕುರುಡಾದ. ತಿರುಪತಿಯಲ್ಲಿ ಸೇವೆ ಮಾಡಿದಾಗ, ಕನಸಿನಲ್ಲಿ ಬಂದ ವೆಂಕಟೇಶನು ಒಂದು ಕಣ್ಣನ್ನು ತಾನು ಕೊಡುವುದಾಗಿಯೂ, ಮತ್ತೊಂದನ್ನು ತನ್ನ ಭಕ್ತಳಾದ ಗಿರಿಯಮ್ಮ ಕೊಡುತ್ತಾಳೆಂದು ಹೇಳಿದ. ಅಂತೆಯೇ ಅವಳನ್ನು ಹುಡುಕಿಕೊಂಡು ಬಂದ ರಾಜಕುಮಾರನಿಗೂ ಇದೇ ಕಾಡಿಗೆಯನ್ನು ಹಚ್ಚಿದಾಗ ಅವನಿಗೆ ಹೋಗಿದ್ದ ದೃಷ್ಟಿ ಮರಳಿ ಬಂದಿತಂತೆ. ಹೀಗೆ ಆಕೆಯ ಬದುಕಿನಲ್ಲಿ ಹಲವು ಪವಾಡಗಳು ನಡೆದಿದೆಯೆಂದು ಪ್ರತೀತಿ.

ಹೆಣ್ಣು ಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸ ಎಂಬುದು ದುರ್ಲಭವಾಗಿದ್ದ ಆ ದಿನಗಳಲ್ಲಿ ಈಕೆ ತನ್ನ ಕವಿತಾ ಶಕ್ತಿಯಿಂದ ಚಿಕ್ಕ ಹಾಡುಗಳನ್ನು, ಉದ್ದ ಕತೆಗಳನ್ನುಳ್ಳ ದೊಡ್ಡ ಹಾಡುಗಳನ್ನು ರಚಿಸತೊಡಗಿದುದು ಆಕೆಯಲ್ಲಿ ಅಡಗಿದ್ದ ಕವಿತಾ ಶಕ್ತಿಗೆ ಸಾಕ್ಷಿಯಾಗಿದೆ. ಆಕೆಯ ಮೇಲೆ ಆಗಿದ್ದ ಉತ್ತಮ ಸಂಸ್ಕಾರದ ಪ್ರಭಾವದಿಂದಲೋ ಎಂಬಂತೆ ರಾಮಾಯಣ, ಮಹಾಭಾರತ, ಭಾಗವತ, ಜೈಮಿನಿ ಮುಂತಾದವುಗಳಿಂದ ವಸ್ತುವನ್ನು ಆಯ್ಕೆ ಮಾಡಿಕೊಂಡಿರುವುದು ತೋರುತ್ತದೆ. ಆಕೆಯ ರಚನೆಗಳೆಲ್ಲದರಲ್ಲಿಯೂ ಎದ್ದು ಕಾಣುವುದು, ಅವಳ ದೈವದ ಮೇಲಿನ ಅನನ್ಯ ಭಕ್ತಿ. ಉದ್ದಾಳಿಕನ ಕತೆ, ಶಂಕರಗಂಡನ ಹಾಡು, ಸೀತಾ ಕಲ್ಯಾಣ, ಚಂದ್ರಹಾಸನ ಕತೆ, ಬ್ರಹ್ಮ ಕೊರವಂಜಿ ಮುಂತಾದ ಹಲವು ದೊಡ್ಡ ಹಾಡುಗಳು ಅವಳಿಂದ ಸೊಗಸಾಗಿ ಮೂಡಿಬಂದಿವೆ. ಉರುಟಣೆ ಹಾಡನ್ನೂ ಅವಳು ರಚಿಸಿದ್ದಾಳೆ. ಕನ್ನಡ ಸಾಹಿತ್ಯದಲ್ಲಿ ತನ್ನದೇ ವಿಶಿಷ್ಟ ಸ್ಥಾನವನ್ನು ಗಳಿಸಿರುವ ಹೆಳವನಕಟ್ಟೆ ಗಿರಿಯಮ್ಮ ಭಕ್ತ ಮನಸುಗಳಲ್ಲಿ ಸದಾ ಉಳಿದಿರುತ್ತಾಳೆ.

ವೃದ್ಧರು, ಅನಾಥರ ಸೇವೆ ದೇವರ ಸೇವೆಗೆ ಸಮ

ಶಾಸಕ ಜಿ.ಟಿ.ದೇವೇಗೌಡ ಅಭಿಮತ

ಮೈಸೂರು, ಜ.19(ಎಸ್‌ಬಿಡಿ)– ಹಿರಿಯರು ಹಾಗೂ ಅನಾಥರ ಸೇವೆ ಮಾಡುವ ಸಂಸ್ಥೆಗಳಿಗೆ ಸಾರ್ವಜನಿಕರು ಉದಾರತೆಯಿಂದ ಕೈ ಜೋಡಿಸಬೇಕು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಮನವಿ ಮಾಡಿದರು.

ನಗರದ ಸೇವಾಯಾನ ಟ್ರಸ್ಟ್‌ನ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ವೃದ್ಧರು ಹಾಗೂ ಅನಾಥರ ಸೇವೆ ಮಾಡಿದರೆ ದೇವರ ಸೇವೆ ಮಾಡಿದಂತಾಗುತ್ತದೆ. ಈ ಸತ್ಕಾರ್ಯಕ್ಕೆ ಎಲ್ಲರ ಸಹಕಾರ ಬಹಳ ಮುಖ್ಯ ಎಂದರು.

ಎಲ್ಲಾ ಹಂತದಲ್ಲೂ ಜವಾಬ್ದಾರಿ ನಿರ್ವಹಿಸುವ ಹೆಣ್ಣಿಗೆ ಸಮಾಜದಲ್ಲಿ ಮಹತ್ವದ ಸ್ಥಾನವಿದೆ. ಹೆಣ್ಣನ್ನು ಪ್ರಕೃತಿಗೆ ಹೋಲಿಸುತ್ತೇವೆ. ಪ್ರಸ್ತುತ ಮಹಿಳೆಯರು ಎಲ್ಲಾ ರಂಗಗಳಲ್ಲೂ ಪ್ರಾಮುಖ್ಯತೆ



ಮೈಸೂರಿನ ಸೇವಾಯಾನ ಟ್ರಸ್ಟ್‌ನ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

ಹೊಂದಿದ್ದಾರೆ. ಆದರೂ ಮಹಿಳೆಯರ ಮೇಲಿನ ದೌರ್ಜನ್ಯ ನಿಂತಿಲ್ಲ. ಹಾಗೆಯೇ ಹಿರಿಯರು ಕೌಟುಂಬಿಕ ಜಂಜಾಟದಲ್ಲಿ ಮಾನಸಿಕ ಯಾತನೆ ಅನುಭವಿಸುತ್ತಿದ್ದಾರೆ. ಎಲ್ಲರೂ ನೆಮ್ಮದಿಯಾಗಿ ಬದುಕುವ ವಾತಾವರಣ ನಿರ್ಮಾಣವಾಗಬೇಕಿದೆ ಎಂದು ಆಶಿಸಿದರು.

ಈಗಿನ ಪರಿಸ್ಥಿತಿಯಲ್ಲಿ ಮಾನಸಿಕ ನೆಮ್ಮದಿ ತುಂಬಾ ಕಷ್ಟವಾಗಿದೆ. ಹಲವು ಕಾರಣಗಳಿಂದ ಕುಟುಂಬಗಳಲ್ಲಿ ಸಂತೋಷ ಇಲ್ಲವಾಗಿದೆ. ಈ ಕಾರಣಕ್ಕೆ ಹಲವರು ಅನಾಥಾಶ್ರಮ ಹಾಗೂ ವೃದ್ಧಾಶ್ರಮಗಳಲ್ಲಿ ನೆಲೆಸುತ್ತಿದ್ದಾರೆ. ಹಿರಿಯರು, ತಾಯಂದಿರ ಸೇವೆ ಮಾಡುವುದು ಮುಖ್ಯ. ಮನುಷ್ಯ ಅಂತ್ಯದಲ್ಲಿ ಏನನ್ನೂ ತೆಗೆದುಕೊಂಡು ಹೋಗುವುದಿಲ್ಲ. ಯಾರೂ ಜೊತೆಯಲ್ಲಿ ಬರುವುದಿಲ್ಲ. ಈ ಸತ್ಯವನ್ನು ಅರಿತು ಬದುಕಿರುವಾಗ ಸಮಾಜಕ್ಕಾಗಿ ಏನಾದರೂ ಸೇವೆ ಮಾಡಬೇಕು ಎಂದರು.

ಸಮಾಜಮುಖಿ ಕೆಲಸದಲ್ಲಿ ತೊಡಗಿರುವ ಸೇವಾಯಾನ ಟ್ರಸ್ಟ್‌ನಂತಹ ಸಂಸ್ಥೆಗಳಿಗೆ ದಾನಿಗಳು ಹೆಚ್ಚಿನ ನೆರವು ನೀಡಬೇಕು. ವೃದ್ಧಾಶ್ರಮಗಳು ದೇವಾಲಯ ಇದ್ದಂತೆ. ಕುಟುಂಬ ತೊರೆದಿರುವ ಅವರಿಗೆ ಪ್ರೀತಿ–ವಿಶ್ವಾಸ ಬಹಳ ಮುಖ್ಯವಾಗುತ್ತದೆ. ಧ್ಯಾನದಂತೆ ನೊಂದವರ ಸೇವೆಯ ಮೂಲಕವೂ ದೇವರನ್ನು ಕಾಣಬಹುದು. ಈ ನಿಟ್ಟಿನಲ್ಲಿ ನಾವೆಲ್ಲರೂ ಸಾಗಬೇಕಿದೆ ಎಂದು ಹೇಳಿದರು.

ಸೇವಾಯಾನ ಸಂಸ್ಥೆಯ ಹಿರಿಯರಾದ ಚನ್ನಮ್ಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ವಿಜಯ ಕುಮಾರ್ ನಾಗನಾಳ್, ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್ ಮುಖ್ಯಸ್ಥ ಎಂ.ಎನ್. ಜೈಪ್ರಕಾಶ್, ದುರ್ಗಾ ಹೆಲ್ತ್ ಕೇರ್ ಚಾರಿಟಬಲ್ ಟ್ರಸ್ಟ್ ಮುಖ್ಯಸ್ಥರಾದ ಜ್ಯೋತಿಲಕ್ಷ್ಮೀ ಭಟ್, ಸೇವಾಯಾನ ಟ್ರಸ್ಟ್ ಅಧ್ಯಕ್ಷೆ ಬಿ.ಎಸ್. ಪ್ರಭಾಮಣಿ, ಕಾರ್ಯದರ್ಶಿ ಎಂ.ಆಶಾ, ಧರ್ಮದರ್ಶಿ ಕೆ.ಎಂ.ಪ್ರಭಾಶಂಕರ್, ಪತ್ರಕರ್ತ ರಾಜಕುಮಾರ್ ಬಾವಸಾರ್ ಮತ್ತಿತರರು ಉಪಸ್ಥಿತರಿದ್ದರು.

ರಂಗದೃಶ್ಯಗಳು, ರಂಗಗೀತೆಗಳು, ರಂಗನಾಟಕ ಪುಸ್ತಕ ಬಿಡುಗಡೆ



ರಂಗದೃಶ್ಯಗಳು, ರಂಗಗೀತೆಗಳು, ರಂಗನಾಟಕ ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ಕ್ಲಾರಿಯೋನೆಟ್ ಕಲಾವಿದ ಡಿ.ರಾಮು ಉದ್ಘಾಟಿಸಿದರು.

ಮೈಸೂರು, ಜ.19(ಎಂಕೆ)– ಮೈಸೂರಿನ ರಾಮಕೃಷ್ಣನಗರದಲ್ಲಿರುವ ರಮಾಗೋವಿಂದ ರಂಗಮಂದಿರದಲ್ಲಿ ರಂಗಭೂಮಿ–ಚಲನಚಿತ್ರ ನಟ ರಾಜಾನಂದ್ ಸ್ಮರಣಾರ್ಥ ರಂಗರತ್ನಾಕರ ವತಿಯಿಂದ ರಂಗದೃಶ್ಯಗಳು, ರಂಗಗೀತೆಗಳು, ರಂಗನಾಟಕ ಮತ್ತು ರಂಗನಾಟಕ ಪುಸ್ತಕಗಳ ಬಿಡುಗಡೆ ಕಾರ್ಯಕ್ರಮ ನಡೆಯಿತು.

ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ಕ್ಲಾರಿಯೋನೆಟ್ ಕಲಾವಿದ ಡಿ.ರಾಮು, ದೀಪ ಬೆಳಗಿಸಿ ಕ್ಲಾರಿಯೋನೆಟ್ ನುಡಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ವಿದ್ವಾನ್ ಬೆಳ್ಳಾವೆ ನರಹರಿ ಶಾಸ್ತ್ರಿ ರಚಿತ 'ಶ್ರೀ ರುಕ್ಮಿಣಿ ಸ್ವಯಂವರ', ಎನ್.ಡಿ.ಬಜ್ಜಣ್ಣ ನೆಲವಾಗಿಲು ರಚಿತ 'ಕೈವಾರ ಮಹಾತ್ಮೆ' ಮತ್ತು 'ಶ್ರೀ ಕೃಷ್ಣ ಲೀಲೆ(ಮಕ್ಕಳಿಗಾಗಿ)' ಹಾಗೂ ಹೆಚ್.ಎಲ್.ಎನ್.ಸಿಂಹ ರಚಿತ 'ಸಂಸಾರ ನೌಕೆ' ರಂಗನಾಟಕ ಕೃತಿಗಳನ್ನು ಪತ್ರಕರ್ತ ಗಣೇಶ ಅಮೀನಗಡ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, 'ಸಂಸಾರನೌಕೆ' ನಾಟಕ 1931ರಲ್ಲಿ ರಚನೆಗೊಂಡು ಸಿನಿಮಾವಾಯಿತು. ಈ ನಾಟಕವೂ ಬೆಂಗಳೂರಿನ ತುಳಸಿ ಥಿಯೇಟರ್‌ನಲ್ಲಿ ನೂರು ದಿನಗಳ ಕಾಲ ಪ್ರದರ್ಶನಗೊಂಡಿತ್ತು ಎಂದು ಹಲವರು ಪ್ರಶಂಸಿಸಿದ್ದಾರೆ ಎಂದರು. ಹಾಗೆಯೇ ಈ ಎಲ್ಲಾ ನಾಟಕಗಳು ಜನಮಾನಸ ಗೊಂಡಿವೆ ಎಂದು ಹೇಳಿದರು. ನಂತರ ರಾಮಾಯಣ ನಾಟಕದಲ್ಲಿ ಕೈಕೆಯ ಅಂತಃಪುರ, ರಾವಣೇಶ್ವರ ನಾಟಕದಲ್ಲಿ ಅಂತಃಪುರ ಹಾಗೂ ಕುರುಕ್ಷೇತ್ರ ನಾಟಕದಲ್ಲಿ ಶಕುನಿಯ ಏಕಾಂತ ದೃಶ್ಯಗಳನ್ನು ಪ್ರಸ್ತುತಪಡಿಸಲಾಯಿತು.

ಕಾರ್ಯಕ್ರಮದಲ್ಲಿ ಕನ್ನಡ ವಿಕಾಸ, ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಸಂಸ್ಥೆ ಕಾರ್ಯದರ್ಶಿ ಪ್ರೊ.ಹೆಚ್.ಜಿ.ಕೃಷ್ಣಪ್ಪ, ರಂಗರತ್ನಾಕರ ಅಧ್ಯಕ್ಷ ಕಿರಗಸೂರು ರಾಜಪ್ಪ, ಕಾರ್ಯದರ್ಶಿ ಹೆಚ್.ಎಸ್. ಗೋವಿಂದಗೌಡ ಉಪಸ್ಥಿತರಿದ್ದರು.

ಕೊಯಮತ್ತೂರಿನ ಈಶಾ ಯೋಗ ಕೇಂದ್ರಕ್ಕೆ ಶಿವ ಯಾತ್ರೆ ಆರಂಭ



ಮೈಸೂರಲ್ಲಿ ಶಿವ ಯಾತ್ರೆ ವೇಳೆ ಆದಿಯೋಗಿ ರಥದಲ್ಲಿರುವ ಶಿವನಿಗೆ ಭಕ್ತರು ನಮಿಸಿದರು.

ಮೈಸೂರು, ಜ.19(ಎಸ್‌ಬಿಡಿ)– ಮೈಸೂರಿನಿಂದ ತಮಿಳುನಾಡು ಕೊಯಮತ್ತೂರಿನ ಈಶಾ ಯೋಗ ಕೇಂದ್ರಕ್ಕೆ 'ಶಿವ ಯಾತ್ರೆ' ಭಾನುವಾರ ಪ್ರಾರಂಭವಾಯಿತು.

ಚಾಮುಂಡಿಬೆಟ್ಟ ತಪ್ಪಲಿನ ಶ್ರೀ ಸುತ್ತೂರು ಮಠದ ಆವರಣದಲ್ಲಿ ಭವ್ಯ ಗುರುಪೂಜೆ, ಇರುಮುಡಿ ಮೆರವಣಿಗೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳೊಂದಿಗೆ ಆದಿಯೋಗಿ ರಥ ಸಹಿತ ಶಿವ ಯಾತ್ರೆ ಪ್ರಾರಂಭಗೊಂಡಿತು.

ಅಲ್ಲಿಂದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ದೇವಾಲಯಗಳು ಸೇರಿದಂತೆ ಹಲವು ಪವಿತ್ರ ಸ್ಥಳಗಳ ಮೂಲಕ ಸಾಗಿ ಅನ್ನಪೂರ್ಣೇಶ್ವರಿ ದೇವಾಲಯದಲ್ಲಿ ತಂಗಿತು. ಮಾರ್ಗದುದ್ದಕ್ಕೂ ಸ್ವಯಂ ಸೇವಕರು, ಶಿವಭಕ್ತರು ಶಿವಸ್ಮರಣೆಯೊಂದಿಗೆ ರಥ ಎಳೆದು ಪುನೀತರಾದರು. ಮೈಸೂರಿನಿಂದ ಭಾನುವಾರ ಪ್ರಾರಂಭವಾದ ಈ ದೈವಿಕ ಯಾತ್ರೆಯು 37 ದಿನಗಳಲ್ಲಿ ಸುಮಾರು 650 ಕಿ.ಮೀ. ಕ್ರಮಿಸಿ, ಫೆ.24ರಂದು ಕೊಯಮತ್ತೂರಿನ ಈಶ ಯೋಗ ಕೇಂದ್ರದಲ್ಲಿ ಸಂಪನ್ನಗೊಳ್ಳಲಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

'ಕ್ರೀಡಾ ಮಿತ್ರ'

ಕ್ರೀಡಾಪಟುಗಳಿಗೆ ಸರ್ಕಾರಿ ಉದ್ಯೋಗದಲ್ಲಿ ಕನಿಷ್ಠ ಶೇ.2 ಮೀಸಲಾತಿ ಕಲ್ಪಿಸಲು ಆಗ್ರಹ

ವಿವಿಧ ಹಂತದಲ್ಲಿ ಮೈಸೂರು ವಿವಿ ಪ್ರತಿನಿಧಿಸಿದ ಅಥ್ಲೀಟ್‌ಗಳಿಗೆ ಅಭಿನಂದನಾ ಸಮಾರಂಭದಲ್ಲಿ ಮೈಸೂರು ಅಥ್ಲೆಟಿಕ್ ಕ್ಲಬ್ ಕಾರ್ಯಾಧ್ಯಕ್ಷ ಡಾ.ಸಿ.ಕೃಷ್ಣ ಪ್ರತಿಪಾದನೆ



ಮೈಸೂರು ಅಥ್ಲೆಟಿಕ್ ಕ್ಲಬ್ ವತಿಯಿಂದ ಸಾಧಕ ಕ್ರೀಡಾಪಟುಗಳು, ಕ್ರೀಡಾ ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಜ.19(ಎಸ್‌ಬಿಡಿ)– ಸರ್ಕಾರಿ ಉದ್ಯೋಗದಲ್ಲಿ ಕ್ರೀಡಾಪಟುಗಳಿಗೆ ಕನಿಷ್ಠ ಶೇ.2ರಷ್ಟು ಮೀಸಲಾತಿ ಕಲ್ಪಿಸಬೇಕು ಎಂದು ಮೈಸೂರು ಅಥ್ಲೆಟಿಕ್ ಕ್ಲಬ್ ಕಾರ್ಯಾಧ್ಯಕ್ಷ ಡಾ.ಸಿ.ಕೃಷ್ಣ ಸರ್ಕಾರಕ್ಕೆ ಮನವಿ ಮಾಡಿದರು.

ಮೈಸೂರು ಅಥ್ಲೆಟಿಕ್ಸ್ ಕ್ಲಬ್ ವತಿಯಿಂದ 2022–24ನೇ ಸಾಲಿನಲ್ಲಿ ರಾಷ್ಟ್ರ ಮಟ್ಟದಲ್ಲಿ ರಾಜ್ಯ ಹಾಗೂ ಮೈಸೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿರುವ ಜಿಲ್ಲೆಯ ಅಥ್ಲೀಟ್‌ಗಳು, ಕ್ರೀಡಾ ಪ್ರೋತ್ಸಾಹಕ ಪತ್ರಕರ್ತರು, ಕ್ರೀಡಾ ಪತ್ರಕರ್ತ ಹಾಗೂ ಕ್ರೀಡಾ ಛಾಯಾಗ್ರಾಹಕರಿಗೆ ಪ್ರಶಸ್ತಿ ಪ್ರದಾನ ಮಾಡಲು ಲಯನ್ಸ್ ಕ್ಲಬ್ ಸಭಾಂಗಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಅವರು ಮಾತನಾಡಿದರು.

ರಾಜ್ಯ ಸರ್ಕಾರ ಉದ್ಯೋಗ ನೇಮಕಾತಿಯಲ್ಲಿ ಕ್ರೀಡಾಪಟುಗಳಿಗೆ ಶೇ.2ರಷ್ಟು ಮೀಸಲಾತಿ ನೀಡಲು ಮುಂದಾಗಿತ್ತು. ಆದರೆ ಅದು ಅನುಷ್ಠಾನವಾಗಲಿಲ್ಲ. ಈ ನಿರ್ಧಾರವನ್ನು ದಿಢೀರ್ ವಾಪಸ್ ಪಡೆಯಿತು. ಕ್ರೀಡಾಪಟುಗಳಿಗೆ ಉತ್ತೇಜನ ನೀಡುವುದರೊಂದಿಗೆ ಕ್ರೀಡಾ ಕ್ಷೇತ್ರದ ಬೆಳವಣಿಗೆ ದೃಷ್ಟಿಯಿಂದ ಉದ್ಯೋಗದಲ್ಲಿ ಮೀಸಲಾತಿ ನೀಡಬೇಕು ಎಂದರು.

> ಇತ್ತೀಚೆಗೆ ಕ್ರೀಡೆ ಒಂದು ಉದ್ಯಮವಾಗುತ್ತಿದೆ. ಆದರೂ ಮೂರು ದಶಕಗಳ ಹಿಂದಕ್ಕೆ ಹೋಲಿಸಿದರೆ ಸೌಲಭ್ಯ ಹಾಗೂ ಪ್ರೋತ್ಸಾಹದ ದೃಷ್ಟಿಯಲ್ಲಿ ಸದ್ಯದ ಪರಿಸ್ಥಿತಿ ಉತ್ತಮವಾಗಿದೆ. ಇದರ ಸದುಪಯೋಗ ಪಡೆದು ಸಾಧನೆ ಮಾಡಬೇಕು. ಒಂದು ಹಂತದ ಸಾಧನೆಯ ನಂತರ ಕ್ರೀಡೆಯಿಂದ ವಿಮುಖರಾಗಬಾರದು. ಇನ್ನೂ ಹೆಚ್ಚಿನ ಸಾಧನೆ ಹಸಿವು ಇರಬೇಕು.
> –ಗಿರೀಶ್ ಆರ್.ದೊಡ್ಡಮನಿ, ಹಿರಿಯ ಕ್ರೀಡಾ ಪತ್ರಕರ್ತ

ಪ್ರಶಸ್ತಿ ಪುರಸ್ಕೃತರು: ಸಮಾರಂಭದಲ್ಲಿ 2022–23ನೇ ಸಾಲಿನ ಅತ್ಯುತ್ತಮ ಅಥ್ಲೀಟ್ ಪ್ರಶಸ್ತಿಯನ್ನು ವಿ.ಅಂಬಿಕಾ, 2023–24ನೇ ಸಾಲಿನ ಪ್ರಶಸ್ತಿಯನ್ನು ಕಶ್ಯ ಅಗ್ರಹಾರ ಸತ್ಯಜಿತ್ ಮತ್ತು ಲಕ್ಷ್ಯ, 2022–23ನೇ ಸಾಲಿನ ಅತ್ಯುತ್ತಮ ಕ್ರೀಡಾ ಪ್ರೋತ್ಸಾಹಕ ಪತ್ರಕರ್ತ ಪ್ರಶಸ್ತಿಯನ್ನು ಅಂಶಿ ಪ್ರಸನ್ನಕುಮಾರ್, 2022–23ನೇ ಸಾಲಿನ ಅತ್ಯುತ್ತಮ ಕ್ರೀಡಾ ವರದಿಗಾರಿಕೆ ಪ್ರಶಸ್ತಿಯನ್ನು ಸಿ.ಮೋಹನ್‌ಕುಮಾರ್, 2023–24ನೇ ಸಾಲಿನ ಪ್ರಶಸ್ತಿಯನ್ನು ಎಚ್.ಎಸ್.ದಿನೇಶ್‌ಕುಮಾರ್, 2022–23ನೇ ಸಾಲಿಗೆ ಅತ್ಯುತ್ತಮ ಕ್ರೀಡಾ ಛಾಯಾಗ್ರಾಹಕ ಪ್ರಶಸ್ತಿಯನ್ನು ಹಂಪಾ ನಾಗರಾಜ, 2023–24ನೇ ಸಾಲಿನ ಪ್ರಶಸ್ತಿಯನ್ನು ಕೆ.ಎಚ್.ಚಂದ್ರು ಅವರಿಗೆ ಪ್ರದಾನ ಮಾಡಲಾಯಿತು. ಇದೇ ವೇಳೆ ಅಥ್ಲೀಟ್‌ಗಳಾದ ಎಂ.ಎ.ವರ್ಷಾ, ಪಿ.ಚಿರಂತ್, ಎಸ್.ಕೆ.ರಿಯಾ, ರಾಹುಲ್ ನಾಯಕ್, ಎಂ.ಕೆ.ಚಿಕ್ಕಮ್ಮ, ಎಂ.ಸಂಜನಾ ರೆಡ್ಡಿ, ತೇಜಸ್ವಿನಿ, ವಿಶೇಷ ಚೇತನ ಕ್ರೀಡಾಪಟು ಹರ್ಷಿತಾಗೌಡ ಅವರಿಗೆ ಪ್ರಶಸ್ತಿ ಪಾರಿತೋಷಕ ನೀಡಿ ಅಭಿನಂದಿಸಲಾಯಿತು.

ಹಿರಿಯ ಕ್ರೀಡಾ ಪತ್ರಕರ್ತ ಗಿರೀಶ್ ಆರ್.ದೊಡ್ಡಮನಿ ಕಾರ್ಯಕ್ರಮ ಉದ್ಘಾಟಿಸಿದರು. ಕರ್ನಾಟಕ ರಾಜ್ಯ ಅಗ್ನಿಶಾಮಕ ಹಾಗೂ ತುರ್ತುಸೇವೆಗಳ ನಿರ್ದೇಶಕ ಟಿ.ಎನ್.ಶಿವಶಂಕರ್, ಉದ್ಯಮಿ ಕೆ.ಸಿ.ಪ್ರತಾಪಸಿಂಗ್ ರಾಜ್ ಪುರೋಹಿತ್, ಕ್ಲಬ್ ಕಾರ್ಯದರ್ಶಿ ಯೋಗೇಂದ್ರ, ಕಾಂತರಾಜು, ಸಿ.ಕೆ.ಮುರಳೀಧರನ್, ಜಿ.ಆರ್.ಪ್ರಭಾಕರ್, ಕೆ.ಗುರುರಾಜ್, ಬಿ.ಶ್ರೀಕಾಂತ್, ಮಹದೇವಯ್ಯ, ಹೆಚ್.ಆರ್.ರಾಮಸ್ವಾಮಿ, ಸುಬ್ಬಣ್ಣ, ಕೆ.ಬಿ.ಗಂಗಾಧರ್, ಬಿ.ಕೆ.ರಾಜೇ ಅರಸ್ ಮತ್ತಿತರರು ಉಪಸ್ಥಿತರಿದ್ದರು.

ಸಣ್ಣಪುಟ್ಟ ವಿಚಾರಕ್ಕೂ ಯುವಕರು ಆತ್ಮಹತ್ಯೆ

ವಿಆರ್‌ಎಲ್ ಸಮೂಹ ಸಂಸ್ಥೆ ಎಂಡಿ ಡಾ.ಆನಂದ್ ಸಂಕೇಶ್ವರ್ ವಿಷಾದ



'ಕ್ರಾಂತಿಕಾರಿ ಭವಿಷ್ಯ: ಉದ್ಯಮಿ ಆನಂದ್ ಸಂಕೇಶ್ವರ್ ಅವರ ದೃಷ್ಟಿಕೋನ' ವಿಷಯ ಕುರಿತ ಕಾರ್ಯಕ್ರಮದಲ್ಲಿ ವಿಆರ್‌ಎಲ್ ಸಮೂಹ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಆನಂದ ಸಂಕೇಶ್ವರ್, ಪತ್ನಿ ವಾಣಿ ಆನಂದ್ ಸಂಕೇಶ್ವರ್ ಅವರನ್ನು ಗೌರವಿಸಲಾಯಿತು.

ಮೈಸೂರು, ಜ.19(ಎಸ್‌ಪಿಎನ್)– ಜೀವನದ ಸಣ್ಣಸಣ್ಣ ವಿಷಯಗಳನ್ನು ಪರಿಹರಿಸಿಕೊಳ್ಳಲಾರದೇ ಯುವಕರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಸರಿಯಾದ ಕ್ರಮವಲ್ಲ ಎಂದು ವಿಆರ್‌ಎಲ್ ಸಮೂಹ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಆನಂದ ಸಂಕೇಶ್ವರ ಅಭಿಪ್ರಾಯಪಟ್ಟರು.

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಅಂತರರಾಷ್ಟ್ರೀಯ ಲಿಂಗಾಯತ್ ಯೂತ್ ಫೋರಂ ಮೈಸೂರು ಘಟಕದ ವತಿಯಿಂದ ಏರ್ಪಡಿಸಿದ್ದ ವೀರಶೈವ ಲಿಂಗಾಯತ ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್–2025ನಲ್ಲಿ ಭಾಗವಹಿಸಿ 'ಕ್ರಾಂತಿಕಾರಿ ಭವಿಷ್ಯ: ಉದ್ಯಮಿ ಆನಂದ್ ಸಂಕೇಶ್ವರ್ ಅವರ ದೃಷ್ಟಿಕೋನ' ವಿಷಯ ಕುರಿತು ಮಾತನಾಡಿದರು.

ನನ್ನ ತಂದೆಯವರ ಸಲಹೆ, ಸೂಚನೆ ಪಾಲಿಸಿದ್ದರಿಂದ ಇಂದು ಉದ್ಯಮದಲ್ಲಿ ನಾನು ಬೆಳೆಯಲು ಸಾಧ್ಯವಾಯಿತು. ಆದರೀಗ ಯುವ ಜನರು ಸಣ್ಣ ವಿಷಯಕ್ಕೂ ಆತ್ಮಹತ್ಯೆ ದಾರಿ ತುಳಿಯುತ್ತಿದ್ದಾರೆ. ಇದು ಸರಿಯಲ್ಲ. ಯುವಕರು ತಮ್ಮ ಪಾಲಕರ ಮಾತು ಕೇಳಬೇಕು ಎಂದು ಹೇಳಿದರು.

> **ನಮ್ಮ ಕಂಪನಿಯ ಲಾರಿಗಳಿಗೆ ಬರೀ ಪುರುಷ ಚಾಲಕರಿದ್ದಾರೆ. ಮುಂದಿನ ದಿನಗಳಲ್ಲಿ ಮಹಿಳಾ ಚಾಲಕಿಯರು ಬರಲಿದ್ದಾರೆ. ನಮ್ಮ ಲಘು ವಿಮಾನಕ್ಕೆ ಇಬ್ಬರು ಮಹಿಳಾ ಪೈಲಟ್‌ಗಳಿದ್ದಾರೆ. ಇದು ಮಹಿಳಾ ಸಬಲೀಕರಣದ ಮುನ್ಸೂಚನೆ.**
> –ಡಾ.ಆನಂದ ಸಂಕೇಶ್ವರ

ಆರ್ಥಿಕ ಶಿಸ್ತು ನಮ್ಮ ಕಂಪನಿಯ ಯಶಸ್ಸಿನ ಮತ್ತೊಂದು ಸೂತ್ರ. 48 ವರ್ಷದಲ್ಲಿ ನಮ್ಮ ಸಂಸ್ಥೆಯ ಒಂದೇ ಒಂದು ಚೆಕ್ ಬೌನ್ಸ್ ಆಗಿಲ್ಲ. ನಮ್ಮ ಸಂಸ್ಥೆಯಲ್ಲಿ 6,200 ವಾಣಿಜ್ಯ ವಾಹನಗಳಿವೆ. ದೇಶಾದ್ಯಂತ 1,250 ಶಾಖೆ ತೆರೆಯಲಾಗಿದೆ. ವಿಆರ್‌ಎಲ್ ಲಾಜಿಸ್ಟರ್ ಕಂಪನಿವೊಂದಕ್ಕೆ ಜಿಎಸ್‌ಟಿ ನೋಂದಾಯಿತ ಗ್ರಾಹಕರ ಸಂಖ್ಯೆಯೇ 9 ಲಕ್ಷ ಇದೆ ಎಂದರು.

ದಿನವೊಂದಕ್ಕೆ ಬಸ್, ಲಾರಿಗಳ 150 ಟಯರ್ ಬದಲಾಯಿಸಲಾಗುತ್ತದೆ. ಇದರ ತಿಂಗಳ ವೆಚ್ಚ 10 ಕೋಟಿ ರೂ. ಇದೀಗ ಕರ್ನಾಟಕ ಸೇರಿದಂತೆ ಆರು ರಾಜ್ಯದಲ್ಲಿ ವಿಆರ್‌ಎಲ್ ಬಸ್ ಸೇವೆ ನೀಡಿದ್ದೇವೆ. ನಿತ್ಯ 12 ಲಕ್ಷ ಪ್ರಯಾಣಿಕರಿಗೆ ಸೇವೆ ನೀಡಲಾಗುತ್ತಿದೆ ಅಲ್ಲದೆ, ಒಮ್ಮೆ ಯುರೋಪ್ ಪ್ರವಾಸಕ್ಕೆ ಹೋದಾಗ 'ಚಾಲಕರು ಬೇಕಾಗಿದ್ದಾರೆ' ಎಂಬ ಫಲಕ ಗಮನಿಸಿದೆ. ಇದೇ ರೀತಿ ನಮ್ಮ ಲಾರಿಗಳ ಮೇಲೆ ಫಲಕ ಹಾಕಿಸಿದೆ. ಅಂದಿನಿಂದ ಸಾವಿರಾರು ಕರೆಗಳು ಆಸಕ್ತ ಚಾಲಕರಿಂದ ಬಂದವು. ಅದು ಈಗಲೂ ನಿಂತಿಲ್ಲ. ಇದೀಗ 6,200 ಲಾರಿಗಳ ಪೈಕಿ ಕೇವಲ 30ರಿಂದ 40 ಲಾರಿಗಳಷ್ಟೇ ನಿಂತುಕೊಳ್ಳುತ್ತಿವೆ ಎಂದರು.

ಸರ್ಕಾರಿ ನಿಯಮ ಪಾಲಿಸಿ: ಉದ್ದಿಮೆದಾರರು ರಾಜ್ಯ ಮತ್ತು ಕೇಂದ್ರ ಸರ್ಕಾರದ ನಿಯಮಗಳನ್ನು ಪಾಲನೆ ಮಾಡಲೇಬೇಕು. ಈ ವಿಷಯದಲ್ಲಿ ನಾವು ಶಿಸ್ತು ಬೆಳೆಸಿಕೊಂಡಿದ್ದೇವೆ. ಉದಾಹರಣೆಗೆ, ವ್ಹೀಲ್ ಟ್ಯಾಕ್ಸ್ ಪ್ರತಿ ತಿಂಗಳ 15ರ ಒಳಗೆ ತುಂಬಬೇಕು. ಇಲ್ಲವಾದರೆ, ದಂಡ ದುಪ್ಪಟ್ಟು ಆಗಲಿದೆ. ಇದಕ್ಕಾಗಿ ನಮ್ಮ 2 ಕಂಪನಿಯಿಂದ ತಿಂಗಳಿಗೆ 15 ಕೋಟಿ ರೂ. ಪಾವತಿಸಲಾಗುತ್ತಿದೆ. ದಿನವೊಂದಕ್ಕೆ ಲಾರಿಗಳಿಂದ 70 ಲಕ್ಷ ರೂ., ಬಸ್‌ಗಳಿಂದ 10 ಲಕ್ಷ ರೂ. ಟೋಲ್ ಕಟ್ಟಲಾಗುತ್ತದೆ ಎಂದು ವಿವರಿಸಿದರು.

ಶಿಕ್ಷಣ, ಉದ್ಯೋಗಕ್ಕಿಂತ ಮೊದಲು ಆರೋಗ್ಯಕ್ಕೆ ಪ್ರಾಮುಖ್ಯತೆ ನೀಡಿ

'ಕಾರ್ಪೊರೇಟ್ ಹೆಲ್ತ್ ಕಾನ್‌ಕ್ಲೇವ್'ನಲ್ಲಿ ಡಾ.ವಿಜಯ್ ಸಿಂಗ್ ಮನವಿ

ಮೈಸೂರು, ಜ.19(ಜಿಎ)–ಎಲ್ಲರೂ ಇಂದು ಶಿಕ್ಷಣ ಮತ್ತು ಕೆಲಸಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಿದ್ದಾರೆ. ಆದರೆ, ನಿಜವಾಗಿಯೂ ಮೊದಲು ಆರೋಗ್ಯಕ್ಕೆ ಪ್ರಾಮುಖ್ಯತೆ ನೀಡಬೇಕು ಎಂದು ನಾರಾಯಣ ಹೆಲ್ತ್‌ನ ಕರ್ನಾಟಕ ಕ್ಲಸ್ಟರ್ ಮತ್ತು ಕಾರ್ಪೊರೇಟ್ ಬೆಳವಣಿಗೆಯ ನಿರ್ದೇಶಕ ಡಾ.ವಿಜಯ್ ಸಿಂಗ್ ತಿಳಿಸಿದರು.

ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಆವರಣದಲ್ಲಿ ಮೈಸೂರಿನ ನಾರಾಯಣ ಆಸ್ಪತ್ರೆ ವತಿಯಿಂದ ಆಯೋಜಿಸಿದ್ದ 'ಕಾರ್ಪೊ ರೇಟ್ ಹೆಲ್ತ್ ಕಾನ್‌ಕ್ಲೇವ್' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾರಾಯಣ ಸಂಸ್ಥೆಯು 2001ರಲ್ಲಿ ಬೆಂಗಳೂರು, ಕೋಲ್ಕತ ಹಾಗೂ ಮೈಸೂರು ಸೇರಿದಂತೆ ದೇಶ ಮತ್ತು ವಿದೇಶದಲ್ಲಿ ಸೇವೆ ಆರಂಭಿಸಿ, ಸಾವಿರಾರು ಮಂದಿಗೆ ಆರೋಗ್ಯ ನಿರ್ವಹಣೆಯ ಸಲಹೆ, ಶಸ್ತ್ರಚಿಕಿತ್ಸೆ ಮೂಲಕ ಯಶಸ್ವಿಯಾಗಿ 25 ವರ್ಷ ಪೂರೈಸುತ್ತಿದೆ. ಇದಕ್ಕೆ ಜನರು ನಮ್ಮ ಮೇಲೆ ಇಟ್ಟಿರುವ ನಂಬಿಕೆಯೇ ಕಾರಣ ಎಂದರು.



ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಆವರಣದಲ್ಲಿ ಮೈಸೂರಿನ ನಾರಾಯಣ ಆಸ್ಪತ್ರೆ ವತಿಯಿಂದ ಭಾನುವಾರ ಆಯೋಜಿಸಿದ್ದ 'ಕಾರ್ಪೊರೇಟ್ ಹೆಲ್ತ್ ಕಾನ್‌ಕ್ಲೇವ್' ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಇದೇ ನಂಬಿಕೆಯೊಂದಿಗೆ ನೀವು ಇಂದು ನಮ್ಮೊಟ್ಟಿಗೆ ಇರುವುದು ಮತ್ತಷ್ಟು ಸಂತಸ ಹೆಚ್ಚಿಸಿದೆ. ನಿಮಗೆ ಮತ್ತಷ್ಟು ಹತ್ತಿರವಾಗಲು ತಂತ್ರಜ್ಞಾನದ ಮೂಲಕ ಪ್ರಯತ್ನಿಸುತ್ತಿದ್ದೇವೆ. ನೀವು ಒತ್ತಡದ ಕೆಲಸ ಮತ್ತು ಶಿಕ್ಷಣಕ್ಕೆ ನೀಡುತ್ತಿರುವ ಪ್ರಾಮುಖ್ಯತೆಯನ್ನು ಆರೋಗ್ಯಕ್ಕೆ ಕೊಡಿ ಎಂದು ಸಲಹೆ ನೀಡಿದರು.

ನಂತರ ವೈದ್ಯಕೀಯ ನಿರ್ದೇಶಕ ಡಾ.ಆಶೀಸ್ ಬಜಾಜ್ ಮಾತನಾಡಿ, ಅತ್ಯುತ್ತಮ ತಂತ್ರಜ್ಞಾನದ ಮೂಲಕ ನಾವು ಈಗಾಗಲೇ ಜನರನ್ನು ತಲುಪಿದ್ದೇವೆ. ಮುಂದಿನ ದಿನಗಳಲ್ಲಿ ಮತ್ತಷ್ಟು ತಂತ್ರಜ್ಞಾನದ ಮೂಲಕ ಉನ್ನತೀಕರಿಸುತ್ತೇವೆ. ಹಾಗೇ ಅಧಿತಿ ಇನ್ಸುರೆನ್ಸ್ ಪರಿಚಯಿಸಿದ್ದು, ದೊಡ್ಡ ಮಟ್ಟದಲ್ಲಿ ಎಲ್ಲಾ ಕಾರ್ಪೊರೇಟ್ ಸಂಸ್ಥೆಗಳಿಗೆ ಸೇವೆ ನೀಡುತ್ತೇವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬೆಳಗ್ಗೆ 6.30ಕ್ಕೆ ಯೋಗ ಮತ್ತು ಜುಂಬಾ ಮಾಡಲಾಯಿತು. ನಂತರ ಮೈಸೂರಿನ ವಿವಿಧ ಕಾರ್ಪೊರೇಟ್ ಸಂಸ್ಥೆಗಳ ಉದ್ಯೋಗಿಗಳಿಗೆ ಉಚಿತವಾಗಿ ಎಕೋ, ಡೆಂಟಲ್, ಹೃದಯ ತಪಾಸಣೆ ಸೇರಿದಂತೆ ವಿವಿಧ ತಪಾಸಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ವಿದ್ಯಾವರ್ಧಕ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಸದಾಶಿವೇಗೌಡ, ಕಾರ್ಯದರ್ಶಿ ಪಿ.ವಿಶ್ವನಾಥ್, ನಾರಾಯಣ ಆಸ್ಪತ್ರೆಯ ಕ್ಲಿನಿಕಲ್ ನಿರ್ದೇಶಕ ಮತ್ತು ಹೃದಯ ತಜ್ಞ ಡಾ.ಎಂ.ಎನ್.ರವಿ, ಗ್ಯಾಸ್ಟ್ರೋಎಂಟಯಾಲಜಿ ಸಮಾಲೋಚಕ ಡಾ.ಸತೀಶ್‌ರಾವ್, ಹೃದಯಶಾಸ್ತ್ರ ವಿಭಾಗದ ನಿರ್ದೇಶಕ ಡಾ.ಕೇಶವ್, ಪ್ರಾದೇಶಿಕ ಮಾರ್ಕೆಟಿಂಗ್ ಹೆಡ್ ರಾಜಾಸಿಂಗ್, ಪವನ್ ಕುಮಾರ್ ಮತ್ತು ಜಿಎಸ್‌ಎಸ್ ಮಾಧ್ಯಮದ ಮುಖ್ಯಸ್ಥ ಶ್ರೀಹರಿ ಉಪಸ್ಥಿತರಿದ್ದರು.

ಲಿಂಗಾಂಬುದಿ ಕೆರೆಯಲ್ಲಿ ಎರಡು ಮರಿಯೊಂದಿಗೆ ಚಿರತೆ ಪ್ರತ್ಯಕ್ಷ: ವಾಯುವಿಹಾರಿಗಳ ಎಚ್ಚರಿಸಿದ ಅರಣ್ಯ ಇಲಾಖೆ

ಮೈಸೂರು, ಜ.19 (ಎಂಟಿವೈ)– ಮೈಸೂರಿನ ಲಿಂಗಾಂಬುದಿ ಕೆರೆ ಆವರಣದಲ್ಲಿ ಎರಡು ಮರಿಗಳೊಂದಿಗೆ ಚಿರತೆಯೊಂದು ವಿಹರಿಸುತ್ತಿದ್ದು, ವಾಯುವಿಹಾರಿಗಳು ಎಚ್ಚರಿಕೆಯಿಂದ ಇರುವಂತೆ ಅರಣ್ಯ ಇಲಾಖೆ ಸೂಚನೆ ನೀಡಿದೆ.

ಕೆರೆ ಸಮೀಪದ ಪ್ರೀತಿ ಬಡಾವಣೆಯಲ್ಲಿ ಕಳೆದ ಮಧ್ಯರಾತ್ರಿ ಎರಡು ಮರಿಯೊಂದಿಗೆ ತಾಯಿ ಚಿರತೆ ಓಡಾಡುತ್ತಿರುವ ದೃಶ್ಯ ಮನೆಯೊಂದರ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಇದನ್ನು ಖಚಿತಪಡಿಸಿಕೊಂಡ ಮನೆ ಮಾಲೀಕರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದರು. ಅದೇ ದಿನ ರಾತ್ರಿ 7.30ರಲ್ಲಿ ಲಿಂಗಾಂಬುದಿ ಕೆರೆ ಆವರಣದಲ್ಲಿ ಚಿರತೆಯೊಂದು ರಸ್ತೆ ದಾಟುತ್ತಿರುವುದನ್ನು ಗಸ್ತು ಸಿಬ್ಬಂದಿ ನೋಡಿದ್ದಾರೆ.

ಇದನ್ನು ಗಂಭೀರವಾಗಿ ಪರಿಗಣಿಸಿದ ಅರಣ್ಯ ಇಲಾಖೆ ಲಿಂಗಾಂಬುದಿ ಕೆರೆ ಮೀಸಲು ಅರಣ್ಯ ಪ್ರದೇಶದಲ್ಲಿರುವ ಕಾರಣ ಅದನ್ನು ಸೆರೆ ಹಿಡಿಯಲು ಸಾಧ್ಯವಿಲ್ಲ. ಅಲ್ಲದೆ, ಕೂಂಬಿಂಗ್ ಕಾರ್ಯಾಚರಣೆ ನಡೆಸಲು ಅವಕಾಶವಿಲ್ಲ. ಇದರಿಂದ ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಕೆರೆ ಆವರಣದಲ್ಲಿ ವಾಯುವಿಹಾರಕ್ಕೆ ಬರುವ ವಿಹಾರಿಗಳು ಗಿಡ, ಪೊದೆಗಳಿರುವ ಸ್ಥಳದಲ್ಲಿ ವಿಹರಿಸದಂತೆ ಸೂಚನೆ ನೀಡಿದ್ದಾರೆ. ಕೇವಲ ವಾಕಿಂಗ್ ಪಾಥ್‌ನಲ್ಲಿ ಮಾತ್ರವೇ ಸಾಗುವಂತೆ ಸಲಹೆ ನೀಡಲಾಗುತ್ತಿದೆ.



ಮೈಸೂರಿನ ಲಿಂಗಾಂಬುದಿ ಕೆರೆಯ ಆವರಣದಲ್ಲಿ ಚಿರತೆ ಪ್ರತ್ಯಕ್ಷವಾದ ಹಿನ್ನೆಲೆಯಲ್ಲಿ ವಾಯುವಿಹಾರಿಗಳಿಗೆ ಎಚ್ಚರಿಕೆ ನೀಡುತ್ತಿರುವ ಸಿಬ್ಬಂದಿ.

ಇನ್ಫೋಸಿಸ್‌ನಲ್ಲಿ ಕಾರ್ಯಾಚರಣೆ ಸ್ಥಗಿತ: ಡಿ.31ರ ಮಧ್ಯರಾತ್ರಿ ಇನ್ಫೋಸಿಸ್ ಆವರಣದಲ್ಲಿ ಕಾಣಿಸಿಕೊಂಡಿದ್ದ ಚಿರತೆ ಸೆರೆಗಾಗಿ ಅರಣ್ಯ ಇಲಾಖೆ ನಡೆಸಿದ ಕಾರ್ಯಾಚರಣೆ ಫಲಪ್ರದವಾಗಿಲ್ಲ. ಸತತ ಕಾರ್ಯಾಚರಣೆ ನಡೆಸಿದರೂ ಚಿರತೆ ಸುಳಿವು ಸಿಗದ ಕಾರಣ, ಜ.14ರಿಂದ ಕೂಂಬಿಂಗ್ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿದೆ. ಅಲ್ಲದೆ, ಇನ್ಫೋಸಿಸ್ ಸಿಬ್ಬಂದಿಗೆ ಕಟ್ಟೆಚ್ಚರ ವಹಿಸುವಂತೆ ಸಲಹೆ ನೀಡಲಾಗಿದೆ. ಡ್ರೋನ್ ಕ್ಯಾಮರಾ ಬಳಸಿ, ಚಿತ್ರೀಕರಿಸುವಂತೆ ಸಿಬ್ಬಂದಿಗೆ ತಿಳಿಸಲಾಗಿದೆ.

ಫೆ.19ರಿಂದ ರಾಷ್ಟ್ರೀಯ ಸಮ್ಮೇಳನ ಆಯೋಜನೆ

ಮೈಸೂರು, ಜ.19– ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ವತಿಯಿಂದ ``Ecotourism: Harnessing Travel to Discover Nature, Promote Conservation and Support Sustainable Development" ವಿಷಯದ ಮೇಲೆ ಫೆ.19 ರಿಂದ 21 ರವರೆಗೆ ಮೂರು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಅಕಾಡೆಮಿಯ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಸಮ್ಮೇಳನದಲ್ಲಿ ವಿವಿಧ ಪ್ರತಿಷ್ಠಿತ ಸಂಸ್ಥೆಗಳ ಹೆಸರಾಂತ ವಿಜ್ಞಾನಿಗಳು ತಾಂತ್ರಿಕ ಉಪನ್ಯಾಸಗಳನ್ನು ನೀಡಲಿದ್ದಾರೆ. ಯುವ ವಿಜ್ಞಾನಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳು reseach paper presentation ಮಂಡಿಸಲು ಅವಕಾಶ ಕಲ್ಪಿಸಲಾಗಿದ್ದು, ಆಯ್ಕೆಯಾದ research paper ಗಳಿಗೆ ನಗದು ಬಹುಮಾನವನ್ನು ನೀಡಲಾಗುವುದು. ಸ್ನಾತಕೋತ್ತರ ವಿಜ್ಞಾನ ವಿದ್ಯಾರ್ಥಿಗಳು ಸಂಶೋಧನಾ ವಿದ್ಯಾರ್ಥಿಗಳು ಪ್ರಾಧ್ಯಾಪಕರು ಯುವ ವಿಜ್ಞಾನಿಗಳು ಶೈಕ್ಷಣಿಕ ತಜ್ಞರು ಯುವ ಉದ್ಯಮದಾರರು ಭಾಗವಹಿಸಬಹುದಾಗಿದ್ದು, ಆಸಕ್ತ ಅಭ್ಯರ್ಥಿಗಳು ಫೆ.12 ರೊಳಗೆ ವೆಬ್‌ಸೈಟ್ https://forms.gle/WCW9krCt8sGQUP55A ಮೂಲಕ ನೋಂದಾಯಿಸಿಕೊಳ್ಳಬಹುದಾಗಿದೆ

ಹೆಚ್ಚಿನ ಮಾಹಿತಿಗಾಗಿ ಅಕಾಡೆಮಿಯ ಅಧಿಕಾರಿಗಳ ಮೊ.ನಂ: 9845258894, 9686449019, & 9620767819 ನ್ನು ಸಂಪರ್ಕಿಸಬಹುದು ಅಥವಾ ಅಕಾಡೆಮಿಯ ವೆಬ್‌ಸೈಟ್ https//:kstacademy.in ಮೂಲಕ ವೀಕ್ಷಿಸಬಹುದಾಗಿದೆ ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಎ.ಎಂ ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಓದಿದರೆ ಹೆಚ್ಚು ಜ್ಞಾನ, ಕೌಶಲದಿಂದ ಅನುಕೂಲ

ಯುವ ಮಹೋತ್ಸವ ಸಾಂಸ್ಕೃತಿಕ, ಕ್ರೀಡಾಕೂಟದಲ್ಲಿ ಅಭಿಪ್ರಾಯ



ಮೈಸೂರಿನ ಅಶೋಕಪುರಂನ ರೈಲ್ವೆ ಕ್ರೀಡಾಂಗಣದಲ್ಲಿ ನಡೆದ ಯುವ ಮಹೋತ್ಸವದಲ್ಲಿ ಲೂನಾರ್ಸ್ ಸಂಸ್ಥೆಯ ಮುಖ್ಯಸ್ಥ ಜಾನ್‌ಸನ್ ಜೋಸೆಫ್ ಮಾತನಾಡಿದರು.

ಮೈಸೂರು, ಜ.19(ಜಿಎ)–ರಾಷ್ಟ್ರೀಯ ಯುವ ದಿನಾಚರಣೆ ಅಂಗವಾಗಿ ಅಶೋಕಪುರಂನ ರೈಲ್ವೆ ಕ್ರೀಡಾಂಗಣದಲ್ಲಿ ಗ್ರಾಮೀಣ ಸಾಕ್ಷರತೆ ಮತ್ತು ಆರೋಗ್ಯ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಯುವ ಮಹೋತ್ಸವ ಸಾಂಸ್ಕೃತಿಕ ಮತ್ತು ಕ್ರೀಡಾಕೂಟಕ್ಕೆ ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿ ನಾರಾಯಣ ಮೂರ್ತಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಹೆಚ್ಚು ಓದಿದಷ್ಟು ಜ್ಞಾನ ಹೆಚ್ಚುತ್ತದೆ. ಆದರೆ, ಕೌಶಲದಿಂದ ಜೀವನಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸವಲತ್ತುಗಳನ್ನು ಬಳಸಿಕೊಳ್ಳಿ. ಓದಿನ ಮಧ್ಯೆ ಸಾಕಷ್ಟು ಯೋಜನೆಗಳನ್ನು ಬಳಸಿಕೊಳ್ಳಬಹುದು. ಅದರಲ್ಲಿ ಪಿಎಂ ಇಂಟರ್ನ್‌ಶಿಪ್ ಎಂಬ ಯೋಜನೆಯನ್ನು ಓದಿನ ಸಮಯದಲ್ಲಿ ಆಯ್ಕೆ ಮಾಡಿಕೊಂಡರೆ, ಮುಂದಿನ ದಿನಗಳಲ್ಲಿ ಸಹಕಾರಿಯಾಗಲಿದೆ ಎಂದು ಸಲಹೆ ನೀಡಿದರು.

ಲೂನಾರ್ಸ್ ಸಂಸ್ಥೆಯ ಮುಖ್ಯಸ್ಥ ಜಾನ್‌ಸನ್ ಜೋಸೆಫ್ ಮಾತನಾಡಿ, ನಾನು ಮೂಲತಃ ಕೇರಳದವನು. ಮೈಸೂರಿಗೆ ಬಂದು 32 ವರ್ಷಗಳಾಗಿವೆ. ಬರುವಾಗ ಕೈಯ್ಯಲ್ಲಿ ಏನೂ ಇರಲಿಲ್ಲ. ನಾವು ಕೆಲಸಕ್ಕೆ ಹೋಗಬಾರದು, ನಾವೇ ಕೆಲಸ ನೀಡುವವರು ಆಗಬೇಕು ಎಂಬ ಉದ್ದೇಶದಿಂದ ಶೂನ್ಯದಿಂದಲೇ ಚಿಕ್ಕ ಸಂಸ್ಥೆಯನ್ನು ಆರಂಭಿಸಿದೆ. ಆಗ ಮೈಸೂರಿನ ಜೆಎಸ್‌ಎಸ್ ಉತ್ತಮ ಸಹಕಾರ ನೀಡಿತು. ಇಂದು 800 ಮಂದಿ ಕೆಲಸ ಮಾಡುತ್ತಿದ್ದಾರೆ ಎಂದರು.

ವ್ಯಾಸಂಗ ಮಾಡಿದ ನಂತರ ಸಮಯ ವ್ಯರ್ಥ ಮಾಡಿಕೊಳ್ಳಬೇಡಿ. ಗುರಿ ಸಾಧಿಸಲು ಸಾಕಷ್ಟು ಕಷ್ಟಗಳಿರುತ್ತವೆ. ಆದರೆ ಗುರಿ ಬಿಡಬೇಡಿ. ನನಗೆ ಒಂದು ಸಂಸ್ಥೆ ಸಹಾಯ ಮಾಡಿದಂತೆ ನಿಮಗೆ ಇಂದು ಈ ಸಂಸ್ಥೆಯೂ ಸಹಾಯ ಮಾಡಲಿದೆ. ನಿಮ್ಮ ಬಳಿ ಇರುವ ಇಚ್ಛಾಶಕ್ತಿ ಬಳಸಿಕೊಂಡು ಜ್ಞಾನ ವೃದ್ಧಿಸಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ಆಯೋಗದ ನಿವೃತ್ತ ಆಯುಕ್ತ ಚಂದ್ರೇಗೌಡ, ನೆಹರು ಯುವಕೇಂದ್ರದ ಅಧಿಕಾರಿ ಅಭಿಷೇಕ್, ಪಾಲಿಕೆ ಅಧಿಕಾರಿ ಡಾ.ಭೈರಲಿಂಗಯ್ಯ, ಎನ್.ಆರ್. ಫೌಂಡೇಷನ್ ಸಿಎಸ್‌ಆರ್ ಮುಖ್ಯಸ್ಥ ಆರ್.ಹರೀಶ್, ಶಾಲಿನಿ ಜೆಕಾಬ್ಸ್, ಡಾ.ಹೆಚ್.ಟಿ.ಮಂಜುನಾಥ್, ವಿ.ಕೆ.ಜೋಸ್, ಗ್ರಾಮೀಣ ಸಾಕ್ಷರತೆ ಮತ್ತು ಆರೋಗ್ಯ ಸಂಸ್ಥೆ ನಿರ್ದೇಶಕಿ ಕೆ.ಸರಸ್ವತಿ ಉಪಸ್ಥಿತರಿದ್ದರು.

ಮೈಸೂರು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಮಾದರಿ ವೃತ್ತಿ ಕೇಂದ್ರ ಸ್ಥಳಾಂತರ

ಮೈಸೂರು: ಎನ್.ಆರ್.ಮೊಹಲ್ಲಾದ ಮೈಸೂರಿನ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಮಾದರಿ ವೃತ್ತಿ ಕೇಂದ್ರವನ್ನು ಸಿದ್ದಾರ್ಥನಗರದ 10ನೇ ಮೇನ್‌ನ ಮನೆ ನಂ.323ರ ಖಾಸಗಿ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.8748984360, 9036356862, 9986235707, 8553617547 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಭಿನಂದನೆ...



ಮೈಸೂರಿನ ವಿಜಯನಗರದ ಶ್ರೀ ಯೋಗಾನರಸಿಂಹ ಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿದ್ದ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರಾದ ಕೆ.ನಾಗಣ್ಣ ಗೌಡ ಅವರನ್ನು ದೇವಾಲಯದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಅವರು ಆತ್ಮೀಯವಾಗಿ ಸ್ವಾಗತಿಸಿ, ಅಭಿನಂದಿಸಿದರು.

ಜ.30ರಂದು ನೇರ ಸಂದರ್ಶನ

ಮೈಸೂರು: ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ವತಿಯಿಂದ ಸರ್ಕಾರಿ ಕೈಗಾರಿಕಾ ಉದ್ಯೋಗ ಸಂಸ್ಥೆ, ಶ್ರೀರಂಗಪಟ್ಟಣದಲ್ಲಿ 2024–25ನೇ ಸಾಲಿಗೆ ಖಾಲಿ ಇರುವ MRAC, FITTER, TURNER ಬೋಧಕರ ಹುದ್ದೆಗಳಿಗೆ ಜ.30ರಂದು ಬೆಳಗ್ಗೆ 11 ಗಂಟೆಗೆ ನೇರ ಸಂದರ್ಶನ ಏರ್ಪಡಿಸಲಾಗಿದೆ. MECHANICAL ವಿಭಾಗದಲ್ಲಿ NTC & NAC/ DIPLOMA/B.E. ಅಭ್ಯರ್ಥಿಗಳು ಮೂಲ ದಾಖಲೆಗಳೊಂದಿಗೆ ಹಾಜರಾಗಲು ತಿಳಿಸಲಾಗಿದೆ. ಮಾಹಿತಿಗಾಗಿ ದೂ.ಸಂ: 9844474056.

ಕಲೆಗಳ ಮೂಲಕ ವಿಷಯ ಜನರ ಹೃದಯವನ್ನು ನೇರವಾಗಿ ಮುಟ್ಟುತ್ತೆ

• ಲೇಖಕಿ ಎ.ರೇವತಿ ಪ್ರತಿಪಾದನೆ • ರಂಗಾಯಣದ ಬಹುರೂಪಿ ನಾಟಕೋತ್ಸವದಲ್ಲಿ ವಿಚಾರ ಮಂಡನೆ

ಮೈಸೂರು,ಜ.19(ಎಂಟಿವೈ)– ಕಲೆಗಳ ಮೂಲಕ ಯಾವುದೇ ವಿಷಯವನ್ನು ಜನರಿಗೆ ತಿಳಿಸುವ ಪ್ರಯತ್ನ ಮಾಡಿದರೆ ಅದು ಜನರ ಹೃದಯವನ್ನು ನೇರವಾಗಿ ಮುಟ್ಟುತ್ತದೆ ಎಂದು ಲೇಖಕಿ ಎ.ರೇವತಿ ತಿಳಿಸಿದ್ದಾರೆ.

ಮೈಸೂರಿನ ರಂಗಾಯಣದ ಬಿ.ವಿ. ಕಾರಂತ ರಂಗಚಾವಡಿಯಲ್ಲಿ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಅಂಗವಾಗಿ ಆಯೋಜಿಸಿದ್ದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಲೆಗಳು ಬಹುಬೇಗನೆ ಜನರ ಮನ ಮುಟ್ಟುತ್ತವೆ. ಕಲೆಗಳ ಮೂಲಕ ಯಾವುದೇ ವಿಚಾರವನ್ನು ಜನರಿಗೆ ತಿಳಿಸುವ ಪ್ರಯತ್ನ ಮಾಡಿದರೂ ಅವು ಪರಿಣಾಮಕಾರಿಯಾಗಿ ಗುರಿ ಮುಟ್ಟಿಸುತ್ತವೆ. ನನ್ನ ಬದುಕಿನ ಕಥನ 'ಬದುಕು ಬಯಲು' ನಾಟಕ ರೂಪ ಪಡೆದುಕೊಂಡ ಹಿನ್ನೆಲೆಯಲ್ಲಿ ಅದು ಜನರ ಹೃದಯವನ್ನು ತಟ್ಟಿದೆ ಎಂದು ತಿಳಿಸಿದರು.



ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಅಂಗವಾಗಿ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣವನ್ನು ಲೇಖಕಿ ಎ.ರೇವತಿ ಉದ್ಘಾಟಿಸಿದರು.

ಸಮಾಜದಲ್ಲಿ ತೃತೀಯಲಿಂಗಿಗಳು ವಿವಿಧ ಸಮಸ್ಯೆಗಳನ್ನು ಎದುರಿಸುತ್ತಾರೆ. ಗಂಡಾಗಿ ಹುಟ್ಟಿ ಹೆಣ್ಣಾಗಿ ಲಿಂಗ ಪರಿವರ್ತನೆ ಮಾಡಿಕೊಳ್ಳುವುದು ದೊಡ್ಡ ವಿಚಾರ. ಆ ಸಂದರ್ಭ ನಾನು ಅನುಭವಿಸಿದ ಕಷ್ಟಗಳನ್ನು 'ಬದುಕು ಬಯಲು' ಕೃತಿಯಲ್ಲಿ ಬರೆದಿದ್ದೇನೆ. ಈ ಕೃತಿ ನಾಟಕವಾದ ಸಂದರ್ಭ ನಾಟಕ ನೋಡಿ ನನಗೆ ಕಣ್ಣೀರು ಬಂತು. ನಾಟಕವು ನನ್ನ ಬದುಕನ್ನು ನನ್ನ ಕಣ್ಣ ಮುಂದೆ ತಂದು ನಿಲ್ಲಿಸಿತು. ಪುಸ್ತಕ ಬರೆಯುವಾಗ ನನಗೆ ಆದ ನೋವನ್ನು ನಾನು ನೇರವಾಗಿ ನೋಡಿ ಅನುಭವಿಸಿದ್ದೇನೆ ಎಂದು ವಿಷಾದಿಸಿದರು.

ಇದೇ ವೇಳೆ ಸಾಹಿತಿ ಬಾನು ಮುಷ್ತಾಕ್ ಮಾತನಾಡಿ, ಬಹುರೂಪಿ ರಾಷ್ಟ್ರೀಯ ನಾಟಕೋತ್ಸವವನ್ನು ಈ ಬಾರಿ 'ಬಿಡುಗಡೆ' ಥೀಮ್‌ನಲ್ಲಿ ಹಮ್ಮಿಕೊಳ್ಳಲಾಗಿದೆ. ಪಶು ಪಕ್ಷಿಗಳಿಗೆ, ಮನುಷ್ಯರಿಗೆ ಅದರಲ್ಲೂ ವಿಶೇಷವಾಗಿ ತಳಸಮುದಾಯದವರಿಗೆ, ಮಹಿಳೆಯರಿಗೆ, ತೃತೀಯಲಿಂಗಿಗಳಿಗೆ ಬಿಡುಗಡೆಯ ಅವಶ್ಯಕತೆ ಇದೆ. ಜನರ ಬಿಡುಗಡೆಯ ಹಾದಿಯ ಕುರಿತು ಚರ್ಚೆಗಳು ನಡೆಯಬೇಕು. ಆದರೆ, ಪ್ರಸ್ತುತ ಈ ಚರ್ಚೆಗಿಂತ ಹೆಚ್ಚಾಗಿ ವಿಭಜಕ ರಾಜಕೀಯದ ಮಾತುಗಳು ಹೆಚ್ಚು ಪ್ರಾಮುಖ್ಯತೆ ಪಡೆಯುತ್ತಿವೆ ಎಂದರು.

ವಾಚ್ ಕಟ್ಟಿದ ಎಂಬ ಕಾರಣಕ್ಕಾಗಿ ದಲಿತರ ಮೇಲೆ ಹಲ್ಲೆಗಳು ನಡೆದಿರುವ ಉದಾಹರಣೆಗಳು ಇವೆ. ಇಂತಹ ಅಮಾನುಷ ಕೃತ್ಯಗಳು ಕೊನೆಯಾಗಬೇಕು. ಪ್ರತಿಯೊಬ್ಬರಿಗೂ ಗೌರವದ ಬದುಕು ದೊರೆಯಬೇಕು. ಕಾರ್ಮಿಕರು ಕನಿಷ್ಠ ನಾಗರಿಕ ಸೌಲಭ್ಯಗಳು ಇಲ್ಲದೆ ದುಡಿಯುತ್ತಿರುವುದನ್ನು ಕಾಣುತ್ತಿದ್ದೇವೆ. ಕಾರ್ಮಿಕರು, ಶೋಷಿತ ವರ್ಗದವರಿಗೆ ಉತ್ತಮ ಬದುಕು ರೂಪಿಸಿಕೊಡುವ ಸೌಜನ್ಯವನ್ನು ಸಮಾಜ ತೋರಬೇಕು ಎಂದರು.

ಕಾರ್ಯಕ್ರಮದಲ್ಲಿ ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಿ.ಸುದರ್ಶನ್ ಇದ್ದರು.

ಮೈಸೂರು ಮಿತ್ರ ಸೋಮವಾರ 20 ಜನವರಿ 2025

ಬೈಕಿಗೆ ಬುಲೆಟ್ ಡಿಕ್ಕಿ; ಗ್ರಾಪಂ ಮಾಜಿ ಅಧ್ಯಕ್ಷ ಸಾವು



ಭಾರತೀನಗರ.ಜ.19– ಬೈಕಿಗೆ ಬುಲೆಟ್ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಗ್ರಾ.ಪಂ ಮಾಜಿ ಅಧ್ಯಕ್ಷ ಮೃತಪಟ್ಟಿರುವ ಘಟನೆ ದೇವರಹಳ್ಳಿ ಗೇಟ್ ಬಳಿ ಶನಿವಾರ ರಾತ್ರಿ ಸಂಭವಿಸಿದೆ.

ಇಲ್ಲಿಗೆ ಸಮೀಪದ ದೊಡ್ಡರಸಿನಕೆರೆ ಗ್ರಾಮದ ಡಿ.ಎಂ.ಮಂಚೇಗೌಡ(53) ಮೃತ ದುರ್ದೈವಿ. ಮಂಚೇಗೌಡರು ಮದ್ದೂರು–ಮಳವಳ್ಳಿ ಹೆದ್ದಾರಿಯ ಭಾರತೀನಗರದಿಂದ ದೇವರಹಳ್ಳಿ ಗೇಟ್ ಬಳಿ ಇರುವ ತಮ್ಮ ಫಾಸ್ಟ್ ಅಂಡ್ ಸ್ಮೈನ್ ಸರ್ವಿಸ್ ಸ್ಟೇಷನ್‌ಗೆ ಬೈಕಿನಲ್ಲಿ ತೆರಳುತ್ತಿದ್ದಾಗ ಬುಲೆಟ್ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಬೈಕ್ ಸವಾರ ಮಂಚೇಗೌಡ ಸ್ಥಳದಲ್ಲೇ ಕುಸಿದು ಬಿದ್ದಿದ್ದಾರೆ. ತಕ್ಷಣ ಅವರನ್ನು ಅಕ್ಕಪಕ್ಕದವರು ಜಿ.ಮಾದೇಗೌಡ ಆಸ್ಪತ್ರೆಗೆ ದಾಖಲಿಸಿದರಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಕೆ.ಎಂ.ದೊಡ್ಡಿ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪಂಚನಾಮೆ ನಡೆಸಿ ವಾರಸುದಾರರಿಗೆ ಒಪ್ಪಿಸಲಾಯಿತು. ಭಾರತೀನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮೃತ ಮಂಚೇಗೌಡರು ಗ್ರಾ.ಪಂ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯರಾಗಿ, ದೊಡ್ಡರಸಿನಕೆರೆ ಕೃಷಿಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷರು, ಹಾಲಿ ಸದಸ್ಯರಾಗಿ, ಶ್ರೀಸಣ್ಣಕ್ಕಿರಾಯಸ್ವಾಮಿ ಬಸವ ಸಮಿತಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಜಿಲ್ಲಾಧ್ಯಕ್ಷ ಜಿ.ಟಿ.ರವೀಂದ್ರ, ಪುರಸಭೆ ಸದಸ್ಯರಾದ ಚನ್ನೇಗೌಡನದೊಡ್ಡಿ ಮಹೇಶ್, ಪ್ರಿಯಾಂಕ ಅಪ್ಪುಗೌಡ, ಪ್ರವೀಣ್, ಜೆಡಿಎಸ್ ತಾಲೂಕು ಘಟಕದ ರಾಜ್ಯಾಧ್ಯಕ್ಷ ಮಾದನಾಯಕನಹಳ್ಳಿ ರಾಜಣ್ಣ, ಸಂತೋಷ್ ತಮ್ಮಣ್ಣ, ಅನೇಕ ಗಣ್ಯರು ಮತ್ತು ಸ್ಥಳೀಯ ಜನಪ್ರತಿನಿಧಿಗಳು ಸಂತಾಪ ವ್ಯಕ್ತಪಡಿಸಿದ್ದಾರೆ.

ಮೃತರ ಅಂತ್ಯಕ್ರಿಯೆ ಸ್ವಗ್ರಾಮವಾದ ದೊಡ್ಡರಸಿನಕೆರೆಯ ಜಮೀನಿನಲ್ಲಿ ನೆರವೇರಿಸಲಾಯಿತು.

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ ಖರೀದಿ

ಮಂಡ್ಯ.ಜ.19– ಮಂಡ್ಯ ಜಿಲ್ಲೆಯಲ್ಲಿ ಸರ್ಕಾರದ ಆದೇಶದಂತೆ ರೈತರಿಂದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ ಖರೀದಿ ಪ್ರಕ್ರಿಯೆಯನ್ನು ಜ.16 ರಿಂದ ಎಪಿಎಂಸಿ ಆವರಣ ಕೆ.ಆರ್‌ಪೇಟೆ, ಎಪಿಎಂಸಿ ಆವರಣ ಕಿಕ್ಕೇರಿ, ಎಪಿಎಂಸಿ ಆವರಣ ಮದ್ದೂರು, ಸಂತೆ ಮೈದಾನ ಕೊಪ್ಪ, ಎಪಿಎಂಸಿ ಆವರಣ ಮಳವಳ್ಳಿ, ರಾಜ್ಯ ಉಗ್ರಾಣ ನಿಗಮ ಆವರಣ ಯಲಿಯೂರು, ರಾಜ್ಯ ಉಗ್ರಾಣ ನಿಗಮ ಆವರಣ ಉಮ್ಮಡಹಳ್ಳಿ, ಎಪಿಎಂಸಿ ಆವರಣ ನಾಗಮಂಗಲ, ಎಪಿಎಂಸಿ ಆವರಣ ಪಾಂಡವಪುರ ಮತ್ತು ಟಿಎಪಿಸಿಎಂಎಸ್ ಖರೀದಿ ಕೇಂದ್ರಗಳಲ್ಲಿ ಪ್ರಾರಂಭಿಸಲಾಗಿದೆ. ನೋಂದಣಿ ಪ್ರಕ್ರಿಯೆಯು ಜನವರಿ 31ರವರೆಗೆ ಚಾಲ್ತಿಯಲ್ಲಿದ್ದು, ರೈತರು ಇದರ ಸದುಪಯೋಗಪಡಿಸಿಕೊಳ್ಳುವಂತೆ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅತ್ಯಾಧುನಿಕ ಡಯಾಗ್ನೋಸ್ಟಿಕ್ ಸೆಂಟರ್ ಉದ್ಘಾಟನೆ

ಮಂಡ್ಯ: ಜನರ ಉತ್ತಮ ಆರೋಗ್ಯಕ್ಕಾಗಿ ಅತ್ಯಾಧುನಿಕ ಡಯಾಗ್ನೋಸ್ಟಿಕ್ ಸೆಂಟರ್ ಅನ್ನು ಮಂಡ್ಯ ನಗರದಲ್ಲಿ ತೆರೆಯಲಾಗಿದೆ ಎಂದು ಎಡಿಜಿಪಿ ರವಿಕಾಂತೇಗೌಡ ಹೇಳಿದರು.

ಇಲ್ಲಿನ ಅಶೋಕನಗರದಲ್ಲಿರುವ ಲಕ್ಷ್ಮೀ ಡಯಾಗ್ನೋಸ್ಟಿಕ್ ಸೆಂಟರ್ ಉದ್ಘಾಟಿಸಿ ಮಾತನಾಡಿ, ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ ಡಾ.ವಿಭುನಂದನ್ ಲಕ್ಷ್ಮೀ ಡಯಾಗ್ನೋಸ್ಟಿಕ್ ಸೆಂಟರ್ ತೆರೆದಿದ್ದಾರೆ. ಇವರು ಜನರಿಗೆ ಉತ್ತಮ ಸೇವೆ ನೀಡಲಿ ಎಂದು ಆಶಿಸುತ್ತೇನೆ ಎಂದರು.

ಶಾಸಕ ಪಿ.ರವಿಕುಮಾರ್ ಮಾತನಾಡಿ, ಆರೋಗ್ಯ ಸೇವೆಗಾಗಿ ಬೆಂಗಳೂರು, ಮೈಸೂರಿಗೆ ತೆರಳುತ್ತಿದ್ದ ಜನರಿಗೆ ಇಂದು ಮಂಡ್ಯ ನಗರದಲ್ಲಿಯೇ ಸುಸಜ್ಜಿತ ಡಯಾಗ್ನೋಸ್ಟಿಕ್ ಸೆಂಟರ್ ನಿರ್ಮಾಣವಾಗಿದೆ. ಅತ್ಯುತ್ತಮ ಟೆಕ್ನಾಲಜಿ ಹೊಂದಿರುವುದರಿಂದ ಮಂಡ್ಯ ಜನರಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಡಾ.ವಿಭುನಂದನ್, ಡಿಎಚ್‌ಒ ಡಾ.ಕೆ. ಮೋಹನ್, ಸೆಂಟರ್‌ನ ಲೋಕಾನಂದ್, ರಮ್ಯ ಭಾಗವಹಿಸಿದ್ದರು.



ಮಂಡ್ಯದ ಅಶೋಕನಗರದಲ್ಲಿರುವ ಲಕ್ಷ್ಮೀ ಡಯಾಗ್ನೋಸ್ಟಿಕ್ ಸೆಂಟರ್ ಅನ್ನು ಎಡಿಜಿಪಿ ರವಿಕಾಂತೇಗೌಡ ದೀಪ ಬೆಳಗುವ ಮೂಲಕ ಉದ್ಘಾಟಿಸಿದರು.

ಕಾರು ಡಿಕ್ಕಿ: ಬೈಕ್ ಸವಾರ ಸ್ಥಳದಲ್ಲೇ ಸಾವು

ಪರಿಹಾರಕ್ಕೆ ಆಗ್ರಹಿಸಿ ಶವವನ್ನಿಟ್ಟುಕೊಂಡು ಪ್ರತಿಭಟನೆ

ಶ್ರೀರಂಗಪಟ್ಟಣ, ಜ, 19–ಬೈಕಿಗೆ ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಪಕ್ಕದ ಹಳ್ಳಕ್ಕೆ ಬಿದ್ದು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಕೆ.ಆರ್.ಸಾಗರ ನಾರ್ತ್ ಬ್ಯಾಂಕ್ ಗ್ರಾಮದ ರಸ್ತೆ ವಿಸಿ ನಾಲೆಯ ಸಮೀಪ ಸಂಭವಿಸಿದ್ದು, ಪರಿಹಾರಕ್ಕೆ ಆಗ್ರಹಿಸಿ ಮೃತದೇಹವನ್ನಿಟ್ಟುಕೊಂಡು ಕೆಲಕಾಲ ಪ್ರತಿಭಟನೆ ನಡೆಸಲಾಗಿದೆ.

ಬನ್ನಂಗಾಡಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಚಂದ್ರಶೇಖರ್(46) ಮೃತ ದುರ್ದೈವಿ.

ಚಂದ್ರಶೇಖರ್ ಕೆಆರ್.ಸಾಗರದ ಸಂತೆಗೆ ಬರುತ್ತಿದ್ದ ವೇಳೆ ಎದುರುಗಡೆಯಿಂದ ವೇಗವಾಗಿ ಬಂದ ಕಾರು, ತನ್ನ ಮುಂದಿದ್ದ ವಾಹನವನ್ನು ಹಿಂದಿಕ್ಕುವ ರಭಸದಲ್ಲಿ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಹಳ್ಳಕ್ಕೆ ಬಿದ್ದು ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ.

ಅಲ್ಲದೆ ಕಾರಿನ ಏರ್ ಬ್ಯಾಗ್ ತೆರೆಯದಿರುವ ಕಾರು ಚಾಲಕನಿಗೆ ಸಣ್ಣಪುಟ್ಟ ಗಾಯವಾಗಿದೆ. 108 ಆಂಬುಲೆನ್ಸ್ ಮೂಲಕ ಅವರನ್ನು ಮೈಸೂರಿನ ಜಿಲ್ಲಾಸ್ಪತ್ರೆಗೆ ಕೆ.ಆರ್.ಸಾಗರ ಪೊಲೀಸರು ಕಳುಹಿಸಿದ್ದಾರೆ.

ಪ್ರತಿಭಟನೆ: ಕಾರಿನ ಚಾಲಕನ ಅಜಾಗರೂಕತೆ ಚಾಲನೆಯಿಂದ ಈ ಘಟನೆ ಸಂಭವಿಸಿದ್ದು, ಆತನನ್ನು ಸ್ಥಳಕ್ಕೆ ಕರೆತಂದು ಪರಿಹಾರ ನೀಡುವ ತನಕ ಶವ ತೆಗೆಯುವುದಿಲ್ಲ ಎಂದು ಬನ್ನಂಗಾಡಿ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ರಸ್ತೆಯಲ್ಲೇ ಶವ ಇಟ್ಟು ಕೆಲಕಾಲ ರಸ್ತೆ ತಡೆ ನಡೆಸಿದರು. ಈ ವೇಳೆ ಪೊಲೀಸರು ಮಧ್ಯಪ್ರವೇಶಿಸಿ ಪ್ರತಿಭಟನಾಕಾರರ ಮನವೊಲಿಸಿ, ಪ್ರತಿಭಟನೆ ಹಿಂಪಡೆಯುವಂತೆ ಮನವಿ ಮಾಡಿದರು. ಈ ಸಂಬಂಧ ಕೆಆರ್‌ಎಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೂದನೂರಿನ ಶಾಸಕ ರವಿಕುಮಾರ್ ಜನತಾದರ್ಶನ

ಸರ್ಕಾರದ ಯೋಜನೆಗಳನ್ನು ಸದುಪಯೋಗ ಪಡಿಸಿಕೊಳ್ಳಲು ಮನವಿ

ಮಂಡ್ಯ,ಜ.19– ಸರ್ಕಾರದ ಯೋಜನೆಗಳು ಮನೆ ಬಾಗಿಲಿಗೆ ಒದಗಿಸುವುದು ಜನತಾದರ್ಶನದ ಉದ್ದೇಶವಾಗಿದ್ದು, ಸದುಪಯೋಗಪಡಿಸಿಕೊಳ್ಳಿ ಎಂದು ಶಾಸಕ ಪಿ.ರವಿಕುಮಾರ್ ಗಣಿಗ ತಿಳಿಸಿದರು.

ಹಳೇ ಬೂದನೂರು ಗ್ರಾಮದಲ್ಲಿ ಜನತಾದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಈ ಹಿಂದೆ ಬಸರಾಳು, ಕೆರಗೋಡು ಹೋಬಳಿ ಮಟ್ಟದಲ್ಲಿ ಜನತಾದರ್ಶನ ಆಯೋಜಿಸಲಾಗುತ್ತಿತ್ತು, ಸುಮಾರು 5000 ಜನರು ಭಾಗವಹಿಸಿ ತಮ್ಮ ಕುಂದು ಕೊರತೆಗಳ ಬಗ್ಗೆ ಅರ್ಜಿ ಸಲ್ಲಿಸುತ್ತಿದ್ದರೂ, ಸ್ವೀಕೃತವಾದ ಅರ್ಜಿಗಳನ್ನು ಒಂದು ತಿಂಗಳು ಕಾಲಮಿತಿಯೊಳಗೆ ಪರಿಹರಿಸಲಾಗುತ್ತಿತ್ತು. ಸ್ವೀಕೃತವಾದ ಅರ್ಜಿಗಳಲ್ಲಿ ಶೇ. 90 ರಷ್ಟು ವಿಲೇವಾರಿಯಾಗಿ ಪರಿಹಾರ ಒದಗಿಸಲಾಗಿದೆ. ಶೇ. 10ರಷ್ಟು ಕಾನೂನು ತೊಡಕುಗಳಿಂದ ಪರಿಹರಿಸಲು ಸಾಧ್ಯವಾಗಿಲ್ಲ ಎಂದರು.

ಹೋಬಳಿ ಮಟ್ಟದಲ್ಲಿದ್ದ ಜನತಾದರ್ಶನ ಕಾರ್ಯಕ್ರಮವನ್ನು ಗ್ರಾಮ ಮಟ್ಟಕ್ಕೆ ಪರಿವರ್ತಿಸಿ ಇಂದು ಬೂದನೂರು ಗ್ರಾಮದಲ್ಲಿ ಜನತಾ ದರ್ಶನವನ್ನು ಆಯೋಜಿಸಲಾಗಿದೆ. ನಗರ ಪ್ರದೇಶದಲ್ಲೂ ಮನೆ ಮನೆಗಳಿಗೆ ತೆರಳಿ ವಾರ್ಡ್ ಮಟ್ಟದಲ್ಲಿ ಜನರ ಸಮಸ್ಯೆಗಳನ್ನು ಆಲಿಸಿ ಅರ್ಜಿ ಸ್ವೀಕರಿಸಲಾಗುತ್ತಿದೆ. ಈಗಾಗಲೇ 14 ವಾರ್ಡ್‌ಗಳಲ್ಲಿ ಮನೆ– ಮನೆ ಭೇಟಿ ಮಾಡಲಾಗಿದೆ. ಬೂದನೂರು ಗ್ರಾಮದಲ್ಲಿ ಇ–ಸ್ವತ್ತು ಆಂದೋಲನವನ್ನು ಹಮ್ಮಿಕೊಂಡು ಕಾಲಮಿತಿಯೊಳಗೆ ಲಿ–ಸ್ವತ್ತು ವಿತರಣೆಯಾಗಬೇಕು ಎಂದು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಜನತಾದರ್ಶನದಲ್ಲಿ ಇಂದು ಸ್ವೀಕೃತವಾಗಿರುವ ಅರ್ಜಿಗಳನ್ನು ಸಾಧ್ಯವಾದಲ್ಲಿ ಸ್ಥಳದಲ್ಲೇ ಪರಿಹರಿಸಲಾಗುವುದು. ಉಳಿದ ಅರ್ಜಿಗಳನ್ನು ಸಂಬಂಧಿಸಿದ ಇಲಾಖಾ ಅಧಿಕಾರಿಗಳಿಗೆ ನೀಡಿ ಒಂದು ತಿಂಗಳೊಳಗೆ ಪರಿಹರಿಸುವಂತೆ ಸೂಚನೆ ನೀಡಲಾಗುವುದು ಎಂದರು. ಮಂಡ್ಯ ಉಪವಿಭಾಗಾಧಿಕಾರಿ ಶಿವಮೂರ್ತಿ ಮಾತನಾಡಿ, ಸುಮಾರು 15000ಕ್ಕೂ ಹೆಚ್ಚು ಪೌತಿ ಖಾತೆಗಳನ್ನು ಮಾಡಿಕೊಡಲಾಗಿದೆ. ಗ್ರಾಮ ಮಟ್ಟದಲ್ಲಿ ಪೌತಿ ಖಾತೆ, ಇ ಸ್ವತ್ತು ಆಂದೋಲನ, ಜನತಾದರ್ಶನ ಕಾರ್ಯಕ್ರಮ ಆಯೋಜನೆಗಳಿಂದ ಜನರ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಎಎಸ್ಪಿ ತಿಮ್ಮಯ್ಯ, ತಹಸಿಲ್ದಾರ್ ಶಿವಕುಮಾರ್ ಬಿರಾದರ್, ತಾ.ಪಂ ಇಓ ವೀಣಾ ಸೇರಿದಂತೆ ಇನ್ನಿತರೆ ಗಣ್ಯರು ಉಪಸ್ಥಿತರಿದ್ದರು.



ಜನರಿಂದ ಅಹವಾಲು ಸ್ವೀಕರಿಸುತ್ತಿರುವ ಶಾಸಕ ರವಿಕುಮಾರ್ ಗಣಿಗ.

ಪ್ರಗತಿ ಪರಿಶೀಲನಾ ಸಭೆಯಲ್ಲಿ ಗ್ಯಾರಂಟಿ ಯೋಜನೆಗಳ ಬಗ್ಗೆ ಚರ್ಚೆ

ಮಂಡ್ಯ.ಜ.19– ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ಇಂದು ಮಂಡ್ಯ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಚಿಕ್ಕಲಿಂಗಯ್ಯ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತ್ ಮಿನಿ ಸಭಾಂಗಣದಲ್ಲಿ ನಡೆಯಿತು.

ಗೃಹಲಕ್ಷ್ಮಿ, ಗೃಹಜ್ಯೋತಿ, ಅನ್ನಭಾಗ್ಯ, ಶಕ್ತಿ ಹಾಗೂ ಯುವನಿಧಿ ಯೋಜನೆಗಳ ಪ್ರಗತಿಯನ್ನು ತಾಲೂಕುವಾರು ಪರಿಶೀಲಿಸಿದ ಅವರು ಐಟಿ ಹಾಗೂ ಜಿಎಸ್‌ಟಿ ಪಾವತಿಗೆ ಸಂಬಂಧಿಸಿದಂತೆ ಗೃಹಲಕ್ಷ್ಮಿ ಯೋಜನೆಯಡಿ ಕೆಲವು ಫಲಾನುಭವಿಗಳಿಗೆ ಹಣ ಪಾವತಿಯಲ್ಲಿ ತೊಂದರೆಯಾಗಿದ್ದಲ್ಲಿ ರಾಜ್ಯ ಮಟ್ಟಕ್ಕೆ ವಿವರ ಕಳುಹಿಸಿಕೊಡುವ ವ್ಯವಸ್ಥೆಯಾಗಬೇಕು ಎಂದರು.

ಜಿ.ಪಂ ಸಿಇಓ ಶೇಖ್ ತನ್ವೀರ್ ಆಸಿಫ್ ಅವರು ಮಾತನಾಡಿ, ಇಂಜಿನಿಯರಿಂಗ್ ಹಾಗೂ ಪ್ರಥಮ ದರ್ಜೆ ಕಾಲೇಜುಗಳಿಗೆ ಯುವನಿಧಿ ಯೋಜನೆಯ ಬಗ್ಗೆ ಮಾಹಿತಿ ನೀಡಿ ಈ ವರ್ಷ ಉತ್ತೀರ್ಣರಾದ ಸುಮಾರು 400 ಜನರನ್ನು ನೊಂದಣಿ ಮಾಡಿಸಲಾಗಿದೆ ಎಂದರು.

ತಾಲೂಕು ಮಟ್ಟದಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಸಮಿತಿಯನ್ನು ರಚಿಸಿ ಸಭೆ ನಡೆಸಲಾಗಿದೆ ಎಂದರು. ಸಭೆಯಲ್ಲಿ ಗ್ಯಾರಂಟಿ ಯೋಜನೆ ಉಪಾಧ್ಯಕ್ಷರಾದ ರಾಜೇಂದ್ರ, ಪ್ರಶಾಂತ್ ಬಾಬು, ಜಿಪಂ ಮುಖ್ಯ ಯೋಜನಾಧಿಕಾರಿ ಧನುಷ್ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕೆ.ಆರ್ ಪೇಟೆಯಲ್ಲಿ ಕೃಷಿ ಪರಿಕರ ವಿತರಣೆ



ಕೆ.ಆರ್.ಪೇಟೆಯ ಪ್ರವಾಸಿಮಂದಿರ ಆವರಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಆಯ್ಕೆಯಾದ 20 ಫಲಾನುಭವಿಗಳಿಗೆ ಶಾಸಕ ಹೆಚ್.ಟಿ. ಮಂಜು ಕೃಷಿ ಪರಿಕರಗಳನ್ನು ವಿತರಿಸಿದರು.

ಚಲುವೇಗೌಡರಿಗೆ ಮೂರು ಬೆಳ್ಳಿ ಪದಕ



ಚಿನಕುರಳಿ, ಜ.19– ಇತ್ತೀಚೆಗೆ ಮಂಗಳೂರಿನ ಮಂಗಳ ಸ್ಟೇಡಿಯಂನಲ್ಲಿ ನಡೆದ ಮೊದಲ ದಕ್ಷಿಣ ಏಷಿಯಾ ಮಾಸ್ಟರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಮದ ಲೇ.ಬೆಟ್ಟೇಗೌಡರ ಮಗ ಸಿ.ಬಿ.ಚಲುವೇಗೌಡರು ಗುಂಡು ಎಸೆತ, ತಟ್ಟೆಎಸೆತ ಹಾಗೂ ಹ್ಯಾಮರ್ ಎಸೆತದಲ್ಲಿ ದ್ವಿತೀಯ ಸ್ಥಾನ ಗಳಿಸಿ 3 ಬೆಳ್ಳಿ ಪದಕ ಪಡೆದಿದ್ದಾರೆ.

ಚಂದ್ರಮ್ಮ ನಿಧನ



ಕೆ.ಆರ್.ಪೇಟೆ: ಪಟ್ಟಣದ ಹಳೆ ಹೇಮಗಿರಿ ರಸ್ತೆ ನಿವಾಸಿಯಾದ ಅಬಕಾರಿ ಇಲಾಖೆಯ ನಿವೃತ್ತ ನೌಕರ ಹನುಮಂತಶೆಟ್ಟಿ ಅವರ ಧರ್ಮಪತ್ನಿ ಚಂದ್ರಮ್ಮ (69) ನಿಧನರಾಗಿದ್ದಾರೆ. ಮೃತರು ಪತಿ ಹನುಮಂತಶೆಟ್ಟಿ, ಪುತ್ರ ಪತ್ರಿಕಾ ಪ್ರತಿನಿಧಿ ಎಚ್.ಗಂಗಾಧರ್, ಪುತ್ರಿ ಪತ್ರಕರ್ತೆ ತ್ರಿವೇಣಿ ಸೇರಿದಂತೆ ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಕೆ.ಆರ್.ಪೇಟೆ ಪಟ್ಟಣದ ಹಿಂದೂ ರುದ್ರಭೂಮಿಯಲ್ಲಿ ನೆರವೇರಿತು.

ಒಂದನೇ ಪುಟದಿಂದ

ಭಾರತ ಮಹಿಳಾ, ಪುರುಷ ತಂಡಗಳು ಚಾಂಪಿಯನ್

ಮಹಿಳೆಯರ ತಂಡ: ಮೊದಲು ನಡೆದ ಮಹಿಳೆಯರ ವಿಭಾಗದ ಫೈನಲ್ ಪಂದ್ಯದಲ್ಲಿ ಭಾರತದ ವನಿತೆಯರು ಆರಂಭದಲ್ಲೇ ಚುರುಕಿನ ಆಟಕ್ಕೆ ಒತ್ತು ನೀಡಿದರು. ಮೊದಲ ನಿಮಿಷದಲ್ಲೇ ಎದುರಾಳಿ ತಂಡದ ಮೂವರು ಡಿಫೆಂಡರ್‌ಗಳನ್ನು ಹೊರದಬ್ಬಿ ಉತ್ತಮ ಆರಂಭ ಪಡೆದರು. ಆಕರ್ಷಕ ಪ್ಲೈಯಿಂಗ್ ಜಂಪ್, ಸ್ಕೈಡೈವ್ ಮಾಡಿದ ತರುಣಿಯರು ಮೊದಲ ಸರದಿಯಲ್ಲೇ 34 ಅಂಕ ಸಂಪಾದಿಸಿದರು.

ಎರಡನೇ ಸರದಿಯಲ್ಲಿ ರಕ್ಷಣೆಗೆ ಇಳಿದ ಭಾರತ ತಂಡಕ್ಕೆ ಮೈಸೂರು ಜಿಲ್ಲೆ ಟಿ.ನರಸೀಪುರದ ಚೈತ್ರಾ ಆಸರೆಯಾದರು. ಆರಂಭದಲ್ಲೇ ಕಣಕ್ಕೆ ಇಳಿದ ಅವರು ಚುರುಕಿನ ಪಾದಚಲನೆ ಮೂಲಕ ಮೂರುವರೆ ನಿಮಿಷಗಳ ಕಾಲ ನೇಪಾಳ ತಂಡದ ಆಟಗಾರ್ತಿಯರನ್ನು ಇನ್ನಿಲ್ಲದಂತೆ ಕಾಡಿದರು. ಹೀಗಾಗಿ ವಿರಾಮದ ವೇಳೆಗೆ ಭಾರತ 35–24 ಮುನ್ನಡೆ ಪಡೆಯಲು ಸಾಧ್ಯವಾಯಿತು.

ಮೂರನೇ ಸರದಿಯಲ್ಲೂ ಆತಿಥೇಯ ತಂಡ ಉತ್ತಮ ಆಟ ಪ್ರದರ್ಶಿಸಿ ಅಂತರವನ್ನು 73–24ಕ್ಕೆ ವಿಸ್ತರಿಸಿಕೊಂಡಿತು. ಕೊನೆಯ ಸರದಿಯಲ್ಲಿ ಮತ್ತೆ ಚೈತ್ರಾ ಮೋಡಿ ಮಾಡಿದರು. ಐದು ನಿಮಿಷಕ್ಕೂ ಅಧಿಕ ಸಮಯ ರಕ್ಷಣೆಯಲ್ಲಿ ಮಿಂಚು ಹರಿಸಿದರು. ಒಂದು ಹಂತದಲ್ಲಿ ಚೈತ್ರಾ ಆಟಕ್ಕೆ ಮನಸೋತ ಪ್ರೇಕ್ಷಕರು ಎದ್ದುನಿಂತು ಚಪ್ಪಾಳೆ ತಟ್ಟಿದರು. ಅಂತಿಮವಾಗಿ ಭಾರತ 78–40 ಅಂತರದಲ್ಲಿ ಗೆಲುವು ಸಾಧಿಸಿ ವಿಶ್ವಕಪ್ ಟ್ರೋಫಿ ಮುಡಿಗೇರಿಸಿಕೊಂಡಿತು.

ಮಹಿಳೆಯರ ಖೋ ಖೋ ತಂಡ ಗುಂಪು ಹಂತದಲ್ಲಿ ದಕ್ಷಿಣ ಕೊರಿಯಾ, ಇರಾನ್ ಮತ್ತು ಮಲೇಷ್ಯಾ ವಿರುದ್ಧ ಭರ್ಜರಿ ಗೆಲುವು ಸಾಧಿಸಿದ್ದ ಭಾರತ ಕ್ವಾರ್ಟರ್ ಫೈನಲ್‌ನಲ್ಲಿ ಬಾಂಗ್ಲಾದೇಶ ವಿರುದ್ಧ ಹಾಗೂ ಸೆಮಿಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಗೆದ್ದು ಅಜೇಯವಾಗಿ ಫೈನಲ್ ಪ್ರವೇಶಿಸಿದ್ದ ಭಾರತ ಚೊಚ್ಚಲ ಖೋ ಖೋ ವಿಶ್ವಕಪ್ ಟ್ರೋಫಿ ಗೆದ್ದುಕೊಂಡಿದೆ.

ಭಾರತ ಪುರುಷರ ತಂಡ ಅಜೇಯ: ಮೊದಲು ದಾಳಿ ನಡೆಸಿದ ರಾಮ್ಜಿ ಕಶ್ಯಪ್ ಅವರ ಅಸಾಧಾರಣ ಸ್ಕೈ ಡೈವ್ ಮೂಲಕ ನೇಪಾಳದ ಸೂರಜ್ ಪೂಜಾರ ಅವರನ್ನು ಔಟ್ ಮಾಡಿದರು. ನಂತರ ಸುಯಾಶ್ ಗಾರ್ಗೇಟ್, ಭರತ್ ಸಾಹು ಅವರನ್ನು ಟಚ್ ಮಾಡಿ ಔಟ್ ಮಾಡಿದರು. ಈ ಮೂಲಕ ಕೇವಲ 4 ನಿಮಿಷಗಳಲ್ಲಿ10 ಅಂಕಗಳೊಂದಿಗೆ ಭಾರತಕ್ಕೆ ಉತ್ತಮ ಆರಂಭ ಪಡೆಯಿತು. ಸ್ಕೈ ಡೈವ್‌ಗೆ ಹೆಸರಾದ ಪುರುಷರ ತಂಡವು ಮೊದಲ ಅವಧಿಯ ಅಂತ್ಯಕ್ಕೆ ಭರ್ಜರಿ ಆರಂಭ ಪಡೆಯಿತು. ಇದು ಅವರ ಎದುರಾಳಿಗಳಿಗೆ ಡ್ರೀಮ್ ರನ್ ಅನ್ನು ತಡೆಯಿತು. ಮೊದಲಾರ್ಧದ ಅಂತ್ಯಕ್ಕೆ ಭಾರತ ತಂಡವು 26–0 ಅಂಕಗಳ ಮುನ್ನಡೆ ಸಾಧಿಸಿತು.



ಚೊಚ್ಚಲ ಖೋ ಖೋ ವಿಶ್ವಕಪ್ ಪಂದ್ಯಾವಳಿಯಲ್ಲಿ ಚಾಂಪಿಯನ್‌ಗಳಾಗಿ ಹೊರಹೊಮ್ಮಿರುವ ಭಾರತದ ಮಹಿಳಾ ತಂಡ ಹಾಗೂ ಪುರುಷ ತಂಡಕ್ಕೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಎರಡೂ ತಂಡಗಳ ದೃಢಸಂಕಲ್ಪ ಮತ್ತು ಸಂಘಟನಾತ್ಮಕ ಪ್ರದರ್ಶನದಿಂದ ಲಭಿಸಿರುವ ಈ ಗೆಲುವಿನಿಂದ ದೇಶ ಹೆಮ್ಮೆಪಡುವಂತಾಗಿದೆ. ಈ ಗೆಲುವು ದೇಸಿ ಕ್ರೀಡೆಗಳಲ್ಲಿ ಭಾರತ ಶಕ್ತಿಯುತವಾಗಿ ಬೆಳೆಯುತ್ತಿರುವ ಸಾಕ್ಷಿಯಾಗಿದೆ. ಮುಂದೆ ಇನ್ನೂ ಅನೇಕ ಮೈಲುಗಲ್ಲುಗಳನ್ನು ಸಾಧಿಸಲಿ ಎಂದು ನಾನು ಹಾರೈಸುತ್ತೇನೆ.
-ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವರು.

ಮೊಟ್ಟಮೊದಲ ಖೋ ಖೋ ವಿಶ್ವಕಪ್ ಪಂದ್ಯಾವಳಿಯಲ್ಲಿ ನೇಪಾಳವನ್ನು ಬಗ್ಗುಬಡಿದು ಪ್ರಶಸ್ತಿ ಮುಡಿಗೇರಿಸಿಕೊಂಡಿರುವ ಭಾರತದ ಮಹಿಳಾ ಮತ್ತು ಪುರುಷರ ಖೋ ಖೋ ತಂಡಕ್ಕೆ ಅಭಿನಂದನೆಗಳು. ಚೊಚ್ಚಲ ಖೋ ಖೋ ವಿಶ್ವಕಪ್‌ನಲ್ಲಿ ಭಾರತದ ತಂಡಗಳ ಈ ಅಮೋಘ ಸಾಧನೆ ಇತಿಹಾಸದ ಪುಟಗಳಲ್ಲಿ ಶಾಶ್ವತವಾಗಿ ಉಳಿಯಲಿದೆ. ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲೂಕು ಕುರುಬೂರಿನ ಯುವತಿ ಚೈತ್ರ. ಬಿ ಅವರು ವಿಶ್ವವಿಜೇತ ಮಹಿಳಾ ಖೋ ಖೋ ತಂಡದ ಭಾಗವಾಗಿರುವುದು ನಾಡಿಗೆ ಹೆಮ್ಮೆಯ ಸಂಗತಿ. ಭಾರತೀಯರ ಪಾಲಿಗೆ ಇದೊಂದು ಐತಿಹಾಸಿಕ ದಿನ.
-ಸಿದ್ದರಾಮಯ್ಯ, ಮುಖ್ಯಮಂತ್ರಿಗಳು.

ಎರಡನೇ ಅವಧಿಯಲ್ಲಿ ನೇಪಾಳ ಟೀಮ್ ಇಂಡಿಯಾದ ಮಟ್ಟವನ್ನು ಸರಿಗಟ್ಟಲು ಸಾಧ್ಯವಾಗಲಿಲ್ಲ. ಆದರೆ ತಂಡವು ಒಂದೇ ಒಂದು ಡ್ರೀಮ್ ರನ್‌ಗೆ ಹೋಗದಂತೆ ತಡೆಯಿತು. ಆದಿತ್ಯ ಗನ್ಪುಲೆ ಮತ್ತು ನಾಯಕ ಪ್ರತೀಕ್ ವೈಕರ್ ತಂಡವನ್ನು ಈ ತಿರುವಿನ ಮೂಲಕ ಮುನ್ನಡೆಸಿದರು ಮತ್ತು ಜನಕ್ ಚಂದ್ ಮತ್ತು ಸೂರಜ್ ಪೂಜಾರ ಅವರಂತಹ ನಿಯಮಿತ ಸ್ಪರ್ಶಗಳ ಹೊರತಾಗಿಯೂ, ತಂಡವು ಪಂದ್ಯದ ದ್ವಿತೀಯಾರ್ಧದಲ್ಲಿ26–18 ಮುನ್ನಡೆ ಸಾಧಿಸಿತು.

3ನೇ ಅವಧಿಯಲ್ಲಿಭಾರತ ಅಚಲ ಆತ್ಮವಿಶ್ವಾಸವನ್ನು ಪ್ರದರ್ಶಿಸಿತು. ನಾಯಕ ಪ್ರತೀಕ್ ವೈಕರ್ ಅನೇಕ ಸ್ಕೈ ಡೈವ್‌ಗಳೊಂದಿಗೆ ಮ್ಯಾಟ್ ಮೇಲೆ ಮಿಂಚಿದರು ಮತ್ತು ಪಂದ್ಯಾವಳಿಯ ಇನ್ನೊಬ್ಬ ತಾರೆ ರಾಮ್‌ಜಿ ಕಶ್ಯಪ್ ಅವರ ಬೆಂಬಲದೊಂದಿಗೆ. ಆದಿತ್ಯ ಗನ್ಪುಲೆ ಕೂಡ ತಮ್ಮ ಅತ್ಯುತ್ತಮ ಪ್ರದರ್ಶನ ನೀಡಿದರು. ಅಂತಿಮವಾಗಿ ತಂಡದ ಸಾಮೂಹಿಕ ಪ್ರಯತ್ನವು ತಂಡದ ಅಂಕವನ್ನು 54–18 ಕ್ಕೆ ವಿಸ್ತರಿಸಿತು.

ಟೀಮ್ ಇಂಡಿಯಾ ವಿರುದ್ಧ ಪುಟಿದೇಳುವ ಪ್ರಯತ್ನದಲ್ಲಿನೇಪಾಳ ತಂಡವು ಟರ್ನ್ 4 ರಲ್ಲಿ ಕಠಿಣ ಹೋರಾಟ ನಡೆಸಿತು. ಆದರೆ ಮತ್ತೊಮ್ಮೆ ಪ್ರತೀಕ್ ವೈಕರ್ ನೇತೃತ್ವದ ಡಿಫೆಂಡರ್‌ಗಳು ಮತ್ತು ಈ ಬಾರಿ ಚಿಂಗಾರಿ ಎಂದು ಪ್ರೀತಿಯಿಂದ ಕರೆಯಲ್ಪಡುವ ಸಚಿನ್ ಭಾರ್ಗೋ ಅವರು ತುಂಬಾ ಬಲಶಾಲಿ ಎಂದು ಸಾಬೀತುಪಡಿಸಿದರು. ಅಂತಿಮವಾಗಿ ಮೆಹುಲ್ ಮತ್ತು ಸುಮನ್ ಬರ್ಮನ್ 54–36 ಅಂಕಗಳ ಅಂತರದಲ್ಲಿ ಭಾರತ ಗೆಲುವು ಸಾಧಿಸಲು ನೆರವಾದರು.

ಪುರುಷರ ಖೋ–ಖೋ ವಿಶ್ವಕಪ್‌ನಲ್ಲಿ ಒಟ್ಟು 20 ತಂಡಗಳು ಭಾಗವಹಿಸಿದ್ದವು.

ಈ ಅವಧಿಯಲ್ಲಿ ಭಾರತದ ಪುರುಷರ ತಂಡ ನೇಪಾಳ, ಪೆರು, ಬ್ರೆಜಿಲ್ ಮತ್ತು ಭೂತಾನ್‌ನೊಂದಿಗೆ ಎ ಗುಂಪಿನಲ್ಲಿತ್ತು. ಗ್ರೂಪ್ ಹಂತದಲ್ಲಿ ಭಾರತ ಪ್ರತಿ ಪಂದ್ಯವನ್ನು ಗೆಲ್ಲುವಲ್ಲಿ ಯಶಸ್ವಿಯಾಗಿತ್ತು. ಭಾರತ ತಂಡ ನೇಪಾಳವನ್ನು 42–37 ಅಂಕಗಳಿಂದ ಸೋಲಿಸಿ ಟೂರ್ನಿಯಲ್ಲಿ ಶುಭಾರಂಭ ಮಾಡಿತ್ತು. ಇದಾದ ಬಳಿಕ ಬ್ರೆಜಿಲ್ ತಂಡವನ್ನು 64–34 ಅಂಕಗಳಿಂದ ಸೋಲಿಸಿದ್ದರೆ, ಪೆರು ವಿರುದ್ಧ 70–38 ಅಂತರದ ಗೆಲುವು ಸಾಧಿಸಿತ್ತು. ಆ ಬಳಿಕ ಭೂತಾನ್ ತಂಡವನ್ನು 71–34ರಲ್ಲಿ ಮಣಿಸಿತ್ತು.

ನಾಕೌಟ್ ಪಂದ್ಯಗಳಲ್ಲಿಯೂ ಏಕಪಕ್ಷೀಯವಾಗಿ ಗೆಲುವು ಸಾಧಿಸಿದ್ದ ಭಾರತ, ಕ್ವಾರ್ಟರ್ ಫೈನಲ್‌ನಲ್ಲಿ ಶ್ರೀಲಂಕಾವನ್ನು 100–40 ಅಂತರದಿಂದ ಸೋಲಿಸಿದರೆ, ಇದಾದ ಬಳಿಕ ಸೆಮಿಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ 60–18 ಅಂತರದಲ್ಲಿ ಜಯ ಸಾಧಿಸಿತ್ತು. ಈ ಪ್ರಬಲ ಪ್ರದರ್ಶನದಿಂದಾಗಿ ಭಾರತ ಪುರುಷರ ತಂಡ ಫೈನಲ್‌ಗೆ ಲಗ್ಗೆ ಇಟ್ಟಿತ್ತು.

ಗಣ್ಯರ ಸಮಾಗಮ: ಖೋ ಖೋ ವಿಶ್ವಕಪ್ ಫೈನಲ್ ಪಂದ್ಯಗಳಿಗೆ ಹಲವು ಗಣ್ಯರು ಸಾಕ್ಷಿಯಾದರು. ಇದು ಈ ಐತಿಹಾಸಿಕ ಕ್ರೀಡಾಕೂಟಕ್ಕೆ ಇನ್ನಷ್ಟು ಮೆರಗು ನೀಡಿತು. ಲೋಕಸಭೆಯ ಮಾಜಿ ಸ್ಪೀಕರ್ ಸುಮಿತ್ರಾ ಮಹಾಜನ್, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಪಂಕಜ್ ಮಿಥಾಲ್ ಮತ್ತು ಕೇಂದ್ರ ಸಚಿವ ಕಿರಣ್ ರಿಜಿಜು ಸೇರಿ ಹಲವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಇವರಲ್ಲದೆ, ಒಡಿಶಾದ ಕ್ರೀಡೆ ಹಾಗೂ ಉನ್ನತ ಶಿಕ್ಷಣ ಸಚಿವ ಸೂರ್ಯವಂಶಿ ಸೂರಜ್, ಅಂತಾರಾಷ್ಟ್ರೀಯ ಖೋ ಖೋ ಫೆಡರೇಶನ್ ಅಧ್ಯಕ್ಷ ಸುಧಾಂಶು ಮಿತ್ತಲ್ ಸಹ ಉಪಸ್ಥಿತರಿದ್ದರು.

ನಾಟಕೋತ್ಸವ ಸಂಪನ್ನ

ಮತ್ತು ಬದುಕಿನ ಚೌಕಟ್ಟನ್ನು ಪ್ರಯೋಗಾತ್ಮಕವಾಗಿ ಪ್ರಸ್ತುತಪಡಿಸಲಾಯಿತು.

ವರ್ಚ್ಯುಯಲ್ ಜಗತ್ತು: ಮಕ್ಕಳ ಬಹುರೂಪಿ ಅಂಗವಾಗಿ ಕಲಾಮಂದಿರದಲ್ಲಿ ಪ್ರದರ್ಶನ ಗೊಂಡ 'ಮೈ ಫ್ಯಾಮಿಲಿ' ಕನ್ನಡ ನಾಟಕ, ತಂತ್ರಜ್ಞಾನದ ಕಾಲ ಘಟ್ಟದಲ್ಲಿ ಮಕ್ಕಳ ಗ್ರಹಿಕೆ, ಆಲೋಚನೆಗಳಲ್ಲಾಗುತ್ತಿರುವ ಬದಲಾವಣೆ, ಮೊಬೈಲ್ ಮೂಲಕ ತೆರೆದುಕೊಳ್ಳುವ ವರ್ಚ್ಯುಯಲ್ ಲೋಕವನ್ನು ಅನಾವರಣಗೊಳಿಸಿತಲ್ಲದೆ ಎಚ್ಚರಿಕೆಯ ಸಂದೇಶವನ್ನು ನೀಡಿತು.

ಜಾನಪದ ವೈಭವ: ಕಿಂದರಿ ಜೋಗಿ ವೇದಿಕೆಯ ಜಾನಪದ ಉತ್ಸವದಲ್ಲಿ ಉಡುಪಿಯ ನವೋದಯ ತಂಡದ 'ಕೊರಗ ಡೋಲು' ಹಾಗೂ ಶಿವಮೊಗ್ಗದ ಜ್ಯೋತಿ ಮತ್ತು ತಂಡದ 'ಲಂಬಾಣಿ' ನೃತ್ಯ ಕಲಾಭಿಮಾನಿಗಳ ಮನಸೂರೆ ಗೊಂಡಿತು.

ಭರ್ತಿ ಪ್ರದರ್ಶನ: ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದಲ್ಲಿ ಪ್ರದರ್ಶನಗೊಂಡ ಎಲ್ಲಾ ನಾಟಕಗಳು ಭರ್ತಿ ಪ್ರದರ್ಶನ ಕಂಡವು. ಕಡೆಯ ದಿನವಂತೂ ಎಲ್ಲಾ ರಂಗ ವೇದಿಕೆಗಳು ಸಂಪೂರ್ಣ ಭರ್ತಿಯಾಗಿದ್ದವು. ಅಲ್ಲದೆ ಆಹಾರ ಮಳಿಗೆ, ಅಗತ್ಯ ವಸ್ತುಗಳ ಮಳಿಗೆಗಳ ಕಡೆಯೂ ಜನಸಂದಣಿ ಹೆಚ್ಚಾಗಿತ್ತು. ಕಲಾಮಂದಿರದಲ್ಲಿ ಪ್ರದರ್ಶನ ಮಕ್ಕಳ ಬಹುರೂಪಿ ನಾಟಕಗಳ ವೀಕ್ಷಣೆಗೆ ಮಕ್ಕಳು, ಪೋಷಕರ ದಂಡೆ ಹರಿದು ಬಂದಿತ್ತು.

ಅಮೆರಿಕ ಅಧ್ಯಕ್ಷರಾಗಿ ಟ್ರಂಪ್ ಪ್ರಮಾಣ ವಚನ

ರಿಪಬ್ಲಿಕನ್ ಪಕ್ಷದ ಟೆಕ್ ಟೈಟಾನ್‌ಗಳನ್ನು ಸಮಾರಂಭಕ್ಕೆ ಹಾಜರಾಗಲು ಆಹ್ವಾನ ನೀಡಲಾಗಿದೆ. ಬಿಲಿಯನೇರ್‌ಗಳಾದ ಎಲೋನ್ ಮಸ್ಕ್, ಜೆಫ್ ಬೆಜೋಸ್ ಮತ್ತು ಮಾರ್ಕ್ ಜುಕರ್‌ಬರ್ಗ್ ಹಾಗೂ ಚೀನಾದ ಸಾಮಾಜಿಕ ಮಾಧ್ಯಮ ದೈತ್ಯ ಟಿಕ್‌ಟಾಕ್‌ನ ಮುಖ್ಯಸ್ಥ ಶೌ ಚೆವ್ ಕೂಡ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ ಎಂದು ಅಮೆರಿಕ ಮಾಧ್ಯಮಗಳು ವರದಿ ಮಾಡಿವೆ.


ಬೈಡನ್ ಭಾಗಿ: 2020ರಲ್ಲಿ ತಮ್ಮನ್ನು ಸೋಲಿಸಿ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದ್ದ ಬೈಡನ್ ಅವರ ಸಮಾರಂಭದಲ್ಲಿ ಭಾಗವಹಿಸಲು ಟ್ರಂಪ್ ನಿರಾಕರಿಸಿದ್ದರು. ಆದರೆ ನಿರ್ಗಮಿತ ಅಧ್ಯಕ್ಷ ಜೋ ಬೈಡನ್ ಟ್ರಂಪ್ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಮಾಜಿ ಅಧ್ಯಕ್ಷರಾದ ಬಿಲ್ ಕ್ಲಿಂಟನ್, ಜಾರ್ಜ್ ಡಬ್ಲ್ಯೂ ಬುಷ್ ಮತ್ತು ಬರಾಕ್ ಒಬಾಮಾ ಸಹ ಪದಗ್ರಹಣ ಸಮಾರಂಭದಲ್ಲಿ ಭಾಗಿಯಾಗಲಿದ್ದಾರೆ. 2016ರ ಅಧ್ಯಕ್ಷೀಯ ಚುನಾವಣೆಯಲ್ಲಿ ಟ್ರಂಪ್ ಸೋಲಿಸಿದ ಹಿಲರಿ ಕ್ಲಿಂಟನ್, 2024ರ ನವೆಂಬರ್ ಚುನಾವಣೆ ಯಲ್ಲಿ ಪರಾಭವಗೊಂಡ ನಿರ್ಗಮಿತ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಸಹ ಉದ್ಘಾಟನಾ ಸಮಾರಂಭದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ವಿದೇಶಗಳ ಮುಖ್ಯಸ್ಥರನ್ನು ಸಾಂಪ್ರದಾಯಿಕವಾಗಿ ಪದಗ್ರಹಣ ಸಮಾರಂಭಕ್ಕೆ ಆಹ್ವಾನಿಸಲಾಗುವುದಿಲ್ಲ. ಆದರೆ ಟ್ರಂಪ್ ಅವರು ಬಲಪಂಥೀಯ ಒಲವು ಹೊಂದಿರುವ ಕೆಲವರು ಸೇರಿದಂತೆ ಬೆರಳೆಣಿಕೆಯ ವಿದೇಶಿ ನಾಯಕರಿಗೆ ಆಹ್ವಾನಗಳನ್ನು ಕಳುಹಿಸಿದ್ದಾರೆ. ಬಲಪಂಥೀಯ ವಿಚಾರಧಾರೆ ಹೊಂದಿರುವ ಇಟಲಿಯ ಪ್ರಧಾನಿ ಜಾರ್ಜಿಯಾ ಮೆಲೋನಿ ಟ್ರಂಪ್ ಪ್ರಮಾಣ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಅವರ ಕಚೇರಿ ಶನಿವಾರ ದೃಢಪಡಿಸಿದೆ. ಹಂಗೇರಿಯ ವಿಕ್ಟರ್ ಓರ್ಬನ್, ಅರ್ಜೆಂಟೀನಾದ ಅಧ್ಯಕ್ಷ ಜೇವಿಯರ್ ಮಿಲೀ ಮತ್ತು ಚೀನಾದ ಕ್ಸಿ ಜಿನ್‌ಪಿಂಗ್ ಅವರನ್ನು ಸಹ ಆಹ್ವಾನಿಸಲಾಗಿದೆ.

ಬಹಿರಂಗ ಸಮಾರಂಭದ ಬದಲು ಒಳಾಂಗಣಕ್ಕೆ ಶಿಫ್ಟ್: ಭಾರೀ ಶೀತಗಾಳಿಯ ಹಿನ್ನೆಲೆಯಲ್ಲಿ ಪ್ರಮಾಣವಚನ ಸಮಾರಂಭ ಕ್ಯಾಪಿಟಲ್ ರೊಟುಂಡಾಕ್ಕೆ ಬದಲಾಯಿಸಲಾಗಿದೆ. ಇಲ್ಲಿ ಕೇವಲ 600 ಜನರಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಶುಕ್ರವಾರ ಈ ನಿರ್ಧಾರ ಕೈಗೊಳ್ಳುವ ಮುನ್ನ 22 ಸಾವಿರ ಟಿಕೆಟ್‌ಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗಿತ್ತು. ಈ ಬಗ್ಗೆ ಮಾತನಾಡಿರುವ ಟ್ರಂಪ್, ಅತಿಯಾದ ತಾಪಮಾನ ಇಳಿಕೆಯಿಂದಾಗಿ ಈ ಬದಲಾವಣೆ ಮಾಡಲಾಗಿದೆ ಎಂದು ತಿಳಿಸಿದ್ದಲ್ಲದೆ, ಬೆಂಬಲಿಗರು ವಾಷಿಂಗ್ಟನ್‌ನ ಕ್ಯಾಪಿಟಲ್ ಒನ್ ಸ್ಪೋರ್ಟ್ಸ್ ಅರೇನಾದಿಂದ ಲೈವ್ ಫೀಡ್ ವೀಕ್ಷಿಸಬಹುದು ಎಂದಿದ್ದಾರೆ.

ನಾಟಕ, ಕಲೆ ಚಳವಳಿಯಲ್ಲ, ಬಳುವಳಿಯ ಭಾಗ

ನಾಟಕಕಾರ ಪ್ರೊ.ಹೆಚ್.ಎಸ್.ಶಿವಪ್ರಕಾಶ್ ಅಭಿಮತ



ನಾಟಕಕಾರ ಪ್ರೊ.ಹೆಚ್.ಎಸ್.ಶಿವಪ್ರಕಾಶ್ ಬಹುರೂಪಿ ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ನುಡಿಗಳನ್ನಾಡಿದರು.

ಮೈಸೂರು, ಜ.19(ಎಂಕೆ)– ನಾಟಕ ಮತ್ತು ಕಲೆ ಚಳವಳಿಯ ಭಾಗವಾಗುವುದಲ್ಲ. ಚಳವಳಿಯನ್ನು ಉಂಟುಮಾಡುವುದೂ ಅಲ್ಲ. ಬದಲಿಗೆ ಬಳುವಳಿಯನ್ನು ನೀಡುವುದಾಗಿದೆ ಎಂದು ಕವಿ, ನಾಟಕಕಾರ ಪ್ರೊ.ಹೆಚ್.ಎಸ್. ಶಿವಪ್ರಕಾಶ್ ಹೇಳಿದರು.

ಮೈಸೂರು ರಂಗಾಯಣದ ಬಿ.ವಿ. ಕಾರಂತ ರಂಗಚಾವಡಿಯಲ್ಲಿ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಸಮಾರೋಪ ಭಾಷಣ ಮಾಡಿದ ಅವರು, ರಂಗಭೂಮಿ ಸಾಮಾಜಿಕವಾಗಿ ಇತಿಹಾತ್ಮಕವಾದ ಜಗತ್ತನ್ನು ಸೃಷ್ಟಿಸುವ ಮನೋವೃತ್ತಿಯನ್ನು ನಮ್ಮಲ್ಲಿ ಉಂಟುಮಾಡಬೇಕು. ಆಗ ಮಾತ್ರವೆ ಪರಿವರ್ತನಾಶೀಲತೆ ಹೊರ ಜಗತ್ತಿನಲ್ಲಿ ಪ್ರತಿಫಲನವಾಗುತ್ತದೆ ಎಂದರು.

ಪ್ರತಿಭಟನೆಯ ಭಾಗವಾಗಿದ್ದ ಬೀದಿ ನಾಟಕಗಳು ಪ್ರಚಾರದ ಸಾಧನವಾಗಿದೆ. ರಾಜಕೀಯ ಪಕ್ಷಗಳಿಕೋಸ್ಕರ ಬೀದಿ ನಾಟಕಗಳನ್ನು ಮಾಡುತ್ತಿರುವುದನ್ನು ಸಹ ಕಾಣುತ್ತಿದ್ದೇವೆ. ಸಮಾಜದಲ್ಲಿ ಕ್ರಾಂತಿಯನ್ನು ತರಬೇಕು ಎಂದು ಬರೆದ ಯಾವುದೇ ನಾಟಕವೂ ಒಂದು ಸಣ್ಣ ಬದಲಾವಣೆಯನ್ನು ತರಲಿಲ್ಲ. ಆದ್ದರಿಂದ ರಂಗಭೂಮಿ ಅಂತರಂಗದ ಪರಿವರ್ತನೆ ತರುವ ನಿಟ್ಟಿನಲ್ಲಿ ಕೆಲಸ ಮಾಡಬೇಕು ಎಂದು ತಿಳಿಸಿದರು.

ಶರಣ ಪಂಥ: ವಚನ ಚಳವಳಿಯನ್ನು ಲಿಂಗಾಯತ ಅಥವಾ ವೀರಶೈವ ಎಂದು ಕರೆಯಬೋಕೋ ಎಂಬ ಚರ್ಚೆಗಳಾದವು. ಈ ಕುರಿತು ನಾನು ಸ್ವಲ್ಪ ಆಸಕ್ತಿ ವಹಿಸಿ ನೋಡಿದಾಗ ವಚನಕಾರರು ಹೆಚ್ಚಾಗಿ ಬಳಸಿರುವ ಪದ ಶರಣ ಎಂಬುದಾಗಿದೆ. ಆದ್ದರಿಂದ ವಚನ ಚಳವಳಿಯನ್ನು ಶರಣ ಪಂಥ ಎಂದು ಕರೆಯುವುದು ಸರಿಯಾದ ಮಾರ್ಗವಾಗಿದೆ ಎಂದು ಅಭಿಪ್ರಾಯಿಸಿದರು.

ವಚನಕಾರರು ಜಗತ್ತನ್ನು ಬದಲಾಯಿಸಲು ಹೊರಟ ವರ್ಗವಲ್ಲ. ತನ್ನನ್ನು ತಾನು ಬದಲಾಯಿಸಿಕೊಳ್ಳಲು ಹೊರಟ ವರ್ಗ. ವಚನಗಳಲ್ಲಿ ಇರುವುದು ಭಕ್ತಿಯಲ್ಲ. ಬದುಕನ್ನು ಸರಿಯಾದ ಮಾರ್ಗದಲ್ಲಿ ಬದಲಾಯಿಸುವ ಸಾರ. ತಾನು ಬದಲಾದರೆ, ಸುತ್ತ–ಮುತ್ತ ಇರುವವರಲ್ಲಿಯೂ ಬದಲಾವಣೆಯಾಗುತ್ತದೆ. ಒಳಗಿನಿಂದ ತರುವುದು ಬದಲಾವಣೆ ತರುವುದಾಗಿದೆ ಎಂದು ತಿಳಿಸಿದರು.

ಇದಕ್ಕೂ ಮುನ್ನ 'ಶರಣ ಚಳುವಳಿಯ ಕನ್ನಡಿಯಲ್ಲಿ ವರ್ತಮಾನದ ಬಿಕ್ಕಟ್ಟುಗಳು ಹಾಗೂ ಬಿಡುಗಡೆ ದಾರಿ' ಕುರಿತು ಪತ್ರಕರ್ತ ಟಿ.ಗುರುರಾಜ್, 'ಬಿಡುಗಡೆಯ ಕಣ್ಣೋಟದಲ್ಲಿ ಕಾಲುದಾರಿಯ ಅನುಭಾವಿಕ ಪಂಥಗಳು' ಕುರಿತು ಸಂಸ್ಕೃತಿ ಚಿಂತಕ ಪದ್ಮಾಲಯ ನಾಗರಾಜು ವಿಚಾರ ಮಂಡಿಸಿದರು. ಲೇಖಕ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಅಧ್ಯಕ್ಷತೆ ವಹಿಸಿದ್ದರು.

ಪುನರ್ ಸೃಷ್ಟಿಯಿಂದ ಹೊಸ ಚೈತನ್ಯ...!

ಇತಿಹಾಸ ಮತ್ತು ಪುರಾಣಗಳನ್ನು ಕಳೆದ 200 ವರ್ಷಗಳಲ್ಲಿ ನಮ್ಮವರು ಬೇರೆ ಬೇರೆ ಕಾರಣಕ್ಕೆ ಕಟ್ಟಿದ್ದಾರೆ. ಅವುಗಳಿಂದ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಲಾಭವನ್ನು ಪಡೆದಿದ್ದಾರೆ. ಆದರೆ ಅವುಗಳಲ್ಲಿನ ಚಿತ್ರಣಗಳನ್ನು ಹೊಡೆದು ಹೊಸ ಬಗೆಯ ಮತ್ತು ಅಗತ್ಯಕ್ಕೆ ಅನುಗುಣವಾಗಿ ಪುನರ್ ಸೃಷ್ಟಿಸಲು ಸಾಧ್ಯವಾದರೆ, ನಮ್ಮ ಕಾವ್ಯ, ಸಾಹಿತ್ಯ, ನಾಟಕಗಳಲ್ಲಿ ಒಂದು ಹೊಸ ಚೈತನ್ಯ ಬರುವ ಸಾಧ್ಯತೆ ಇದೆ.
- ಡಾ.ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷ, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಮೈಸೂರು ಮಿತ್ರ ಸೋಮವಾರ 20 ಜನವರಿ 2025

ಡಾ.ಶಿವಕುಮಾರ ಸ್ವಾಮೀಜಿ ಅವರ 6ನೇ ವರ್ಷದ ಪುಣ್ಯಸ್ಮರಣೆ: ನಾಳೆ ದಾಸೋಹ ದಿನ



ಡಾ.ಶಿವಕುಮಾರ ಸ್ವಾಮೀಜಿ

ಮೈಸೂರು, ಜ.19(ಜಿಎ)–ಡಾ. ಶಿವಕುಮಾರ ಸ್ವಾಮೀಜಿಯವರ ಆರನೇ ವರ್ಷದ ಪುಣ್ಯ ಸ್ಮರಣೆ ಕಾರ್ಯಕ್ರಮದ ಅಂಗವಾಗಿ ಜನವರಿ 21 ರಂದು ನಗರದಲ್ಲಿ ಡಾ.ಶಿವ ಕುಮಾರ ಸ್ವಾಮೀಜಿ ಭಕ್ತ ಮಂಡಳಿಯಿಂದ ದಾಸೋಹ ದಿನ ಆಚರಿಸಲಾಗುತ್ತಿದೆ ಎಂದು ನಿಕಟಪೂರ್ವ ಕೋಶಾಧ್ಯಕ್ಷ ವರುಣ ಮಹೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9 ಗಂಟೆಗೆ ಅಗ್ರಹಾರದ 101 ಗಣಪತಿ ದೇವಸ್ಥಾನದ ಬಳಿ ಗುರುಶಾಂತ ಸ್ವಾಮೀಜಿ, ಕುದೇರು ಮಠದ ಸ್ವಾಮೀಜಿ, ಮಡಿವಾಳ ಸ್ವಾಮೀಜಿ, ಜಡೆ ಸ್ವಾಮೀಜಿ, ಗುರುಲಿಂಗ ಕಿರಿಯ ಸ್ವಾಮೀಜಿಯವರ ಸಮ್ಮುಖದಲ್ಲಿ ಮೆರವಣಿಗೆಗೆ ಚಾಲನೆ ನೀಡಲಾಗುವುದು. ಬಳಿಕ ತ್ಯಾಗರಾಜ ರಸ್ತೆ, ಚಾಮರಾಜ ಜೋಡಿ ರಸ್ತೆ ಜೆಎಸ್ಎಸ್ ವಿದ್ಯಾಪೀಠದ ಬಳಿಯ ಬಸವ ಪುತ್ಥಳಿ ಮೂಲಕ ಕುದೇರು ಮಠದ ಮಾರ್ಗವಾಗಿ ಸಾಗಿ ಆರಂಭದ ಸ್ಥಳಕ್ಕೇ ಬಂದು ತಲುಪಲಿದೆ. ಈ ಮೆರವಣಿಗೆಯಲ್ಲಿ ಶಿವಕುಮಾರ ಸ್ವಾಮೀಜಿ ಮೊದಲಾದವರ ಭಾವಚಿತ್ರದ ಜೊತೆಗೆ ನಂದಿ ಕಂಬ, ವೀರಗಾಸೆ, ಪೂಜಾಕುಣಿತ, ಡೊಳ್ಳು ಕುಣಿತ, ಪಟದ ಕುಣಿತ ಮೊದಲಾದ ಜಾನಪದ ತಂಡಗಳು ಪಾಲ್ಗೊಳ್ಳಲಿವೆ. ಇದೇ ವೇಳೆ ಮಧ್ಯಾಹ್ನ 12.30ಕ್ಕೆ ಕುದೇರು ಮಠದ ಬಳಿ ಪ್ರಸಾದ ವಿನಿಯೋಗ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಭಕ್ತ ಮಂಡಳಿ ಅಧ್ಯಕ್ಷ ಎಸ್. ಚಿಕ್ಕಹಳ್ಳಿ ಸ್ವಾಮಿ, ಗಿರೀಶ್ ಶಿವಾರ್ಚಕ, ಲೋಕೇಶ್, ಶಾಂತಮ್ಮ, ಲೋಹಿತ್, ಗೊರೂರು ಮಲ್ಲೇಶ್ ಉಪಸ್ಥಿತರಿದ್ದರು.

ಚೆಸ್ಕಾಂನಿಂದ ಮೈಸೂರಲ್ಲಿ ವಿದ್ಯುತ್ ಸುರಕ್ಷತಾ ಓಟ



ಮೈಸೂರಿನ ಓವಲ್ ಮೈದಾನದಲ್ಲಿ ಭಾನುವಾರ ನಡೆದ ವಿದ್ಯುತ್ ಸುರಕ್ಷತಾ ಕುರಿತ ಜಾಗೃತಿ ಓಟಕ್ಕೆ ಶಾಸಕರು ಹಾಗೂ ಚೆಸ್ಕಾಂ ಅಧ್ಯಕ್ಷರೂ ಆದ ಎ.ಬಿ.ರಮೇಶಬಾಬು ಬಂಡಿಸಿದ್ದೇಗೌಡ ಚಾಲನೆ ನೀಡಿದರು.

ಮೈಸೂರು, ಜ.19(ಜಿಎ)–ಸಂಡೇ ಸ್ಪೋರ್ಟ್ಸ್ ಕ್ಲಬ್‌ನ ವಾರ್ಷಿಕೋತ್ಸವದ ಅಂಗವಾಗಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ(ಚೆಸ್ಕಾಂ) ದ ಸಹಭಾಗಿತ್ವದಲ್ಲಿ ಮೈಸೂರಿನ ಓವಲ್ ಮೈದಾನದಲ್ಲಿ ಭಾನುವಾರ ನಡೆದ ವಿದ್ಯುತ್ ಸುರಕ್ಷತಾ ಕುರಿತ ಜಾಗೃತಿ ಓಟಕ್ಕೆ ಶಾಸಕರು ಹಾಗೂ ಚೆಸ್ಕಾಂ ಅಧ್ಯಕ್ಷರೂ ಆದ ಎ.ಬಿ.ರಮೇಶಬಾಬು ಬಂಡಿಸಿದ್ದೇಗೌಡ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಸುರಕ್ಷತೆಗಾಗಿ ಜನಸಾಮಾನ್ಯರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಈ ಮ್ಯಾರಥಾನ್ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರಲ್ಲಿ ವಿದ್ಯುತ್ ಅವಘಡದ ಪರಿಣಾಮ ಕುರಿತು ಮುನ್ನೆಚ್ಚರಿಕೆ ಇರಬೇಕು. ಯಾವುದೇ ರೀತಿಯ ಅವಘಡವಾಗಬಾರದು ಎಂಬುದು ನಮ್ಮ ಉದ್ದೇಶವಾಗಿದೆ ಎಂದರು.

ನಗರದ ಓವಲ್ ಮೈದಾನದಲ್ಲಿ ನಡೆದ ಸುರಕ್ಷತಾ ಓಟದಲ್ಲಿ ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ದು, ಜನರು ಆಸಕ್ತಿಯಿಂದ ಭಾಗವಹಿಸಿದ್ದರು. 10 ಕಿ.ಮೀ ಓಟವು ಓವಲ್ ಮೈದಾನದಿಂದ ಪ್ರಾರಂಭವಾಗಿ ಹುಣಸೂರು ರಸ್ತೆ ಮೂಲಕ ಪ್ರೀಮಿಯರ್ ಸ್ಟುಡಿಯೋ, ಜೆ.ಸಿ. ಕಾಲೇಜು ರಸ್ತೆ, ಬೋಗಾದಿ, ಕುಕ್ಕರಹಳ್ಳಿ ರಸ್ತೆ ದಾಟಿ ರಾಮಸ್ವಾಮಿ ಸರ್ಕಲ್ ಮೂಲಕ ಓವಲ್ ಮೈದಾನ ತಲುಪಿತು. 3 ಕಿ.ಮೀ ಓಟದಲ್ಲಿ ಓವಲ್ ಮೈದಾನದಿಂದ ಹುಣಸೂರು ರಸ್ತೆ ಮೂಲಕ ಕುಕ್ಕರಹಳ್ಳಿ ರಸ್ತೆ, ಫೈರ್ ಬ್ರಿಗೇಡ್ ರಸ್ತೆ, ರಾಮಸ್ವಾಮಿ ರಸ್ತೆ ಮೂಲಕ ಮೈದಾನ ತಲುಪಿತು. ಕಾರ್ಯಕ್ರಮದಲ್ಲಿ ಸಂಡೇ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ಎಂ.ಸುರೇಶ, ಉಪಾಧ್ಯಕ್ಷ ಗೋಪಾಲಕೃಷ್ಣ, ಕಾರ್ಯದರ್ಶಿ ಎ.ಎಸ್.ಅಶೋಕ್, ಖಜಾಂಚಿ ಪೃಥ್ವಿರಾಜ, ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕಿ ಜಿ.ಶೀಲಾ, ಮುನಿಗೋಪಾಲರಾಜು, ಜಿ.ರೇಣುಕಾ, ಲಿಂಗರಾಜಮ್ಮ ಸೇರಿದಂತೆ ಚೆಸ್ಕಾಂ ಸಿಬ್ಬಂದಿ ಪಾಲ್ಗೊಂಡಿದ್ದರು.

ಮೈಸೂರು ಮಣಿಪಾಲ್ ಆಸ್ಪತ್ರೆಯಿಂದ ಪೊಲೀಸರಿಗೆ ಬಿಎಲ್‌ಎಸ್ ತರಬೇತಿ



ಮೈಸೂರಿನ ಮಣಿಪಾಲ್ ಆಸ್ಪತ್ರೆ ಹಾಗೂ ನಗರ ಪೊಲೀಸ್ ಸಹಕಾರದಲ್ಲಿ ಸಿಬ್ಬಂದಿಗೆ ಬಿಎಲ್‌ಎಸ್ ತರಬೇತಿ ಆಯೋಜಿಸಲಾಗಿತ್ತು.

ಮೈಸೂರು, ಜ.19–ಮೈಸೂರಿನ ಮಣಿಪಾಲ್ ಆಸ್ಪತ್ರೆ ವತಿಯಿಂದ ನಗರ ಸಂಚಾರ ಪೊಲೀಸರಿಗೆ ಬೇಸಿಕ್ ಲೈಫ್ ಸಪೋರ್ಟ್ (ಬಿಎಲ್‌ಎಸ್) ತರಬೇತಿ ನೀಡಲಾಯಿತು. ರಸ್ತೆ ಸುರಕ್ಷತಾ ಮಾಸದ ಅಂಗವಾಗಿ ನಗರ ಪೊಲೀಸ್ ಸಹಯೋಗದಲ್ಲಿ ಬನ್ನಿಮಂಟಪದ ಸೇಂಟ್ ಫಿಲೋಮಿನಾ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ ತರಬೇತಿಯನ್ನು ಡಿಸಿಪಿ ಎಸ್.ಜಾಹ್ನವಿ ಹಾಗೂ ಸಂಚಾರ ವಿಭಾಗದ ಎಸಿಪಿ ಹೆಚ್.ಪರಶುರಾಮಪ್ಪ ಉದ್ಘಾಟಿಸಿದರು.

ಅಪಘಾತ ಸಂಭವಿಸಿದಾಗ ವೈದ್ಯಕೀಯ ನೆರವಿಗೆ ಮುನ್ನ ಬೇಸಿಕ್ ಲೈಫ್ ಸಪೋರ್ಟ್ ಅನುಸರಿಸಿದರೆ ಗಾಯಾಳು ಜೀವ ರಕ್ಷಣೆಗೆ ಸಹಕಾರಿಯಾಗಲಿದೆ. ಈ ಹಿನ್ನೆಲೆಯಲ್ಲಿ ಸಿಪಿಆರ್, ಎದೆಯ ಸಂಕೋಚನಗಳು ಮತ್ತು ಡಿಫಿಬ್ರಿಲೇಷನ್ ಸೇರಿದಂತೆ ಜೀವ ಉಳಿಸುವ ತುರ್ತು ಕೌಶಲಗಳ ಬಗ್ಗೆ ಮಾಹಿತಿ ನೀಡಲಾಯಿತು. ಒಬ್ಬ ವ್ಯಕ್ತಿಯ ಹೃದಯ ಬಡಿತ ಅಥವಾ ಉಸಿರಾಟ ನಿಂತಾಗ, ವೈದ್ಯಕೀಯ ಸಹಾಯಕ್ಕೆ ಮುನ್ನ ಬಿಎಲ್‌ಎಸ್ ಸಹಕಾರಿಯಾಗುವ ಬಗ್ಗೆ ಮಣಿಪಾಲ್ ಆಸ್ಪತ್ರೆಯ ಎಮರ್ಜೆನ್ಸಿ ಮೆಡಿಸಿನ್ ಕನ್ಸಲ್ಟೆಂಟ್ ಡಾ.ಅಮೋಘ ವರ್ಷಾ ನೇತೃತ್ವದಲ್ಲಿ ವಿವರಿಸಲಾಯಿತು. 500ಕ್ಕೂ ಹೆಚ್ಚು ಸಿಬ್ಬಂದಿ ಪಾಲ್ಗೊಂಡಿದ್ದರು.

ಎಟಿಎಂಗೆ ತುಂಬಿಸಬೇಕಿದ್ದ ಹಣ ಲಪಟಾಯಿಸಿದ ಆರೋಪ
ಫ್ರ್ಯಾಂಚೈಸ್ ಉದ್ಯೋಗಿ ಸೇರಿ ಇಬ್ಬರ ವಿರುದ್ಧ ಕೇಸ್

ಮೈಸೂರು, ಜ.19(ಎಸ್‌ಬಿಡಿ)–ಎಟಿಎಂ ಯಂತ್ರಕ್ಕೆ ಲೋಡ್ ಮಾಡಬೇಕಿದ್ದ ಹಣವನ್ನು ಲಪಟಾಯಿಸಿದ ಆರೋಪದಡಿ ಫ್ರ್ಯಾಂಚೈಸ್ ಸಂಸ್ಥೆಯ ಉದ್ಯೋಗಿ ಸೇರಿದಂತೆ ಇಬ್ಬರ ವಿರುದ್ಧ ಮೈಸೂರಿನ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಇಂಡಿಯಾ 1(ಒನ್) ಎಟಿಎಂ ಫ್ರ್ಯಾಂಚೈಸ್ ಪಡೆದಿರುವ ಟಿಎಲ್ ಎಂಟರ್‌ಪ್ರೈಸಸ್ ಸಂಸ್ಥೆಯ ಉದ್ಯೋಗಿಯಾಗಿದ್ದ ತಿ.ನರಸೀಪುರ ತಾಲೂಕಿನ ಅಕ್ಷಯ್ 5.80 ಲಕ್ಷ ರೂ. ವಂಚಿಸಿದ್ದು, ಪರಿಚಿತೆ ತೇಜಸ್ವಿನಿ ಆತನಿಗೆ ಕುಮ್ಮಕ್ಕು ನೀಡಿದ್ದಾಳೆ ಎಂದು ಸಂಸ್ಥೆಯ ಮುಖ್ಯಸ್ಥ ಕೆ.ಟಿ.ಸಂಜಯ್ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಟಿಎಲ್ ಎಂಟರ್‌ಪ್ರೈಸಸ್ ಸಂಸ್ಥೆ ಮೂಲಕ ಮೈಸೂರು ಜಿಲ್ಲೆಯ 16 ಇಂಡಿಯಾ 1(ಒನ್) ಎಟಿಎಂ ನಿರ್ವಹಣೆ ಮಾಡಲಾಗುತ್ತಿದೆ. ಮೂರು ತಿಂಗಳಿಂದ ಅಕ್ಷಯ್ ಎಟಿಎಂಗಳಿಗೆ ಕ್ಯಾಶ್ ಲೋಡಿಂಗ್ ಮಾಡುತ್ತಿದ್ದ. ಕಳೆದ 2024ರ ನವೆಂಬರ್ 29 ಹಾಗೂ 30ರಂದು ಎಸ್‌ಬಿಐ ಖಾತೆಯಿಂದ 35.60 ಲಕ್ಷ ಹಾಗೂ 49.10 ಲಕ್ಷ ರೂ. ಡ್ರಾ ಮಾಡಿ, ಎಟಿಎಂಗಳಿಗೆ ಲೋಡಿಂಗ್ ಮಾಡಲಾಗಿತ್ತು.

ಆದರೆ ಡಿ.2ರಂದು ಸಂಸ್ಥೆಯ ರೆಗ್ಯುಲರ್ ಆಡಿಟ್ ನಡೆಯುತ್ತಿದ್ದ ಕಾರಣ ಕಚೇರಿಗೆ ಬೇಗ ಬರುವಂತೆ ಹೇಳಿದ್ದರೂ ಮಧ್ಯಾಹ್ನವಾದರೂ ಅಕ್ಷಯ್ ಬರಲಿಲ್ಲ. ಕರೆ ಮಾಡಿದರೆ ಸ್ಪಂದಿಸಲಿಲ್ಲ. ಅಲ್ಲದೆ ಆಡಿಟ್ ವೇಳೆ ಹಣ ವ್ಯತ್ಯಾಸವಾಗಿರುವುದು ತಿಳಿಯಿತು. ಬಳಿಕ ಎಟಿಎಂಗಳ ಸಿಸಿ ಕ್ಯಾಮರಾ ಫುಟೇಜ್ ಪರಿಶೀಲಿಸಿದಾಗ ಗದ್ದಿಗೆ ಗ್ರಾಮದ ಎಟಿಎಂಗೆ ಲೋಡ್ ಮಾಡಬೇಕಿದ್ದ 5.80 ಲಕ್ಷ ಹಣವನ್ನು ಅಕ್ಷಯ್ ಬ್ಯಾಗ್‌ನಲ್ಲಿ ತುಂಬಿಕೊಂಡು ತೆಗೆದುಕೊಂಡು ಹೋಗಿರುವ ದೃಶ್ಯ ಕಂಡುಬಂದಿತು. ಈ ಕೃತ್ಯಕ್ಕೆ ತೇಜಸ್ವಿನಿ ಕುಮ್ಮಕ್ಕು ನೀಡಿದ್ದಾರೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ವಿವರಿಸಲಾಗಿದೆ.

ವ್ಯತ್ಯಾಸವಾಗಿರುವ ಹಣವನ್ನು ವಾಪಸ್ ಕೊಡುವುದಾಗಿ ಹೇಳಿದ್ದ ಅಕ್ಷಯ್ ಈವರೆಗೂ ಹಣ ನೀಡದ ಕಾರಣ ನಿನ್ನೆ ಪ್ರಕರಣ ದಾಖಲಿಸಲಾಗಿದೆ. ಎಟಿಎಂಗೆ ತುಂಬದೆ ಲಪಟಾಯಿಸಿದ್ದ ಹಣದಲ್ಲಿ ಇಬ್ಬರೂ ಚಿನ್ನಾಭರಣ ಖರೀದಿಸಿದ್ದಾರೆ ಎನ್ನಲಾಗಿದೆ. ಸ್ನೇಹಿತರ ಜೊತೆ ಪಾರ್ಟಿ ಮಾಡುತ್ತಿದ್ದ ವೇಳೆ ಅಕ್ಷಯ್‌ನನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸುತ್ತಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

2025ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ



ಮೈಸೂರು ತಾಲೂಕು ನಾಯಕ ಸಂಘದ ವತಿಯಿಂದ ಹೊರತಂದಿರುವ ನೂತನ ವರ್ಷದ ಕ್ಯಾಲೆಂಡರನ್ನು ಸಂಸದ ಯದುವೀರ್ ಒಡೆಯರ್ ಬಿಡುಗಡೆ ಮಾಡಿದರು. ಈ ವೇಳೆ ಸಂಘದ ಗೌರವಾಧ್ಯಕ್ಷ ಉದ್ಬೂರು ಕೃಷ್ಣನಾಯಕ್, ಅಧ್ಯಕ್ಷ ಉದ್ಬೂರು ಎನ್.ಮಹಾದೇವಸ್ವಾಮಿ, ಕ್ಯಾತಮಾರನಹಳ್ಳಿ ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ಕಡಕೊಳ ಕುಮಾರಸ್ವಾಮಿ, ಉಪಾಧ್ಯಕ್ಷ ರಮ್ಮನಹಳ್ಳಿ ವೆಂಕಟಯ್ಯ, ಖಜಾಂಚಿ ಕುಮಾರಬೀಡು ಮರಿಸ್ವಾಮಿನಾಯಕ್, ಪದಾಧಿಕಾರಿಗಳಾದ ಶ್ರೀಧರ್‌ನಾಯಕ್, ಪಿತಾಂಬರ, ರಾಜಶೇಖರ್, ಕೃಷ್ಣಪ್ಪ, ನಾರಾಯಣ್, ಸೋಮ, ಚಂದ್ರು, ಅಂಕಪ್ಪ, ಶಿವನಂಜಯ್ಯ, ಸಿದ್ದರಾಜು, ಸುರೇಶ್‌ನಾಯಕ್, ಸಿದ್ದರಾಜು, ರಂಗಸ್ವಾಮಿ ಇತರರು ಉಪಸ್ಥಿತರಿದ್ದರು.

ಅಭಿಲಾಷೆ, ಅವಿಭಕ್ತ ಕುಟುಂಬದ ಬೆಂಬಲವಿದ್ದರೆ ಉದ್ಯಮ ಕ್ಷೇತ್ರದಲ್ಲಿ ಯಶಸ್ಸು



'ಮಹಿಳಾ ಉದ್ಯಮ' ಕುರಿತು ಮೂವರು ಮಹಿಳಾ ಉದ್ಯಮಿಗಳಿಂದ ವಿಚಾರ ಮಂಡನೆ

ಮೈಸೂರು, ಜ.19(ಎಸ್‌ಪಿಎನ್)–ಸಮಾಜದಲ್ಲಿ ಮಹಿಳೆಯರು ಏನಾದರೂ ಸಾಧಿಸಬೇಕು. ಸ್ವಂತ ಉದ್ಯಮ ಕಟ್ಟಬೇಕು ಎಂಬ ಇಚ್ಛೆ ಇದ್ದರೆ, ಅವಿಭಕ್ತ ಕುಟುಂಬದ ಸದಸ್ಯರ ಬೆಂಬಲ ಅಮೂಲ್ಯ ಎಂದು ಸಾಧಕ ಮಹಿಳಾ ಉದ್ಯಮಿಗಳಾದ ಡಿಆರ್‌ಸಿ ಸಿನಿಮಾಸ್ ಮ್ಯಾನೇಜಿಂಗ್ ಪಾರ್ಟ್ನರ್ ವೈಶಾಲಿ ಹನುಮಂತ್, ಆಕೃತಿ ಇಕೋ ಫ್ರೆಂಡ್ಲಿ ಎಂಟರ್ ಪ್ರೈಸಸ್ ಮಾಲೀಕರಾದ ವರ್ಷಾ ಶ್ರೀಕಂಠಸ್ವಾಮಿ ಹಾಗೂ ಎಸ್‌ಎನ್‌ಟಿ ಗ್ರೂಪ್ಸ್ ಮಾಲೀಕರಾದ ತೀರ್ಥ ಎಸ್.ಸ್ವಾಮಿ ಅಭಿಪ್ರಾಯಪಟ್ಟರು.

ವೀರಶೈವ ಲಿಂಗಾಯತ ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್–2025ರಲ್ಲಿ 'ಮಹಿಳಾ ಉದ್ಯಮ' ಕುರಿತು ಮಾತನಾಡಿದರು. ಮಹಿಳಾ ಉದ್ಯಮಿ ವೈಶಾಲಿ ಹನುಮಂತ್ ಮಾತನಾಡಿ, ಉದ್ಯಮದಲ್ಲಿ ಏರುಪೇರು ಇರುತ್ತದೆ. ಎಲ್ಲವನ್ನು ನಿಭಾಯಿಸಿ, ಉದ್ಯಮ ಮುನ್ನಡೆಸಬೇಕಾಗುತ್ತದೆ. ಇದಕ್ಕೆ ಅವಿಭಕ್ತ ಕುಟುಂಬದ ಸಲಹೆ–ಸೂಚನೆ ಅತ್ಯಗತ್ಯ ಎಂದರು.

ಉದ್ಯಮಿ ವರ್ಷಾ ಶ್ರೀಕಂಠಸ್ವಾಮಿ ಮಾತನಾಡಿ, ನನ್ನ ಬದುಕಿನಲ್ಲಿ ಕೊರೊನಾ ದೊಡ್ಡ ಜೀವನ ಪಾಠ ಕಲಿಸಿತು. ನನ್ನ ಗಂಡ, ಅತ್ತೆ–ಮಾವ ಹಾಗೂ ಇತರೆ ಕುಟುಂಬ ಸದಸ್ಯರ ಬೆಂಬಲದಿಂದ ಇಂದು ಉದ್ಯಮ ಕ್ಷೇತ್ರದಲ್ಲಿ ಬೆಳೆಯುತ್ತಿದ್ದೇನೆ. ನನ್ನ ಕೆಲಸವನ್ನು ಪ್ರಧಾನಿ ನರೇಂದ್ರಮೋದಿ ಅವರು, ಗುರುತಿಸಿ, ಮನ್ ಕೀ ಬಾತ್‌ನಲ್ಲೂ ಉಲ್ಲೇಖಿಸಿದ್ದನ್ನು ಸ್ಮರಿಸಿದರು. ಮತ್ತೋರ್ವ ಮಹಿಳಾ ಉದ್ಯಮಿ ತೀರ್ಥ ಎಸ್.ಸ್ವಾಮಿ, ಕೆಲಸಕ್ಕೂ ಮುನ್ನ ಕುಟುಂಬ ಮೊದಲು ಎನ್ನಿ, ನಂತರ ತಾನಾಗಿ ಎಲ್ಲರೂ ನಿಮ್ಮ ಯಶಸ್ಸಿಗೆ ಕೈಜೋಡಿಸುತ್ತಾರೆ ಎಂದು ಯುವ ಸಮೂಹಕ್ಕೆ ಸಲಹೆ ನೀಡಿದರು. ಶೃತಿ ವಿನೋದ್ ಕಾರ್ಯಕ್ರಮ ನಿರೂಪಿಸಿದರು.

ವಿಜಯೇಂದ್ರ ಮೊದಲು ತಮ್ಮ ಕುರ್ಚಿ ಭದ್ರಪಡಿಸಿಕೊಳ್ಳಲಿ



ಬಿ.ಸುಬ್ರಹ್ಮಣ್ಯ

ಮೈಸೂರು,ಜ.19–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆ ಕೇಳುತ್ತಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಮೊದಲು ತಮ್ಮ ಕುರ್ಚಿ ಭದ್ರಪಡಿಸಿಕೊಳ್ಳಲಿ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಹೇಳಿದ್ದಾರೆ.

ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಎಂ ರಾಜೀನಾಮೆ ಕೊಡಬೇಕೆಂಬ ಆಗ್ರಹಕ್ಕೆ ಪ್ರತಿಕ್ರಿಯಿಸಿರುವ ಅವರು, ವಿಜಯೇಂದ್ರ ರಾಜ್ಯಾಧ್ಯಕ್ಷ ಆದಾಗಿನಿಂದ ಇಡೀ ಬಿಜೆಪಿ ಮನೆಯೊಂದು ಮೂರುಬಾಗಿಲು ಆಗಿದೆ. ಹಿರಿಯ ನಾಯಕರು ತಿರುಗಿಬಿದ್ದಿದ್ದಾರೆ. ಹೈಕಮಾಂಡ್ ಕೂಡ ಬಿಜೆಪಿ ಪಕ್ಷದಲ್ಲಿ ಸರ್ಜರಿ ಮಾಡೋದಕ್ಕೆ ಚಿಂತನೆ ಮಾಡ್ತಾ ಇದೆ. ವಿಜಯೇಂದ್ರ ಕುರ್ಚಿ ಯಾವುದೇ ಕ್ಷಣದಲ್ಲೂ ಬೀಳಬಹುದು. ಹೀಗಿರುವಾಗ ಸಿದ್ದರಾಮಯ್ಯ ಅವರ ರಾಜೀನಾಮೆ ಕೇಳುತ್ತಿರುವುದು ನಗೆಪಾಟಲಾಗಿದೆ ಎಂದು ಕುಟುಕಿದ್ದಾರೆ. ಮುಡಾದಲ್ಲಿ ಸೈಟು ಹಂಚಿಕೆ ಆಗಿರುವುದು ಈ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲೇ. ಆಗ ನಿಮ್ಮ ಪೂಜ್ಯ ತಂದೆ ಯಡಿಯೂರಪ್ಪ ಅಧಿಕಾರದಲ್ಲಿದ್ದರು. ಸಿಎಂ ಪತ್ನಿ 14 ಸೈಟು ವಾಪಸ್ ಹಿಂದಿರುಗಿಸಿ ನೈತಿಕತೆ ಮೆರೆದಿದ್ದಾರೆ. ಆದರೆ ನಿಮ್ಮ ಪಕ್ಷದಲ್ಲಿ ಹಗರಣ ಮಾಡಿದ್ದ ಯಾವೊಬ್ಬ ನಾಯಕರೂ ಸೊಲ್ಲೆತ್ತುತ್ತಿಲ್ಲ. ಮೊದಲು ನಿಮ್ಮ ಮನೆಯ ಬೀಗವನ್ನು ಭದ್ರಪಡಿಸಿಕೊಳ್ಳಿ ಎಂದು ತಿವಿದಿದ್ದಾರೆ.

ವಿಶ್ವಕರ್ಮ ಯುವ ಜಾಗೃತಿ ವೇದಿಕೆ ಕ್ಯಾಲೆಂಡರ್ ಬಿಡುಗಡೆ



ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ವತಿಯಿಂದ 'ಸೇವಾ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಜ.19(ಜಿಎ)–ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ವತಿಯಿಂದ ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು. ಈ ವೇಳೆ ಉದ್ಯಮಿ ಬಿ.ಕೆ.ರಾಜು, ಸಮಾಜ ಸೇವಕರಾದ ಶ್ರೀಕಾಂತ್ ಮುರಳೀಧರ ತಿಪ್ಪೂರು, ಕೆ.ಗೋಪಾಲಕೃಷ್ಣ ಅವರಿಗೆ 'ಸೇವಾ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು. ವಿಶ್ವಕರ್ಮ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎನ್.ನಂದಕುಮಾರ್ ಮುಖ್ಯ ಅತಿಥಿಯಾಗಿದ್ದರು. ಈ ವೇಳೆ ಶಂಕರ್, ಸತೀಶ್, ರಾಜು, ಲೋಕೇಶ್, ಸಿದ್ದೇಶ್ ಇದ್ದರು.

ಇಂದು ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರ ಜಿಲ್ಲಾ ಪ್ರವಾಸ

ಮೈಸೂರು,ಜ.19–ಕರ್ನಾಟಕ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ.ಟಿ. ಶ್ಯಾಮ್‌ಭಟ್ ಹಾಗೂ ಸದಸ್ಯ ಎಸ್.ಕೆ.ಒಂಟಿಗೋಡಿ ಅವರು ಜ.20ರಂದು ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಅಂದು ಬೆಳಗ್ಗೆ 10 ಗಂಟೆಗೆ ಮೈಸೂರಿಗೆ ಆಗಮಿಸುವ ಅಧ್ಯಕ್ಷರು ಮೈಸೂರು ಕಾರಾಗೃಹಕ್ಕೆ ಭೇಟಿ ನೀಡಿ ಜಿಲ್ಲಾ ಕಾರಾಗೃಹದ ಅಧೀಕ್ಷಕರೊಂದಿಗೆ ಚರ್ಚೆ ನಡೆಸುವರು. ನಂತರ ಮಧ್ಯಾಹ್ನ 3 ಗಂಟೆಗೆ ಕೆ.ಆರ್ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿನ ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸುವರು ಎಂದು ಪ್ರಕಟಣೆ ತಿಳಿಸಿದೆ.

ಥಾರ್ ಜೀಪ್ ಡಿಕ್ಕಿ: ಮಹಿಳೆ ಸಾವು, ಮತ್ತೊಬ್ಬರಿಗೆ ಗಾಯ



ಮೈಸೂರು,ಜ.19(ಎಸ್‌ಬಿಡಿ)– ಮೈಸೂರಿನ ಬೋಗಾದಿ ರಿಂಗ್ ರಸ್ತೆಯಲ್ಲಿ ಶುಕ್ರವಾರ ಮಧ್ಯಾಹ್ನ ಸಂಭವಿಸಿದ ಸರಣಿ ಅಪಘಾತದಲ್ಲಿ ಮಹಿಳೆ ಮೃತಪಟ್ಟು, ಮತ್ತೊಬ್ಬರು ಗಾಯಗೊಂಡಿದ್ದಾರೆ.

ಬೋಗಾದಿ ರಿಂಗ್ ರಸ್ತೆ, ರಾಜಾರಾಮಣ್ಣ ಸರ್ಕಲ್ ಬಳಿ ಸರ್ವೀಸ್ ರಸ್ತೆಯಲ್ಲಿ ಮಹೀಂದ್ರ ಥಾರ್ ಜೀಪ್ (ಕೆಎಲ್–77, ಬಿ–2772) ವೇಗವಾಗಿ ಬಂದು ಎಲೆಕ್ಟ್ರಿಕ್ ಸ್ಕೂಟರ್ ಹಾಗೂ ಮಾರುತಿ ಆಲ್ಟೋ ಕಾರ್‌ಗೆ ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ಸ್ಕೂಟರ್‌ನಲ್ಲಿ ತೆರಳುತ್ತಿದ್ದ ಮೈಸೂರು ತಾಲೂಕು ಕೆ.ಹೆಮ್ಮನಹಳ್ಳಿಯ ನಿವಾಸಿ ಪ್ರತಾಪ್ ಅವರ ಪತ್ನಿ ರೂಪಾ(38) ಮೃತಪಟ್ಟಿದ್ದು, ಆಲ್ಟೋ ಕಾರಿನಲ್ಲಿದ್ದ ಮಹದೇವಯ್ಯ ಗಾಯಗೊಂಡಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ನಗರ ಡಿಸಿಪಿ ಜಾಹ್ನವಿ, ಸಂಚಾರ ಎಸಿಪಿ ಪರಶುರಾಮಪ್ಪ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೃತರ ಪತಿ ಪ್ರತಾಪ್ ನೀಡಿದ ದೂರಿನ ಮೇರೆಗೆ ಜೀಪ್ ಚಾಲಕ ಹರ್ಷದ್ ವಿರುದ್ಧ ಕೆ.ಆರ್.ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರನ್ನು ವಾಣಿಜ್ಯ ನಗರಿ ಮಾಡಲು ಉದ್ಯಮಿಗಳು ಶ್ರಮಿಸಬೇಕು

ವೀರಶೈವ–ಲಿಂಗಾಯತ ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್–2025ರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್‌ಗೌಡ ಕರೆ



ಶಾಸಕ ಹರೀಶ್‌ಗೌಡ ಮಾತನಾಡಿದರು.

ಮೈಸೂರು,ಜ.19(ಎಸ್‌ಪಿಎನ್)–ಸಾಂಸ್ಕೃತಿಕ ನಗರಿ, ಪರಂಪರೆಗಳ ನಗರಿ ಮೈಸೂರು ಎಂಬ ಹೆಸರು ವಿಶ್ವಮಟ್ಟದಲ್ಲಿ ರಾರಾಜಿಸುತ್ತಿದೆ. ಇದರ ಜೊತೆಗೆ 'ವಾಣಿಜ್ಯ ನಗರಿ ಮೈಸೂರು' ಎಂಬ ವಿಶೇಷಣ ಸೇರ್ಪಡೆಯಾಗಲು ಎಲ್ಲಾ ಸಮುದಾಯದ ಉದ್ಯಮಿಗಳು ಶ್ರಮಿಸಬೇಕು ಎಂದು ಶಾಸಕ ಕೆ.ಹರೀಶ್‌ಗೌಡ ಕರೆ ನೀಡಿದರು.

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಅಂತರರಾಷ್ಟ್ರೀಯ ಲಿಂಗಾಯತ ಯೂತ್ ಫೋರಂ (ಐಎಲ್‌ವೈಎಫ್)ಮೈಸೂರು ಘಟಕದ ವತಿಯಿಂದ ಏರ್ಪಡಿಸಿದ್ದ 2ನೇ ದಿನದ ವೀರಶೈವ–ಲಿಂಗಾಯತ ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್–2025ರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ವೀರಶೈವ–ಲಿಂಗಾಯತ ಸಮುದಾಯದ ಉದ್ಯಮಿಗಳು, ವರ್ತಕರು ಒಂದೆಡೆ ಸೇರಿ ಮೈಸೂರಿನಲ್ಲಿ ಗ್ಲೋಬಲ್ ಬಿಸಿನೆಸ್ ಸಮಾವೇಶ ಮಾಡುತ್ತಿರುವುದು ಉತ್ತಮ ಬೆಳವಣಿಗೆ. ಈ ಸಮಾವೇಶದಂತೆ ಒಕ್ಕಲಿಗರು ಫಸ್ಟ್ ಸರ್ಕಲ್ ಹೆಸರಿನಲ್ಲಿ ಬಿಸಿನೆಸ್ ಸಮಾವೇಶ ಮಾಡುತ್ತಿದ್ದಾರೆ. ಜಾತಿವಾರು ಉದ್ಯಮಿಗಳ ಸಮಾವೇಶ ಮಾಡುವುದರ ಜೊತೆಗೆ ಇತರೆ ಸಮುದಾಯಗಳ ಉದ್ಯಮಿಗಳನ್ನು ಒಂದೆಡೆ ಸೇರಿಸಿಕೊಂಡು ಬೃಹತ್ ವಾಣಿಜ್ಯ ಸಮಾವೇಶ ಮಾಡುವಂತೆ ಆಯೋಜಕರಿಗೆ ಸಲಹೆ ನೀಡಿದರು.

ಎಲ್ಲಾ ಸಮುದಾಯದ ಉದ್ಯಮಿಗಳು, ವರ್ತಕರು, ಕೈಗಾರಿಕೋದ್ಯಮಿಗಳು ಒಂದೆಡೆ ಸೇರಿ ಮೈಸೂರಿನಲ್ಲಿ ವಾಣಿಜ್ಯ ಸಮ್ಮೇಳನ ಮಾಡುವುದರಿಂದ ವಿಶ್ವಮಟ್ಟದಲ್ಲಿ ಮೈಸೂರಿಗೆ ವಾಣಿಜ್ಯ ನಗರಿ ಎಂಬ ವಿಶೇಷಣ ಸೇರಿಕೊಳ್ಳುತ್ತದೆ. ಅಲ್ಲದೆ, ಇಲ್ಲಿನ ಪ್ರತಿಭಾವಂತ ಯುವಕರಿಗೂ ಹೆಚ್ಚಿನ ಉದ್ಯೋಗಗಳು ಸೃಷ್ಟಿಯಾಗುತ್ತವೆ ಎಂದರು.

ಹಾಗಾಗಿ ಐಎಲ್‌ವೈಎಫ್ ಸಂಘಟನೆಯಲ್ಲಿ ಮುಂಚೂಣಿಯಲ್ಲಿರುವ ಬಿ.ಎಸ್. ಪ್ರಶಾಂತ್, ಮಹದೇವಪ್ರಸಾದ್ ಅವರು, ಮುಂದಿನ ದಿನಗಳಲ್ಲಿ ವೀರಶೈವ–ಲಿಂಗಾಯತ ಹಾಗೂ ಒಕ್ಕಲಿಗರು ಸೇರಿದಂತೆ ಇತರೆ ಎಲ್ಲಾ ಸಮುದಾಯದ ಉದ್ಯಮಿಗಳು ಒಂದೆಡೆ ಮೈಸೂರಿನ ಬೃಹತ್ ವಾಣಿಜ್ಯ ಸಮಾವೇಶ ಹಮ್ಮಿಕೊಳ್ಳಲು ಎಲ್ಲರೂ ಆಲೋಚನೆ ಮಾಡಬೇಕು ಎಂದು ಹರೀಶ್‌ಗೌಡರು ಸಲಹೆ ನೀಡಿದರು.

ಈ ವೇಳೆ ಭಾರತೀಯ ಖೋಖೋ ತಂಡಕ್ಕೆ ಆಯ್ಕೆಯಾಗಿರುವ ಚೈತ್ರ ಅವರ ಪೋಷಕರಾದ ಬಸವಣ್ಣ ಮತ್ತು ನಾಗರತ್ನ ಅವರಿಗೆ, ವರ್ಲ್ಡ್ ರೆಕಾರ್ಡ್ ಮಾಡಿರುವ ಅನ್ವಿತ್ ಎಸ್.ಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್, ಐಎಲ್‌ವೈಎಫ್ ಮೈಸೂರು ಘಟಕದ ಅಧ್ಯಕ್ಷ ಬಿ.ಎಸ್.ಪ್ರಶಾಂತ್, ಸದಸ್ಯರಾದ ಮಹದೇವ ಪ್ರಸಾದ್, ಆಯರಹಳ್ಳಿ ಪಿ.ವಿರೂಪಾಕ್ಷ, ಸುರೇಶ್ ವಾಲಿ, ಎನ್.ಜಿ.ಗಿರೀಶ್, ಗೆಜ್ಜಗಳ್ಳಿ ಮಹೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು. ವೇದಿಕೆ ಕಾರ್ಯಕ್ರಮದ ನಂತರ ಖ್ಯಾತ ಗಾಯಕರಾದ ರಾಜೇಶ್ ಕೃಷ್ಣನ್, ಅರ್ಚನಾ ಉಡುಪ ತಂಡದಿಂದ ಗಾಯನ ಕಾರ್ಯಕ್ರಮ ನೆರವೇರಿತು.

ದೇಶ - ವಿದೇಶ

ನೈಜೀರಿಯಾದಲ್ಲಿ ಗ್ಯಾಸೋಲಿನ್ ಟ್ಯಾಂಕರ್ ಸ್ಫೋಟ, 70 ಮಂದಿ ಸಾವು



ನೈಜೀರಿಯಾ: ನೈಜೀರಿಯಾದಲ್ಲಿ ಗ್ಯಾಸೋಲಿನ್ ಟ್ಯಾಂಕರ್ ಏಕಾಏಕಿ ಸ್ಫೋಟಗೊಂಡು 70 ಮಂದಿ ಸಾವನ್ನಪ್ಪಿದ್ದಾರೆ. 56ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಎಲ್ಲಾ ಗಾಯಾಳುಗಳನ್ನು ಹತ್ತಿರದ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸ್ಫೋಟದ ನಂತರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭೀತಿ ಉಂಟಾಗಿದೆ. ರಾಷ್ಟ್ರೀಯ ತುರ್ತು ನಿರ್ವಹಣಾ ಏಜೆನ್ಸಿ ಮುಖ್ಯಸ್ಥ ಹುಸೇನಿ ಇಸಾ ಈ ಘಟನೆಯ ಬಗ್ಗೆ ಮಾಹಿತಿ ನೀಡಿದ್ದಾರೆ. ಒಂದು ಟ್ಯಾಂಕರ್‌ನಿಂದ ಇನ್ನೊಂದು ಟ್ಯಾಂಕರ್‌ಗೆ ಪೆಟ್ರೋಲ್ ವರ್ಗಾವಣೆಯಾಗುತ್ತಿತ್ತು. ಆಗ ಟ್ಯಾಂಕರ್‌ನಲ್ಲಿ ಸ್ಫೋಟ ಸಂಭವಿಸಿದೆ. ಅನಿಲವನ್ನು ವರ್ಗಾಯಿಸುತ್ತಿದ್ದವರು ಸಾವನ್ನಪ್ಪಿದ್ದಾರೆ. ನೈಜರ್‌ನ ಗವರ್ನರ್ ಮೊಹಮ್ಮದ್ ಬಾಗೊ ಹೇಳಿಕೆಯಲ್ಲಿ ರಾಜ್ಯದ ಡಿಕ್ಕೊ ಪ್ರದೇಶದ ಹಲವಾರು ನಿವಾಸಿಗಳು ಗ್ಯಾಸೋಲಿನ್ ಟ್ಯಾಂಕರ್‌ನಿಂದ ಭಾರಿ ಸ್ಫೋಟದಿಂದ ಗಾಯಗೊಂಡಿದ್ದಾರೆ, ಅನೇಕರು ಸುಟ್ಟು ಕರಕಲಾದರು. ಟ್ಯಾಂಕರ್‌ನಿಂದ ದೂರ ಇದ್ದವರು ಪಾರಾಗಿದ್ದಾರೆ ಎಂದರು. ಜನರು ಹತ್ತಿರ ಹೋಗದಂತೆ ತಡೆಯಲಾಗುತ್ತಿದೆ ಎಂದು ಹೇಳಿದರು. ಇದರ ಹೊರತಾಗಿಯೂ ಇಂಧನ ಖರೀದಿಸಲು ಜನಸಾಗರವೇ ನೆರೆದಿತ್ತು.

ಸೈಫ್ ಅಲಿಖಾನ್‌ಗೆ ಚಾಕು ಇರಿತ: ಆರೋಪಿಗೆ 5 ದಿನಗಳ ಪೊಲೀಸ್ ಕಸ್ಟಡಿ



ಮುಂಬೈ: ಬಾಲಿವುಡ್ ನಟ ಸೈಫ್ ಅಲಿಖಾನ್ ಅವರ ಮೇಲೆ ಚಾಕು ಇರಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಲಾಗಿರುವ ಆರೋಪಿಯನ್ನು 5 ದಿನ ಪೊಲೀಸ್ ಕಸ್ಟಡಿಗೆ ಒಪ್ಪಿಸಿ ಬಾಂದ್ರಾ ನ್ಯಾಯಾಲಯ ಭಾನುವಾರ ಆದೇಶಿಸಿದೆ. ಆರೋಪಿಯನ್ನು ಇಂದು ಮಧ್ಯಾಹ್ನ 1.30ಕ್ಕೆ ಬಾಂದ್ರಾದ ರಜಾಕಾಲದ ಪೀಠದ ಮುಂದೆ ಹಾಜರುಪಡಿಸಲಾಯಿತು. ನಟ ಸೈಫ್ ಅಲಿಖಾನ್ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಬಂಧಿತನಾಗಿರುವ ವ್ಯಕ್ತಿಯನ್ನು 30 ವರ್ಷದ ಮೊಹಮ್ಮದ್ ಶರೀಫುಲ್ ಇಸ್ಲಾಂ ಶೆಹಜಾದ್ ಎಂದು ಗುರುತಿಸಲಾಗಿದೆ. ಈತ ಬಾಂಗ್ಲಾದೇಶದ ಪ್ರಜೆಯಾಗಿದ್ದು, ಅಕ್ರಮವಾಗಿ ದೇಶದೊಳಗೆ ನುಸುಳಿದ್ದ. ಭಾರತಕ್ಕೆ ಬಂದ ಬಳಿಕ ಬಿಜೋಯ್ ದಾಸ್ ಎಂದು ಹೆಸರು ಬದಲಿಸಿಕೊಂಡಿದ್ದ ಎಂದು ಪೊಲೀಸರು ಖಚಿತಪಡಿಸಿದ್ದಾರೆ.

ಆರೋಪಿಯು ತನ್ನ ಸ್ವಗ್ರಾಮಕ್ಕೆ ಪರಾರಿಯಾಗಲು ಹೊರಟಿದ್ದಾಗ ಥಾಣೆಯ ಹಿರಾನಂದನಿ ಎಸ್ಟೇಟ್‌ನಲ್ಲಿ ಬಂಧಿಸಲಾಯಿತು. ಆರೋಪಿ ಬಾಂಗ್ಲಾದೇಶದ ಜಲೋಕಾಟಿ ಜಿಲ್ಲೆಯವನು ಎಂದು ತಿಳಿದುಬಂದಿದೆ. ಸೈಫ್ ಅಲಿಖಾನ್ ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ.

ಅಮೆರಿಕದಲ್ಲಿ ಟಿಕ್‌ಟಾಕ್ ಸ್ಥಗಿತ



ವಾಷಿಂಗ್ಟನ್: ಚೀನಾ ಮೂಲದ ಮೊಬೈಲ್ ಅಪ್ಲಿಕೇಷನ್ ಟಿಕ್‌ಟಾಕ್ ಅಮೆರಿಕದಲ್ಲಿ ಕಾರ್ಯ ನಿಲ್ಲಿಸಿದೆ. ಈ ಮೂಲಕ ಭಾರತದ ನಂತರ ಅಮೆರಿಕದಲ್ಲೂ ಟಿಕ್‌ಟಾಕ್ ಆ್ಯಪ್ ನಿಷೇಧಿಸಲಾಗಿದೆ. ಭಾನುವಾರ ಆಪಲ್ ಮತ್ತು ಗೂಗಲ್ ಪ್ಲೇ ಸ್ಟೋರ್‌ನಿಂದ ಆ್ಯಪ್ ಕಾಣೆಯಾಗಿದೆ. ಅಮೆರಿಕದಲ್ಲಿ ಸುಮಾರು 170 ಮಿಲಿಯನ್ ಜನರು ಟಿಕ್‌ಟಾಕ್ ಆ್ಯಪ್ ಬಳಕೆ ಮಾಡುತ್ತಿದ್ದರು. ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಅಧಿಕಾರ ವಹಿಸಿಕೊಳ್ಳಲಿದ್ದು, ನಿಷೇಧಗೊಂಡ ಟಿಕ್‌ಟಾಕ್ ಆ್ಯಪ್ 90 ದಿನಗಳವರೆಗೆ ಬಳಕೆಗೆ ಸಿಗುವಂತೆ ಮಾಡುವ ಸಾಧ್ಯತೆಯಿದೆ ಎಂದು ವರದಿಯಾಗಿದೆ. ರಾಷ್ಟ್ರೀಯ ಭದ್ರತೆಗೆ ಟಿಕ್‌ಟಾಕ್ ಆ್ಯಪ್ ಧಕ್ಕೆಯುಂಟು ಮಾಡುತ್ತಿದೆ ಎಂದು ಭದ್ರತಾ ಏಜೆನ್ಸಿಗಳು ಹೇಳಿವೆ. ಹೀಗಾಗಿ ಆ್ಯಪ್ ಬಳಕೆಗೆ ನಿಷೇಧ ಹೇರಲಾಗಿದೆ. ಶನಿವಾರ ರಾತ್ರಿ ಹೊತ್ತಿಗೆ ಟಿಕ್‌ಟಾಕ್ ಆ್ಯಪ್ ತೆರೆದಾಗ 'ದುರದೃಷ್ಟವಶಾತ್ ಅಮೆರಿಕದಲ್ಲಿ ಟಿಕ್‌ಟಾಕ್ ಅನ್ನು ನಿಷೇಧಿಸುವ ಕಾನೂನನ್ನು ಜಾರಿಗೊಳಿಸಲಾಗಿದೆ, ಇದರರ್ಥ ನೀವು ಸದ್ಯಕ್ಕೆ ಟಿಕ್‌ಟಾಕ್ ಅನ್ನು ಬಳಸಲಾಗುವುದಿಲ್ಲ. ಟಿಕ್ ಟಾಕ್ ಅನ್ನು ಮರುಸ್ಥಾಪಿಸಲು ನಮ್ಮೊಂದಿಗೆ ಕೆಲಸ ಮಾಡುವುದಾಗಿ ಅಧ್ಯಕ್ಷ ಟ್ರಂಪ್ ಸೂಚಿಸಿದ್ದಾರೆ. ಅವರು ಅಧಿಕಾರ ವಹಿಸಿಕೊಂಡ ನಂತರ ದಯವಿಟ್ಟು ಟ್ಯೂನ್ ಮಾಡಿ' ಎನ್ನುವ ಸಂದೇಶ ಬಳಕೆದಾರರಿಗೆ ಕಾಣಿಸಿದೆ.

ಕಾರಿಗೆ ಬೆಂಕಿ: ಲಗ್ನಪತ್ರಿಕೆ ಹಂಚಲು ಹೋಗಿ ಮಸಣ ಸೇರಿದ ಮದುಮಗ



ನವದೆಹಲಿ: ತನ್ನ ಮದುವೆ ಲಗ್ನಪತ್ರಿಕೆ ಹಂಚಲು ಹೋಗುತ್ತಿದ್ದ ಮದುಮಗನ ಕಾರು ಬೆಂಕಿಗಾಹುತಿಯಾಗಿ ಆತ ಸುಟ್ಟು ಕರಕಲಾದ ದಾರುಣ ಘಟನೆ ದೆಹಲಿಯಲ್ಲಿ ನಡೆದಿದೆ. ದೆಹಲಿಯ ಗಾಜಿಪುರ ಪ್ರದೇಶದ ಬಾಬಾ ಬ್ಯಾಂಕ್ವೆಟ್ ಹಾಲ್ ಬಳಿ ಈ ಘಟನೆ ನಡೆದಿದ್ದು, ಲಗ್ನಪತ್ರಿಕೆ ಹಂಚಲು ತೆರಳಿದ್ದ ಮದುಮಗ ಇದ್ದ ವ್ಯಾಗನ್ ಆರ್ ಕಾರಿಗೆ ಬೆಂಕಿ ತಗುಲಿ ಮದುಮಗ ಸ್ಥಳದಲ್ಲೇ ಸುಟ್ಟು ಕರಕಲಾಗಿದ್ದಾನೆ. ಮೃತ ಮದುಮಗನನ್ನು ಗ್ರೇಟರ್ ನೋಯ್ಡಾದ ನಾವಡಾ ನಿವಾಸಿ ಅನಿಲ್ ಎಂದು ಗುರುತಿಸಲಾಗಿದ್ದು, ಅನಿಲ್‌ರ ಮದುವೆ ಫೆ.14ರಂದು ನಿಶ್ಚಯವಾಗಿತ್ತು. ಹೀಗಾಗಿ ತನ್ನ ಮದುವೆಯ ಕಾರ್ಡ್‌ಗಳನ್ನು ವಿತರಿಸಲು ಹೊರಟಿದ್ದರು ಎನ್ನಲಾಗಿದೆ. ಕುಟುಂಬಸ್ಥರು ತಿಳಿಸಿರುವಂತೆ ಮಧ್ಯಾಹ್ನ ತನ್ನ ಮದುವೆಯ ಆಮಂತ್ರಣ ಪತ್ರಿಕೆಗಳನ್ನು ವಿತರಿಸಲು ಅನಿಲ್ ಹೋಗಿದ್ದರು. ಆದರೆ ತಡರಾತ್ರಿಯವರೆಗೆ ಮನೆಗೆ ಹಿಂತಿರುಗದಿದ್ದಾಗ ಮನೆಯವರು ಅನಿಲ್ ಮೊಬೈಲ್‌ಗೆ ಕರೆ ಮಾಡಿದ್ದಾರೆ. ಆದರೆ ಮೊಬೈಲ್ ಸ್ವಿಚ್ಡ್ ಆಫ್ ಬಂದಿದೆ. ಬಳಿಕ ರಾತ್ರಿ 11.30ರ ವೇಳೆಗೆ ದೆಹಲಿ ಪೊಲೀಸರು ಕರೆ ಮಾಡಿ ಅಪಘಾತ ಸಂಭವಿಸಿದೆ ಎಂದು ಮಾಹಿತಿ ನೀಡಿದ್ದಾರೆ.

ಚೆಕ್ ಬೌನ್ಸ್: ಬಾಂಗ್ಲಾ ಕ್ರಿಕೆಟಿಗ ಶಕೀಬ್ ವಿರುದ್ಧ ಬಂಧನ ವಾರಂಟ್ ಜಾರಿ



ಢಾಕಾ: 26 ಲಕ್ಷ ಮೊತ್ತದ ಚೆಕ್ ಬೌನ್ಸ್ ಪ್ರಕರಣದಲ್ಲಿ ಬಾಂಗ್ಲಾ ನ್ಯಾಯಾಲಯವು ಕ್ರಿಕೆಟ್ ಆಟಗಾರ ಶಕೀಬ್ ಅಲ್ ಹಸನ್ ವಿರುದ್ಧ ಬಂಧನ ವಾರಂಟ್ ಜಾರಿಗೊಳಿಸಿದೆ. ಬಾಂಗ್ಲಾದೇಶದ ಐಎಫ್‌ಐಸಿ ಬ್ಯಾಂಕ್ ಅಧಿಕಾರಿಗಳು ಶಕೀಬ್ ಅಲ್ ಹಸನ್ ವಿರುದ್ಧ ಪ್ರಕರಣ ದಾಖಲಿಸಿದ್ದರು. ಪ್ರಕರಣ ಸಂಬಂಧ ವಿಚಾರಣೆಗೆ ಹಾಜರಾಗುವಂತೆ ನ್ಯಾಯಾಲಯವು ಶಕೀಬ್ ಅವರಿಗೆ ಹಲವು ಬಾರಿ ಸಮನ್ಸ್ ನೀಡಿತ್ತು. ಆದರೆ, ಅವರು ವಿಚಾರಣೆಗೆ ಗೈರಾಗಿದ್ದರು ಎಂದು ತಿಳಿದುಬಂದಿದೆ.

ಶಕೀಬ್ ಅವರು ಬಾಂಗ್ಲಾದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರ ಪಕ್ಷವಾದ ಅವಾಮಿ ಲೀಗ್‌ನೊಂದಿಗೆ ಗುರುತಿಸಿಕೊಂಡಿದ್ದಾರೆ. ಇತ್ತೀಚೆಗೆ ಶಕೀಬ್ ಅಲ್ ಹಸನ್ ಅವರು ತಮ್ಮ ಬೌಲಿಂಗ್ ಶೈಲಿಯ ಎರಡನೇ ಪರೀಕ್ಷೆಯಲ್ಲೂ ವಿಫಲವಾಗಿದ್ದರು. ಇದರಿಂದಾಗಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಗೆ ತಂಡವನ್ನು ಸೇರುವ ಕನಸು ಭಗ್ನಗೊಂಡಿದೆ.

ಇಂಗ್ಲೆಂಡ್‌ನ ಲೌಬರೊ ವಿಶ್ವವಿದ್ಯಾಲಯದಲ್ಲಿ ಶಕೀಬ್ ಈ ಹಿಂದೆ ಬೌಲಿಂಗ್ ಶೈಲಿಯ ಪರೀಕ್ಷೆಗೆ ಒಳಗಾಗಿ ವಿಫಲರಾಗಿದ್ದರು. ಹೀಗಾಗಿ, ದೇಶೀಯ ಮತ್ತು ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ಅಮಾನತುಗೊಂಡಿದ್ದಾರೆ. ಕಳೆದ ತಿಂಗಳು ಚೆನ್ನೈನ ಶ್ರೀರಾಮಚಂದ್ರ ಸೆಂಟರ್ ಫಾರ್ ಸ್ಪೋರ್ಟ್ಸ್ ಸೈನ್ಸ್‌ನಲ್ಲಿ ಅವರು ಮರುಪರೀಕ್ಷೆ ಒಳಗಾಗಿ ಅಲ್ಲೂ ವಿಫಲರಾಗಿದ್ದರು.

ಕೊಡಗು ದಂತ ವೈದ್ಯಕೀಯ ವಿದ್ಯಾಲಯದಿಂದ ಗುಣಮಟ್ಟದ ಶಿಕ್ಷಣ



ವಿರಾಜಪೇಟೆ ಸಮೀಪದ ಕೊಡಗು ದಂತ ವೈದ್ಯಕೀಯ ಮಹಾವಿದ್ಯಾಲಯದ ಬೆಳ್ಳಿಹಬ್ಬ ಸಮಾರಂಭದಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಅವರನ್ನು ಸನ್ಮಾನಿಸಲಾಯಿತು.

ವಿರಾಜಪೇಟೆ, ಜ.19–ಇಲ್ಲಿನ ಕೊಡಗು ದಂತ ವೈದ್ಯಕೀಯ ಮಹಾವಿದ್ಯಾಲಯ ಇಪ್ಪತ್ತೈದು ವರ್ಷ ಪೂರೈಸುವುದರೊಂದಿಗೆ ಗುಣಮಟ್ಟದ ಶಿಕ್ಷಣ ನೀಡಿ, ಯುವ ವೈದ್ಯರನ್ನು ದಂತ ವೈದ್ಯಕೀಯ ಕ್ಷೇತ್ರಕ್ಕೆ ನೀಡುತ್ತಿದೆ ಎಂದು ಶಾಸಕ ಎ.ಎಸ್. ಪೊನ್ನಣ್ಣ ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣ ಸಮೀಪದ ಕೊಡಗು ದಂತ ವೈದ್ಯಕೀಯ ಮಹಾವಿದ್ಯಾಲಯದ ಬೆಳ್ಳಿಹಬ್ಬ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, 25 ವರ್ಷಗಳ ಹಿಂದೆ ಆರಂಭವಾದ ಈ ದಂತ ವೈದ್ಯಕೀಯ ಕಾಲೇಜು ಉತ್ತಮ ಸೌಕರ್ಯಗಳೊಂದಿಗೆ ಮುನ್ನಡೆಯುತ್ತಿದೆ. ಇದು ವಿರಾಜಪೇಟೆ ಕ್ಷೇತ್ರಕ್ಕೆ ಹೆಮ್ಮೆಯ ವಿಚಾರ. ಒಂದು ಸಂಸ್ಥೆಯನ್ನು ಹುಟ್ಟುಹಾಕಿ ಅದನ್ನು ಮುನ್ನಡೆಸುವುದು ಸುಲಭವಲ್ಲ. ಅದರಲ್ಲೂ ದಂತ ವೈದ್ಯಕೀಯ ಮಹಾವಿದ್ಯಾಲಯ ಡೀನ್ ಡಾ.ಸುನೀಲ್ ಮುದ್ದಯ್ಯ ಅವರೊಂದಿಗೆ ಬೋಧಕ ವರ್ಗ ಹಾಗೂ ಸಿಬ್ಬಂದಿ ಶ್ರಮಿಸುತ್ತಿದ್ದಾರೆ ಎಂದರು.


ಕಾಲೇಜಿನ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಮತ್ತು ಸಂಶೋಧನೆಗಳಿಗೆ ಹೆಚ್ಚು ಒತ್ತು ನೀಡುವ ಜೊತೆಗೆ ಜ್ಞಾನಾರ್ಜನೆಗೆ ಪೂರಕ ವಾತಾವರಣ ಕಲ್ಪಿಸಲಾಗಿದೆ. ಜನಸಾಮಾನ್ಯರಿಗೆ ತಪಾಸಣೆ ಹಾಗೂ ಉತ್ತಮ ಚಿಕಿತ್ಸೆ ನೀಡುತ್ತಿರುವುದು ಮೆಚ್ಚುಗೆ. ಸರ್ಕಾರ ಹಿಂದುಳಿದ ಜನಾಂಗದವರಿಗೆ ದಂತಭಾಗ್ಯ ಯೋಜನೆ ಜಾರಿಗೊಳಿಸಿದ್ದು, ಈ ಯೋಜನೆಯಡಿ ಚಿಕಿತ್ಸೆ ಪಡೆಯುವವರಿಗೆ ಸರ್ಕಾರವೇ ವೆಚ್ಚ ಭರಿಸಲಿದೆ ಎಂದು ಹೇಳಿದರು.

ದಂತ ವೈದ್ಯಕೀಯ ಮಹಾವಿದ್ಯಾಲಯ ಡೀನ್ ಡಾ.ಸುನೀಲ್ ಮುದ್ದಯ್ಯ ಮಾತನಾಡಿ, ಹೊಸ ಕಲಿಕೆ ಸಂಶೋಧನೆಗೆ ಒತ್ತು ನೀಡುತ್ತ ಕಾರ್ಯನಿರ್ವಹಿಸಲಾಗುತ್ತಿದೆ. 38 ಸಂಸ್ಥೆಗಳ ಸಹಯೋಗದೊಂದಿಗೆ ಸವಾಲುಗಳನ್ನು ಎದುರಿಸಿ, ಅತ್ಯಾಧುನಿಕ ಕಲಿಕೆ ವಿಧಾನವನ್ನು ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ ಎಂದರು.

ಇದೇ ವೇಳೆ ಮಹಾವಿದ್ಯಾಲಯ ವತಿಯಿಂದ ಶಾಸಕ ಎ.ಎಸ್.ಪೊನ್ನಣ್ಣ ಅವರನ್ನು ಸನ್ಮಾನಿಸಲಾಯಿತು. ಸ್ವೀಡನ್ ಉಪ್ಪಾಲಾ ವಿಶ್ವವಿದ್ಯಾನಿಲಯದ ಮುಖ ಸೌಂದರ್ಯ ವಿಭಾಗದ ಮುಖ್ಯಸ್ಥ ಡಾ.ಅಂಡ್ರೈಸ್ ತೊರ, ಪ್ರೊ.ಅನುಮೋಲ್ ಕಾಲ, ಮಹಾವಿದ್ಯಾಲಯ ಪ್ರಾಂಶುಪಾಲ ಡಾ.ಕೆ.ಸಿ.ಪೊನ್ನಪ್ಪ, ಉಪಪ್ರಾಂಶುಪಾಲ ಡಾ.ಜಿತೇಶ್ ಜೈನ್, ಡಾ.ಶಶೀಧರ್, ಕಾರ್ಯಪ್ಪ ಉಪಸ್ಥಿತರಿದ್ದರು.

ವಿರಾಜಪೇಟೆ ರಸ್ತೆಗಳನ್ನು ಸರಿಪಡಿಸದಿದ್ದರೆ ಪ್ರತಿಭಟನೆ: ನಾಗರಿಕ ಸಮಿತಿ ಎಚ್ಚರಿಕೆ

ವಿರಾಜಪೇಟೆ, ಜ.19–ಪುರಸಭೆ ವ್ಯಾಪ್ತಿಯ ಮುಖ್ಯರಸ್ತೆ ಸೇರಿದಂತೆ ಅನೇಕ ರಸ್ತೆಗಳು ಗುಂಡಿಗಳಾಗಿದ್ದು, ವಾಹನ ಸವಾರರು ಮತ್ತು ಸಾರ್ವಜನಿಕರಿಗೆ ಸಮಸ್ಯೆ ಉಂಟಾಗಿದೆ. ಆದರೂ ಪುರಸಭೆ ಮಾತ್ರ ಏನೂ ಗೊತ್ತಿಲ್ಲದಂತೆ ಮೌನವಹಿಸಿದೆ. 15 ದಿನದೊಳಗೆ ರಸ್ತೆಗಳಿಗೆ ಡಾಂಬರೀಕರಣ ಮಾಡದಿದ್ದರೆ ನಾಗರಿಕ ಸಮಿತಿ ವತಿಯಿಂದ ಪುರಸಭೆ ಕಚೇರಿ ಎದುರು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಸಮಿತಿ ಮುಖಂಡ ಡಾ.ದುರ್ಗಾಪ್ರಸಾದ್ ಎಚ್ಚರಿಸಿದರು.



ಸುದ್ದಿಗೋಷ್ಠಿಯಲ್ಲಿ ನಾಗರಿಕ ಸಮಿತಿ ಮುಖಂಡ ಡಾ.ದುರ್ಗಾಪ್ರಸಾದ್ ಮಾತನಾಡಿದರು.



ವಿರಾಜಪೇಟೆ ಪುರಸಭೆ ವ್ಯಾಪ್ತಿಯ ರಸ್ತೆಗಳು ಗುಂಡಿ ಬಿದ್ದಿರುವುದು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಟ್ಟಣದ ಮುಖ್ಯ ರಸ್ತೆಬದಿ ಚರಂಡಿಗಳೇ ಇಲ್ಲ. ಮಳೆ ನೀರು ರಸ್ತೆಯಲ್ಲೇ ಹರಿಯುವುದರಿಂದ ರಸ್ತೆಗಳು ಸಂಪೂರ್ಣವಾಗಿ ಹದಗೆಟ್ಟಿವೆ ಇದರಿಂದ ವಾಹನ ಸವಾರರು ಸಂಚರಿಸಲು ಹರಸಾಹಸ ಪಡುವಂತಾಗಿದೆ ಎಂದು ದೂರಿದರು.

ಕಳೆದ ಒಂದೂವರೆ ತಿಂಗಳ ಹಿಂದೆ ಸ್ಥಳೀಯ ಶಾಸಕರು ಭೂಮಿಪೂಜೆ ನೆರವೇರಿಸಿದ್ದರೂ ಇದುವರೆಗೆ ರಸ್ತೆಗಳ ಕಾಮಗಾರಿ ಆರಂಭವಾಗಿಲ್ಲ. ಪಟ್ಟಣದ ದೊಡ್ಡಟಿ ಚೌಕಿಯಿಂದ ಅಂಚೆ ಕಚೇರಿವರೆಗೆ ರಸ್ತೆಬದಿ ಚರಂಡಿಗಳೇ ಇಲ್ಲ. ಪುರಸಭೆ ಅಧಿಕಾರಿಗಳು ಕಟ್ಟಡ ನಿರ್ಮಿಸಲು ಪರವಾನಗಿ ನೀಡುತ್ತಾರೆ. ಆದರೆ, ಕಟ್ಟಡ ಮಾಲೀಕರು ಪಾರ್ಕಿಂಗ್‌ಗೆ ಸ್ಥಳ ಬಿಡದಿರುವುದರಿಂದ ವಾಹನಗಳು ರಸ್ತೆಬದಿ ನಿಲ್ಲುವಂತಾಗಿದೆ. ಇದರಿಂದ ಪಾದಚಾರಿಗಳು ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಬೀದಿನಾಯಿಗಳ ಹಾವಳಿಯಿಂದ ಶಾಲಾ ಮಕ್ಕಳು, ಮಹಿಳೆಯರು ಓಡಾಡಲು ಭಯಭೀತರಾಗಿದ್ದಾರೆ. ಪುರಸಭೆ ವ್ಯಾಪ್ತಿ ಬಹಳಷ್ಟು ಸಮಸ್ಯೆಗಳಿದ್ದರೂ ಜನಪ್ರತಿನಿಧಿಗಳು ಮೌನ ವಹಿಸಿರುವುದು ಏಕೆ? ಎಂದು ಪ್ರಶ್ನಿಸಿದರು.

ನಾಗರಿಕ ಸಮಿತಿ ಪದಾಧಿಕಾರಿ ಪಿ.ಕೆ.ಅಬ್ದುಲ್ ರೆಹಮನ್ ಮಾತನಾಡಿ, ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬಹುತೇಕ ಕಡೆಗಳಲ್ಲಿ ಬೀದಿದೀಪಗಳ ನಿರ್ವಹಣೆ ಇಲ್ಲ. ಕುಡಿಯುವ ನೀರಿನ ಪೈಪ್‌ಲೈನ್ ಅಳವಡಿಕೆ ಕಾಮಗಾರಿಗಾಗಿ ಕಾಂಕ್ರೀಟ್ ರಸ್ತೆಗಳನ್ನು ಅಗೆದು ಹಾಕಲಾಗಿದೆ. ಅದನ್ನು ಸರಿಯಾಗಿ ಮುಚ್ಚದಿರುವುದರಿಂದ ವಾಹನಗಳು ಸಂಚರಿಸಲು ಸಾಧ್ಯವಾಗುತ್ತಿಲ್ಲ. ಕಸ ವಿಲೇವಾರಿಗೆ ವಾಹನಗಳ ಸೌಲಭ್ಯಗಳಿದ್ದರೂ ರಸ್ತೆಬದಿ ನಿತ್ಯ ಕಸದ ರಾಶಿ ಹೆಚ್ಚಾಗುತ್ತಿದೆ. ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸದಿದ್ದರೆ ವಿವಿಧ ಸಂಘ–ಸಂಸ್ಥೆಗಳು ಮತ್ತು ಸಾರ್ವಜನಿಕರೊಂದಿಗೆ ಪ್ರತಿಭಟನೆ ನಡೆಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಸಮಿತಿ ಎನ್.ಕೆ.ಶರೀಫ್ ಉಪಸ್ಥಿತರಿದ್ದರು.

ಹುಲಿ ದಾಳಿಗೆ ಎರಡು ತೆನೆ ಹಸು ಸಾವು



ಸುಳುಗೋಡು ಗ್ರಾಮದಲ್ಲಿ ಹುಲಿ ದಾಳಿಗೆ ಹಸು ಸಾವಿಗೀಡಾಗಿರುವುದು.

ಗೋಣಿಕೊಪ್ಪ: ಪೊನ್ನಂಪೇಟೆ ತಾಲೂಕಿನ ದೇವನೂರು–ಸುಳುಗೋಡು ಗ್ರಾಮದಲ್ಲಿ ಎರಡು ಗಬ್ಬದ ಹಸುಗಳ ಮೇಲೆ ಹುಲಿ ದಾಳಿ ನಡೆಸಿ ಕೊಂದು ಹಾಕಿದ ಘಟನೆ ಶನಿವಾರ ರಾತ್ರಿ ನಡೆದಿದೆ.

ಗ್ರಾಮದ ರೈತ ಮುದ್ದಿಯಡ ದಿನೇಶ್ ಅವರಿಗೆ ಸೇರಿದ ಎರಡು ಹಸುಗಳನ್ನು ಹುಲಿ ಕೊಂದು ಭಾಗಶ ತಿಂದು ಹಾಕಿದೆ. ಸ್ಥಳಕ್ಕೆ ವನ್ಯಜೀವಿ ಸಂರಕ್ಷಣಾ ಮಂಡಳಿ ಸದಸ್ಯ ಮೇರಿಯಂಡ ಸಂಕೇತ್ ಪೂವಯ್ಯ ಭೇಟಿ ನೀಡಿದರು. ಈ ಸಂದರ್ಭ ಶಾಸಕ ಎ.ಎಸ್.ಪೊನ್ನಣ್ಣ ಅವರಿಗೆ ಘಟನೆ ಕುರಿತು ಸಂಕೇತ್ ಪೂವಯ್ಯ ಮಾಹಿತಿ ನೀಡಿದರು.

ಕೂಡಲೇ ಹುಲಿ ಸೆರೆ ಹಿಡಿಯಲು ಕಾರ್ಯಾಚರಣೆ ಕೈಗೊಳ್ಳುವಂತೆ ಹಾಗೂ ಗಬ್ಬದ ಹಸು ಆಗಿರುವುದರಿಂದ ಕೂಡಲೇ ಪರಿಹಾರ ನೀಡಬೇಕೆಂದು ಶಾಸಕರು ನಿರ್ದೇಶನ ನೀಡಿದ್ದಾರೆ ಎಂದು ಸಂಕೇತ್ ಪೂವಯ್ಯ ತಿಳಿಸಿದರು.

ಅಲ್ಲದೆ, ಸಾಕಾನೆಗಳನ್ನು ಬಳಸಿ ಕಾಫಿ ಫಸಲಿಗೆ ನಷ್ಟವಾಗದಂತೆ ರಸ್ತೆಬದಿಯಲ್ಲಿ ಹುಲಿ ಸೆರೆಗೆ ಅರವಳಿಕೆ ನೀಡಿ ಕಾರ್ಯಾಚರಣೆ ಕೈಗೊಳ್ಳಲಾಗುವುದು. ಹುಲಿಯನ್ನು ಸಮೀಪದಲ್ಲಿ ಅರಣ್ಯ ಇರುವುದರಿಂದ ಅರಣ್ಯಕ್ಕೆ ಅಟ್ಟಲು ಕಾರ್ಯಾಚರಣೆ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಈ ಸಂದರ್ಭ ತಿತಿಮತಿ ಆರ್‌ಎಫ್‌ಓ ದೇವರಾಜ್ ಹಾಗೂ ಸಿಬ್ಬಂದಿ ಹಾಜರಿದ್ದರು.

ನಾಗರಹಾವುಗಳ ರಕ್ಷಣೆ...



ಮಡಿಕೇರಿಯ ಚೆಟ್ಟಿಮಾನಿ ಗ್ರಾಮದ ಮಂಗೇರಿರ ಗಣೇಶ್ ಅವರ ಮನೆ ಪಕ್ಕದ ಜಾಗದಲ್ಲಿ ಭಾರಿ ಗಾತ್ರದ ಎರಡು ನಾಗರ ಹಾವುಗಳನ್ನು ಉರಗರಕ್ಷಕ ಪಿಯುಷ್ ಪೆರೇರಾ ಅವರು ಸೆರೆ ಹಿಡಿದು ಸುರಕ್ಷಿತವಾಗಿ ಅರಣ್ಯಕ್ಕೆ ಬಿಟ್ಟರು.

ವಸ್ತ್ರಸಂಹಿತೆ ವಿವಾದ: ಶಾಸಕರ ಮಧ್ಯಸ್ಥಿಕೆಯಲ್ಲಿ ಪರಿಹಾರ

ಮಡಿಕೇರಿ, ಜ.19–ಕಟ್ಟೆಮಾಡು ಶ್ರೀ ಮಹಾಮೃತ್ಯುಂಜಯ ದೇವಾಲಯ ವಾರ್ಷಿಕೋತ್ಸವದಲ್ಲಿ ಉಂಟಾದ ವಸ್ತ್ರಸಂಹಿತೆ ವಿವಾದವನ್ನು ಶಾಸಕರ ಮಧ್ಯಸ್ಥಿಕೆಯಲ್ಲಿ ಸದ್ಯದಲ್ಲೇ ಸೌಹಾರ್ದಯುತವಾಗಿ ಪರಿಹರಿಸಲಾಗುವುದು ಎಂದು ಕಾಂಗ್ರೆಸ್ ಕೊಡಗು ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾಧಿಕಾರಿಗಳು ಫೆ.10ರವರೆಗೆ ಗೊಂದಲ ನಿವಾರಣೆಗೆ ಕಾಲಾವಕಾಶ ನೀಡಿದ್ದಾರೆ. ಇದಕ್ಕೂ ಮೊದಲು ಅಥವಾ ನಂತರ ಎಲ್ಲಾ ಸಮುದಾಯಗಳ ನಾಯಕರನ್ನು ಒಗ್ಗೂಡಿಸಿ ಶಾಂತಿಯುತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಶಾಸಕರು ಮುಂದಾಗಲಿದ್ದಾರೆ. ಈಗಾಗಲೇ ವಿವಿಧ ಸಂಘಟನೆಗಳು ಶಾಸಕರನ್ನು ಭೇಟಿಯಾಗಿ ಭಿನ್ನಾಭಿಪ್ರಾಯ ಶಮನಕ್ಕೆ ಮನವಿ ಮಾಡಿದ್ದಾರೆ ಎಂದರು.

ಇದೊಂದು ಸೂಕ್ಷ್ಮ ವಿಚಾರವಾಗಿರುವ ಕಾರಣ ಜಿಲ್ಲಾಡಳಿತದ ಮೂಲಕ ಕಾನೂನು ವ್ಯಾಪ್ತಿಯಲ್ಲಿ ಶಾಂತಿಯುತ ಪರಿಹಾರ ದೊರೆಯಬೇಕು ಎನ್ನುವ ನಿರೀಕ್ಷೆ ನಮ್ಮದಾಗಿತ್ತು. ಸದ್ಯದಲ್ಲೇ ಶಾಸಕರು ಈ ಕುರಿತು ಸೂಕ್ತ ನಿರ್ಧಾರ ಕೈಗೊಂಡು ಪರಿಹಾರ ದೊರೆಯುವಂತೆ ನೋಡಿಕೊಳ್ಳಲಿದ್ದಾರೆ. ಜಿಲ್ಲೆಯಲ್ಲಿ ಎಲ್ಲಾ ಸಮುದಾಯದವರು ಶಾಂತಿ ಮತ್ತು ಒಗ್ಗಟ್ಟಿನಿಂದ ಜೀವನ ಸಾಗಿಸಬೇಕು ಎನ್ನುವ ಇಚ್ಛೆ ನಮ್ಮದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ಸದಸ್ಯ ಟಿ.ಪಿ. ರಮೇಶ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಸ್.ಐ.ಮುನೀರ್ ಅಹಮ್ಮದ್, ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಎ.ಹಂಸ ಹಾಗೂ ಗ್ಯಾರಂಟಿ ಅನುಷ್ಠಾನ ಸಮಿತಿ ಮಡಿಕೇರಿ ತಾಲೂಕು ಅಧ್ಯಕ್ಷ ಮಂದ್ರೀರ ಮೋಹನ್ ದಾಸ್ ಉಪಸ್ಥಿತರಿದ್ದರು.



ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಕೊಡಗು ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ ಮಾತನಾಡಿದರು.

ಕೃಪಾ ದೇವರಾಜ್‌ಗೆ ರಾಜ್ಯ ಪ್ರಶಸ್ತಿ

ಮಡಿಕೇರಿ: ಬೆಳಗಾವಿ ಜಿಲ್ಲೆಯ ಅಜೂರ ಪ್ರತಿಷ್ಠಾನದ ವತಿಯಿಂದ ನೀಡುವ ರಾಜ್ಯ ಪ್ರಶಸ್ತಿಗೆ ಕೃಪಾ ದೇವರಾಜ್ ಅವರ ಮರ್ಮರ ಕಥಾ ಸಂಕಲನ ಆಯ್ಕೆಯಾಗಿದೆ.



ಕೃಪಾ ದೇವರಾಜ್

ರಾಜ್ಯದ 8 ಮಂದಿ ಪ್ರಶಸ್ತಿ ಪುರಸ್ಕೃತರ ಪಟ್ಟಿಯಲ್ಲಿ ಕೃಪಾ ದೇವರಾಜ್ ಕೂಡಾ ಒಬ್ಬರಾಗಿದ್ದು, ಜ.26ರಂದು ಬೆಳಗಾವಿ ಜಿಲ್ಲೆಯ ರಾಯಭಾಗ ತಾಲೂಕಿನ ಹಾರೂಗೇರಿಯಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಎಂ.ಕಾಂ ಪದವಿ ನಂತರ ಮಡಿಕೇರಿಯ ಖಾಸಗಿ ಕಂಪನಿಯ ಉದ್ಯೋಗಿ ಆಗಿರುವ ಕೃಪಾ ದೇವರಾಜ್ ಅವರು ಕಥಾ ಸಂಕಲನ, ಕವನ ಸಂಕಲನ, ಲೇಖನಗಳು ಇತ್ಯಾದಿ ಕನ್ನಡ ಸಾಹಿತ್ಯದಲ್ಲಿ ಗುರುತಿಸಿಕೊಂಡಿದ್ದಾರೆ. ಪತ್ರಿಕೆಗಳಲ್ಲಿ ಕಥೆ, ಕವನ, ಲೇಖನ, ಲಲಿತ ಪ್ರಬಂಧ ಚುಟುಕುಗಳು ಪ್ರಕಟವಾಗಿರುವ ಜೊತೆಗೆ ಭಾವದ ಕದ ತಟ್ಟಿ (ಕವನ ಸಂಕಲನ), ಮರ್ಮರ (ಕಥಾ ಸಂಕಲನ), ಚೌಚೌ ಬಾತ್ (ಲಲಿತ ಪ್ರಬಂಧ), ಕಾರ್ಪಣ್ಯದ ಹೂವು (ಕವನ ಸಂಕಲನ) ಎಂಬ ಕೃತಿಗಳನ್ನು ಪ್ರಕಟಿಸಿದ್ದಾರೆ. ಕೃಪಾ ದೇವರಾಜ್ ಮಡಿಕೇರಿ ತಾಲೂಕು ಕಚೇರಿಯ ಶಿರಸ್ತೇದಾರ್ ಪಿ.ಎಲ್.ದೇವರಾಜ್ ಅವರ ಪತ್ನಿಯಾಗಿದ್ದಾರೆ.

ಅರಣ್ಯವಾಸಿಗಳಿಗೆ ಮೂಲಸೌಲಭ್ಯ ಒದಗಿಸಿ

- ಅಧಿಕಾರಿಗಳಿಗೆ ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಸೂಚನೆ
- ಬಂಡೀಪುರದಲ್ಲಿ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿ ಉದ್ಘಾಟನೆ



ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರ ಆಡಳಿತ ಕಚೇರಿ ಕಟ್ಟಡವನ್ನು ಈಶ್ವರ ಖಂಡ್ರೆ ಉದ್ಘಾಟಿಸಿದರು.

ಚಾಮರಾಜನಗರ, ಜ.19–ಅರಣ್ಯವಾಸಿ ಜನರಿಗೆ ನಿಯಮಾನುಸಾರ ಎಲ್ಲಾ ಅಗತ್ಯ ಮೂಲಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸಬೇಕೆಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಅಧಿಕಾರಿಗಳಿಗೆ ಸೂಚಿಸಿದರು.

ಬಂಡೀಪುರದ ಹುಲಿ ಸಂರಕ್ಷಿತ ಪ್ರದೇಶದ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನಿರ್ದೇಶಕರ ಆಡಳಿತ ಕಚೇರಿ ಸಭಾಂಗಣದಲ್ಲಿ ಭಾನುವಾರ ನಡೆದ ಬುಡಕಟ್ಟು ಜನಾಂಗದ ಮುಖಂಡರು ಹಾಗೂ ಅಧಿಕಾರಿಗಳ ಸಭೆ ಆರಂಭದಲ್ಲಿ ಬುಡಕಟ್ಟು, ಅರಣ್ಯವಾಸಿಗಳ ಮುಖಂಡರು, ಪ್ರತಿನಿಧಿಗಳು ಮಾತನಾಡಿ, ಅರಣ್ಯ ಪ್ರದೇಶದಲ್ಲಿ ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆಗೆ ಅವಕಾಶ ಮಾಡಿಕೊಡಬೇಕು. ಅರಣ್ಯ ಹಕ್ಕು ಕಾಯ್ದೆಯಡಿ ಸಮುದಾಯದ ಹಕ್ಕು ನೀಡಬೇಕು. ಬಿಳಿಗಿರಿರಂಗನಬೆಟ್ಟದ ಕಂದಾಯ ಭೂಮಿ ಸಂಬಂಧ ಆಗಿರುವ ಅನ್ಯಾಯ ಸರಿಪಡಿಸಬೇಕು. ಅರಣ್ಯವಾಸಿಗಳಿಗೆ ಮನೆ, ರಸ್ತೆ ನೀರಾವರಿ ಇನ್ನಿತರ ಮೂಲಸೌಕರ್ಯ ಒದಗಿಸಬೇಕು. ದಿನಗೂಲಿ ನೌಕರರಿಗೆ ನಿವೃತ್ತಿ ನಂತರ ಸೌಲಭ್ಯ ನೀಡಬೇಕು ಸೇರಿದಂತೆ ಹಲವು ಸಮಸ್ಯೆಗಳ ಬೇಡಿಕೆಗಳನ್ನು ಮುಂದಿಟ್ಟರು.

ನಂತರ ಅಹವಾಲು ಆಲಿಸಿ ಮಾತನಾಡಿದ ಅರಣ್ಯ ಸಚಿವರು, ಅರಣ್ಯ ಪ್ರದೇಶದ ಜನತೆಗೆ ಕುಡಿಯುವ ನೀರು, ರಸ್ತೆ, ವಿದ್ಯುತ್ ಇನ್ನಿತರ ಮೂಲಸೌಕರ್ಯಗಳನ್ನು ನಿಯಮಾನುಸಾರವಾಗಿ ಒದಗಿಸಬೇಕು. ಮುಖ್ಯಮಂತ್ರಿಗಳು ಬುಡಕಟ್ಟು ಸಮುದಾಯಕ್ಕೆ ನೀಡಬೇಕಿರುವ ಸೌಲಭ್ಯಗಳ ಬಗ್ಗೆ ಸಭೆ ನಡೆಸಿ ಸೂಚನೆ ನೀಡಿದ್ದಾರೆ. ಹೀಗಾಗಿ ಅವಶ್ಯವಿರುವ ಸೌಲಭ್ಯಗಳನ್ನು ಅಧಿಕಾರಿಗಳು ನೀಡುವ ನಿಟ್ಟಿನಲ್ಲಿ ಕ್ರಮ ವಹಿಸಬೇಕೆಂದರು.

ಆನೆ ದಾಳಿಯಂತಹ ಪ್ರಕರಣಗಳಲ್ಲಿ ಪರಿಹಾರ ನೀಡಲಾಗುತ್ತದೆ. ಗಾಯಗೊಂಡವರಿಗೆ ಆಸ್ಪತ್ರೆಗಳಲ್ಲಿ ತಗಲುವ ಚಿಕಿತ್ಸಾ ವೆಚ್ಚವನ್ನು ಭರಿಸಲಾಗುತ್ತಿದೆ. ಜೊತೆಗೆ ಖಾಸಗಿ ಆಸ್ಪತ್ರೆಗಳ ವೆಚ್ಚವನ್ನು ನೀಡಲಾಗುತ್ತಿದೆ. ಅಂಗವಿಕಲತೆ ಉಂಟಾದಲ್ಲಿ ಪರಿಹಾರ ಕೊಡಲಾಗುವುದು. ಕಾಡುಪ್ರಾಣಿಗಳ ದಾಳಿಗೊಳಗಾದವರಿಗೆ ಇಲಾಖೆ ನೆರವು ನೀಡುತ್ತಿದೆ ಎಂದು ತಿಳಿಸಿದರು.

ಬುಡಕಟ್ಟು ಸಮುದಾಯ, ಅರಣ್ಯ ವಾಸಿಗಳ ಬಗ್ಗೆ ಕಳಕಳಿ ಇದ್ದು, ಅಗತ್ಯ ಸೌಲಭ್ಯವನ್ನು ಸರ್ಕಾರ ನೀಡಲಿದೆ. ಈ ಭಾಗದ ಅರಣ್ಯ ಜನರ ಸಮಸ್ಯೆ, ಬೇಡಿಕೆಗಳ ಬಗ್ಗೆ ವಿಶೇಷವಾಗಿ ಗಮನ ಹರಿಸಿ ಪರಿಹರಿಸುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುವುದು. ಅರಣ್ಯ ಹಕ್ಕು, ಪುನರ್ವಸತಿಯಂತಹ ಪ್ರಮುಖ ವಿಷಯಗಳಿಗೆ ಆದ್ಯತೆ ನೀಡಲಾಗುವುದು ಎಂದರು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆಗಾಗಿ ಬುಡಕಟ್ಟು ಜನರಿಗೆ ಅವಕಾಶ ಮಾಡಿಕೊಡಬೇಕು. ಪರಿಹಾರ ವಿತರಣಾ ಕಾರ್ಯ ತ್ವರಿತವಾಗಿ ಆಗಬೇಕು. ಗಂಗಾ ಕಲ್ಯಾಣ ಸೇರಿದಂತೆ ಇನ್ನಿತರ ಯೋಜನೆಗಳ ಅನುಷ್ಠಾನಕ್ಕೆ ಯಾವುದೇ ಅಡಚಣೆಯಾಗಬಾರದು ಎಂದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಬಿಳಿಗಿರಿರಂಗನಬೆಟ್ಟದ ಮೂಲ ನಿವಾಸಿಗಳಿಗೆ ಭೂಮಿ ಸಂಬಂಧ ಇರುವ ಸಮಸ್ಯೆಗಳು ಪರಿಹಾರವಾಗಬೇಕು. ಸಾಗುವಳಿ ಕುರಿತ ಹಲವು ಗೊಂದಲಗಳು ಇತ್ಯರ್ಥವಾಗಬೇಕು. ಭೂಮಿ ಸಂಬಂಧ ಭೌತಿಕ ಸಮೀಕ್ಷೆ ಕಾರ್ಯ ನಡೆಯಬೇಕು ಎಂದು ತಿಳಿಸಿದರು.

ಶಾಸಕರಾದ ಹೆಚ್.ಎಂ.ಗಣೇಶ್ ಪ್ರಸಾದ್, ಎಂ.ಆರ್.ಮಂಜುನಾಥ್ ಮಾತನಾಡಿದರು. ಜಿಲ್ಲಾಧಿಕಾರಿ ಶಿಲ್ಪನಾಗ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ, ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಸುಭಾಷ್ ಕೆ.ಮಾಲ್ಕಡೆ, ಚಾಮರಾಜನಗರ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹೀರಾಲಾಲ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರಭಾಕರನ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನವೀನ್‌ಕುಮಾರ್, ಸುರೇಶ್, ಸತೀಶ್ ಇನ್ನಿತರರು ಉಪಸ್ಥಿತರಿದ್ದರು.

ಸಭೆ ಬಳಿಕ ಸಚಿವರು ಜಿಲ್ಲೆಯ ಹಿರಿಯ ಅಧಿಕಾರಿಗಳು, ಅರಣ್ಯ ಮತ್ತು ಪರಿಸರ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಸಭೆಗೂ ಮೊದಲು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರ ಆಡಳಿತ ಕಚೇರಿ ಕಟ್ಟಡವನ್ನು ಉದ್ಘಾಟಿಸಿದರು.

ಅರಣ್ಯದೊಳಗೆ ಪ್ಲಾಸ್ಟಿಕ್ ತಪಾಸಣೆ ನಡೆಸಿ

ಸಭೆಯಲ್ಲಿ ಅರಣ್ಯ ಅಧಿಕಾರಿಗಳಿಗೆ ಸಚಿವ ಈಶ್ವರ ಖಂಡ್ರೆ ಆದೇಶ

ಚಾಮರಾಜನಗರ: ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್, ಬಾಟಲಿ, ತಟ್ಟೆ, ಚಮಚ ಇತ್ಯಾದಿ ತ್ಯಾಜ್ಯ ನಿಷೇಧಕ್ಕೆ ಅರಣ್ಯದೊಳಗೆ ಸಾಗುವ ಮಾರ್ಗದಲ್ಲಿ 2 ಹಂತದ ತಪಾಸಣೆ ವ್ಯವಸ್ಥೆಯನ್ನು ಶೀಘ್ರ ಜಾರಿಗೊಳಿಸುವಂತೆ ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಅಧಿಕಾರಿಗಳಿಗೆ ಸೂಚಿಸಿದರು.



ಬಂಡೀಪುರದಲ್ಲಿ ಅರಣ್ಯ ಅಧಿಕಾರಿಗಳ ಸಭೆ ಬಳಿಕ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ರೈತರ ಅಹವಾಲು ಆಲಿಸಿದರು.

ಬಂಡೀಪುರದಲ್ಲಿ ಭಾನುವಾರ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿ ಉದ್ಘಾಟಿಸಿದ ಬಳಿಕ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಕೆಕ್ಕನಹಳ್ಳ, ಮೂಲೆಹೊಳೆ, ಮದ್ದೂರು ಗೇಟ್, ಮೇಲಕಾಮನಹಳ್ಳಿ ಗೇಟ್ ಬಳಿ ಪ್ರತಿನಿತ್ಯ 30–35 ಕೆಜಿ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹ ಆಗುತ್ತಿದೆ. ಪ್ರತಿ ವರ್ಷ ಈ ನಾಲ್ಕು ತಪಾಸಣಾ ಕೇಂದ್ರಗಳಲ್ಲಿ ಸುಮಾರು 11 ರಿಂದ 12 ಟನ್ ತ್ಯಾಜ್ಯ ಸಂಗ್ರಹವಾಗುತ್ತಿದೆ ಎಂಬ ಮಾಹಿತಿ ಇದೆ. ಅರಣ್ಯ ಸಿಬ್ಬಂದಿ ಕಾಡಿನಲ್ಲಿ ಇಳಿದು ಪ್ಲಾಸ್ಟಿಕ್ ಸಂಗ್ರಹಿಸುವಾಗ ವನ್ಯಜೀವಿ ದಾಳಿ ಮಾಡುವ ಹಾಗೂ ಹಾವು ಕಚ್ಚುವ ಅಪಾಯ ಇರತ್ತೆ. ಹೀಗಾಗಿ ಪ್ಲಾಸ್ಟಿಕ್ ತ್ಯಾಜ್ಯ ಅರಣ್ಯ ಪ್ರವೇಶಿಸದಂತೆ ದ್ವಾರದಲ್ಲೇ ತಡೆಯುವ ವ್ಯವಸ್ಥೆ ಮಾಡಿ ಎಂದರು.

ಅರಣ್ಯದೊಳಗೆ ಹಾದು ಹೋಗುವ ಹೆದ್ದಾರಿ, ರಸ್ತೆಗಳಲ್ಲಿ ಸಂಚರಿಸುವ ವಾಹನಗಳಿಗೆ 2 ಹಂತದ ತಪಾಸಣೆ ವ್ಯವಸ್ಥೆ ಜಾರಿ ಮಾಡಬೇಕು. ಮೊದಲ ಹಂತದಲ್ಲಿ ಒಂದು ದೊಡ್ಡ ಬುಟ್ಟಿ ಇಟ್ಟು ಏಕ ಬಳಕೆ ಪ್ಲಾಸ್ಟಿಕ್ ಬಾಟಲಿ, ಲೋಟ, ತಟ್ಟೆ ಕ್ಯಾರಿ ಬ್ಯಾಗ್ ಅನ್ನು ಸ್ವಯಂ ಪ್ರೇರಿತವಾಗಿ ಹಾಕಲು ವಾಹನದಲ್ಲಿರುವವರಿಗೆ ತಿಳಿಸಬೇಕು. ನಂತರ ಎರಡನೇ ಹಂತದಲ್ಲಿ ವಾಹನ ತಪಾಸಣೆ ಮಾಡಿ, ವಾಹನಗಳಲ್ಲಿ ಪ್ಲಾಸ್ಟಿಕ್ ಇದ್ದರೆ ದಂಡ ವಿಧಿಸುವಂತೆ ಸೂಚಿಸಿದರು.

ಈ ಬಾರಿ ಮುಂಗಾರು ಮತ್ತು ಹಿಂಗಾರು ಮಳೆ ಉತ್ತಮವಾಗಿದ್ದರೂ ವನ್ಯಜೀವಿಗಳು ಕಾಡಿನಿಂದ ನಾಡಿಗೆ ಬರುತ್ತಿರುವುದು ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಬರುವ ಬೇಸಿಗೆಯಲ್ಲಿ ಅರಣ್ಯದೊಳಗೆ ನೀರು ಮತ್ತು ಮೇವಿನ ಕೊರತೆ ಆಗದಂತೆ ಈಗಿನಿಂದಲೇ ಕ್ರಮ ವಹಿಸಿ, ಗುಂಡಿಗಳಲ್ಲಿ ನೀರು ಸಂಗ್ರಹಣೆಗೆ ಆದ್ಯತೆ ನೀಡಿ. ಅಗತ್ಯವಿದ್ದರೆ ಕೊಳವೆ ಬಾವಿಗಳಿಗೆ ಸೌರ ವಿದ್ಯುತ್ ಪಂಪ್ ಅಳವಡಿಸಿ ನೀರು ಹರಿಸಿ ಎಂದು ತಿಳಿಸಿದರು.

ಲಂಟನಾ, ಸೆನ್ನಾ ಕಳೆಗಳು ವ್ಯಾಪಕವಾಗಿ ಬೆಳೆಯುತ್ತಿದ್ದು, ಇದರಿಂದ ಸಸ್ಯಾಹಾರಿ ಪ್ರಾಣಿಗಳಿಗೆ ಮೇವಿನ ಕೊರತೆ ಆಗುತ್ತಿದೆ. ಈ ಕಳೆ ತೆಗೆಯಲು ಸಮಗ್ರ ಯೋಜನೆ ರೂಪಿಸಿ, ಪರಿಹಾರ ಕಂಡು ಹಿಡಿಯಿರಿ ಎಂದು ಸಚಿವರು ಹೇಳಿದರು. ಇದೇ ಸಂದರ್ಭದಲ್ಲಿ ಜಿಲ್ಲೆಯ ರೈತರ ಅಹವಾಲು ಆಲಿಸಿದ ಸಚಿವರು, ಕಾನೂನಿನ ಚೌಕಟ್ಟಿನೊಳಗೆ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸುವುದಾಗಿ ಹೇಳಿದರು.

ಜವಾಹರ ನವೋದಯ ವಿದ್ಯಾಲಯ ಪ್ರವೇಶ ಪರೀಕ್ಷೆ

ಯಳಂದೂರು, ಜ.19– ಪಟ್ಟಣದ ಜೆಎಸ್‌ಎಸ್ ಹಾಗೂ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಜವಾಹರ ನವೋದಯ ವಿದ್ಯಾಲಯ ಪ್ರವೇಶ ಪರೀಕ್ಷೆ ನಡೆಯಿತು.

2025–26ನೇ ಸಾಲಿನ 6ನೇ ತರಗತಿ ಪ್ರವೇಶ ಪರೀಕ್ಷೆ ಪಟ್ಟಣದ ಎರಡು ಕೇಂದ್ರಗಳಲ್ಲಿ ನಡೆಯಿತು. ಜೆಎಸ್‌ಎಸ್ ಶಾಲೆಯ ಪರೀಕ್ಷಾ ಕೇಂದ್ರದಲ್ಲಿ 257, ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ 240 ಸೇರಿ ಒಟ್ಟು 497 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾದರು.

ವಿದ್ಯಾರ್ಥಿಗಳಿಗೆ ಬಿಇಓ ಮಾರಯ್ಯ, ಉಪ ಪ್ರಾಂಶುಪಾಲ ನಂಜುಂಡಯ್ಯ ಶುಭ ಕೋರಿದರು. ಪರೀಕ್ಷಾ ಕೇಂದ್ರಗಳ ಸುತ್ತ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಈ ಸಂದರ್ಭದಲ್ಲಿ ಕ್ಷೇತ್ರ ಸಂಪನ್ಮೂಲ ಸಮನ್ವಯ ಅಧಿಕಾರಿ ಆರ್. ನಂಜುಂಡಯ್ಯ, ನವೋದಯ ವಿದ್ಯಾಲಯದ ಸಿಎಲ್‌ಓ ಶಶಿಧರ್, ಶಿಕ್ಷಣ ಸಂಯೋಜಕ ಕುಮಾರ್, ಸರ್ಕಾರಿ ನೌಕರ ಸಂಘದ ತಾಲೂಕು ಅಧ್ಯಕ್ಷ ಅಮ್ಮನಪುರ ಮಹೇಶ್, ದೈಹಿಕ ಶಿಕ್ಷಣ ಶಿಕ್ಷಕ ಮಹದೇವ್, ಶಿಕ್ಷಕ ಪುಟ್ಟಸ್ವಾಮಿ, ಸಿಆರ್‌ಪಿ ದೊರೆಸ್ವಾಮಿ, ಯರಿಯೂರು ರೇಚಣ್ಣ ಇತರರು ಇದ್ದರು.



ಯಳಂದೂರಿನಲ್ಲಿ ನವೋದಯ ವಿದ್ಯಾಲಯ ಪ್ರವೇಶ ಪರೀಕ್ಷೆ ನಡೆಯಿತು.

ಇಂದು ತೆರಕಣಾಂಬಿ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಜ.19– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಗುಂಡ್ಲುಪೇಟೆ ಉಪವಿಭಾಗ ವ್ಯಾಪ್ತಿಯ ತೆರಕಣಾಂಬಿ ವ್ಯಾಪ್ತಿಯಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜ.20ರಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆ ವರೆಗೆ ಭೇರಟಹಳ್ಳಿ ಎನ್‌ಜೆವೈ., ಗುರುವಿನಪುರ ಎನ್‌ಜೆವೈ, ತ್ರಿಯಂಬಕಪುರ ಐಪಿ, ಕಗ್ಗಳ ಐಪಿ ಹಾಗೂ ಕೆಲಸೂರು ಐಪಿ ಫೀಡರ್‌ಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಇಂಜಿನಿಯರ್ ತಿಳಿಸಿದ್ದಾರೆ.

ಸಿದ್ದರಾಮಯ್ಯ ರಾಜೀನಾಮೆ ನೀಡಿ ತನಿಖೆಗೆ ಸಹಕರಿಸಲಿ

ಚಾಮರಾಜನಗರ, ಜ.19–ಮುಡಾ ಹಗರಣದ ಆರೋಪಿಯಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕೂಡಲೇ ರಾಜೀನಾಮೆ ನೀಡಿ ತನಿಖೆಗೆ ಸಹಕರಿಸಬೇಕು ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾ ಹಗರಣ ಪ್ರಕರಣದಲ್ಲಿ ದೊಡ್ಡ ಮಟ್ಟದ ವಾದ ವಿವಾದ ನಡೆಯಿತು. ನ್ಯಾಯಾಧೀಶರ ತೀರ್ಪಿನಲ್ಲಿ ಮುಖ್ಯಮಂತ್ರಿಗಳ ಸ್ವಜನಪಕ್ಷಪಾತ ಹಾಗೂ ಪ್ರಭಾವ ಇರುವ ಆರೋಪವನ್ನು ತಳ್ಳಿ ಹಾಕಲು ಸಾಧ್ಯವಿಲ್ಲ. ರಾಜ್ಯಪಾಲರು ನೀಡಿರುವ ಪ್ರಾಸಿಕ್ಯೂಷನ್ ಕ್ರಮಬದ್ಧವಾಗಿದೆ ಎಂದು ತಿಳಿದು ಬಂದಿದೆ. ಆದರೆ, ಸಿದ್ದರಾಮಯ್ಯ ಆತ್ಮಸಾಕ್ಷಿ ನ್ಯಾಯಾಲಯದಲ್ಲಿ ಗೆಲ್ಲುತ್ತೇನೆ ಎಂದಿದ್ದರು. ಅಂದರೆ ನ್ಯಾಯಾಲಯದ ಆದೇಶವನ್ನೇ ತಿರಸ್ಕರಿಸಿ ಪ್ರಾಸಿಕ್ಯೂಷನ್ನಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿದರು ಎಂದು ಆರೋಪಿಸಿದರು.



ಸುದ್ದಿಗೋಷ್ಠಿಯಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಮಾತನಾಡಿದರು.

ಈಗ ಜಾರಿ ನಿರ್ದೇಶನಾಲಯ ಮುಡಾದಲ್ಲಿ 300 ಕೋಟಿಗೂ ಅಧಿಕ ಆಸ್ತಿ, 142 ಸ್ಥಿರಾಸ್ತಿಗಳನ್ನು ಜಪ್ತಿ ಮಾಡಿದೆ. ಜೊತೆಗೆ ಮುಡಾಗೆ ಪತ್ರ ಬರೆದು 631 ನಿವೇಶನಗಳನ್ನು ದಾಖಲೆ ಕೊಡಿ ಎಂದು ಕೇಳಿದೆ. ಈಗ ಇಡಿ ಗುರುತಿಸಿರುವುದು 300 ಕೋಟಿ ಆಸ್ತಿ. 631 ನಿವೇಶನಗಳ ಹಣದ ಲೆಕ್ಕಾ ಮಾಡಿದರೆ ಸುಮಾರು 5 ಸಾವಿರ ಕೋಟಿ ಆಸ್ತಿ ದುರುಪಯೋಗ ಆಗಿದೆ. ಬಡವರಿಗೆ ನೀಡಬೇಕಾದ ನಿವೇಶನವನ್ನು ಶ್ರೀಮಂತರು, ರಾಜಕಾರಣಿಗಳು ಪಡೆದುಕೊಂಡಿದ್ದಾರೆ. ಹಗರಣದ ಆರೋಪಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜೀನಾಮೆ ನೀಡಿ ತನಿಖೆಗೆ ಸಹಕರಿಸುವಂತೆ ಒತ್ತಾಯಿಸಿದರು.

ಗೋಷ್ಠಿಯಲ್ಲಿ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಆರ್.ಸುಂದರ್, ಪ್ರಧಾನ ಕಾರ್ಯದರ್ಶಿಗಳಾದ ಪಿ.ವೃಷಭೇಂದ್ರಪ್ಪ, ಮೂಡ್ನಾಕೂಡು ಪ್ರಕಾಶ್, ಕಾಡಹಳ್ಳಿ ಕುಮಾರ್ ಹಾಜರಿದ್ದರು.

ಉಡಿಗಾಲದಲ್ಲಿ ಆರೋಗ್ಯ ತಪಾಸಣೆ...



ಚಾಮರಾಜನಗರ ತಾಲೂಕಿನ ಉಡಿಗಾಲ ಗ್ರಾಮದಲ್ಲಿ ಬಸವ ರಾಜೇಂದ್ರ ಮೆಡಿಕಲ್ ಟ್ರಸ್ಟ್ ವತಿಯಿಂದ ಉಚಿತ ಶಿಬಿರದಲ್ಲಿ ಆರೋಗ್ಯ ತಪಾಸಣೆ ನಡೆಸಲಾಯಿತು.

ಒಂದನೇ ಪುಟದಿಂದ

ಕಾನ್‌ಕ್ಲೇವ್ 2025ಕ್ಕೆ ಯಶಸ್ವಿ ತೆರೆ



ವೀರಶೈವ–ಲಿಂಗಾಯತ ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್–2025ರ ಸಮಾರೋಪದಲ್ಲಿ ನಟ ಡಾಲಿ ಧನಂಜಯ್ ಅವರನ್ನು ಐಎಲ್‌ವೈಎಫ್ ಸದಸ್ಯರು ಸನ್ಮಾನಿಸಿದರು.

ವೀರಶೈವ ಲಿಂಗಾಯತ ಸಮುದಾಯದ ಉದ್ಯಮಿಗಳು ಬರೀ ಪ್ರತಿಭಾವಂತರಿಗೆ ನಿಮ್ಮ ನಿಮ್ಮ ಕ್ಷೇತ್ರದ ಉದ್ಯಮಗಳಲ್ಲಿ ಅವಕಾಶ ನೀಡುವುದರ ಜೊತೆಗೆ ಬಡವರು, ಆರ್ಥಿಕವಾಗಿ ಹಿಂದುಳಿದವರು, ಕೌಶಲ್ಯ ತರಬೇತಿ ಪಡೆಯದ ಯುವಕರು ನಮ್ಮ ಸಮುದಾಯದ ಗ್ರಾಮೀಣ ಭಾಗದಲ್ಲಿ ನೆಲೆಸಿದ್ದಾರೆ. ಇವರಿಗೂ ಅವಕಾಶ ನೀಡಿ, ಬಡ ಯುವಕರನ್ನು ಆರ್ಥಿಕತೆವಾಗಿ ಸಬಲೀಕರಣಗೊಳ್ಳಲು ಅವಕಾಶ ಕಲ್ಪಿಸುವಂತೆ ಮನವಿ ಮಾಡಿದರು.

ವ್ಯಸನದಲ್ಲಿ ಸಿಲುಕಿರುವವರನ್ನು ರಕ್ಷಿಸಿ: ನಮ್ಮ ಸಮುದಾಯದ ಯುವಕರು, ಉದ್ಯೋಗ ಸಿಗದೇ ಹಲವು ವ್ಯಸನಗಳಿಂದ ಬಳಲುತ್ತಿದ್ದು, ಬದುಕಿನ ಹಾದಿ ತಪ್ಪುತ್ತಿದ್ದಾರೆ. ಇಂತಹ ಯುವಕರನ್ನು ಗುರುತಿಸಿ, ಸಮಾಜದ ಮುಖ್ಯವಾಹಿನಿಗಳಿಗೆ ತರಲು ಎಲ್ಲರೂ ಸಹಕರಿಸಬೇಕು. ಯುವ ಸಮೂಹವೂ ವ್ಯಾಸಂಗದ ಅವಧಿಯಲ್ಲೇ ಕೌಶಲ್ಯ ತರಬೇತಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಅಣ್ಣ ಬಸವಣ್ಣನವರ ತತ್ವಾದರ್ಶಗಳನ್ನು ಪಾಲಿಸಿ ಬದುಕು ಕಟ್ಟಿಕೊಳ್ಳುವಂತೆ ಮನವಿ ಮಾಡಿದರು.

ಉದ್ಯಮ ಸ್ಥಾಪನೆಗೆ ಆದ್ಯತೆ ನೀಡಿ: ನಮ್ಮ ಯುವಕರು ಪ್ರತಿಭಾವಂತರಿದ್ದಾರೆ. ಅವರನ್ನು ನವೋದ್ಯಮದಲ್ಲಿ ತೊಡಗಿಸಿಕೊಳ್ಳಲು ಇಂತಹ ಸಂಘಟನೆಯಡಿಯಲ್ಲಿ ಸಹಕಾರ ನೀಡಬೇಕು. ಈಗಾಗಲೇ ಐಎಎಸ್, ಐಪಿಎಸ್, ಐಆರ್‌ಎಸ್ ಸೇರಿದಂತೆ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಸಜ್ಜುಗೊಳ್ಳಿಸಲಾಗುತ್ತಿದೆ. ಆದರೆ, ನಮ್ಮ ಯುವಕರನ್ನು ಉದ್ಯೋಗ ಬೇಡುವಂತೆ ರೂಪಿಸಬಾರದು. ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಸ್ವಂತ ಉದ್ಯೋಗ ಸ್ಥಾಪಿಸಲು ಸಹಕಾರ ನೀಡಬೇಕು ಎಂದ ಸಚಿವರು, ಪರಿಸರ ಮತ್ತು ಮಾಲಿನ್ಯಕ್ಕೆ ಸಂಬಂಧಿಸಿದ ಸಮುದಾಯದ ಅರ್ಜಿಗಳನ್ನು ಬೇಗ ವಿಲೇವಾರಿ ಮಾಡಲು ಸಹಕರಿಸುತ್ತೇನೆ ಎಂದು ಭರವಸೆ ನೀಡಿದರು.

ಬೆಳಗಾವಿಯ ಅಶೋಕ್ ಐರನ್ ಗ್ರೂಪ್ ಜಂಟಿ ವ್ಯವಸ್ಥಾಪಕ ಜಯಂತ್ ಹುಂಬರವಾಡಿ ಮಾತನಾಡಿ, ಐಎಲ್‌ವೈಎಫ್ ಸಂಘಟನೆಯಾಗಿ ಮೂರು ವರ್ಷದಲ್ಲೇ ಉತ್ತಮವಾಗಿ ಬೆಳೆದಿದೆ. ಬೆಂಗಳೂರು, ಹುಬ್ಬಳ್ಳಿ ಹಾಗೂ ಮೈಸೂರಿನಲ್ಲಿ ನಡೆಯುತ್ತಿರುವ ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್ ಉತ್ತಮ ಸಂಘಟನೆಯಾಗಿದೆ. ಆದರೆ, ಎಲ್ಲಾ ಕ್ಷೇತ್ರದಲ್ಲೂ ವೀರಶೈವ ಲಿಂಗಾಯತ ಸಮುದಾಯ ತೊಡಗಿಸಿಕೊಳ್ಳುವಂತಾಗಬೇಕು. ಉದ್ಯಮ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಭಾರತ ಉತ್ತಮವಾಗಿದೆ ಎಂದರೆ, ಐಎಲ್‌ವೈಎಫ್‌ನ ಮೈಸೂರು ಕಾನ್‌ಕ್ಲೇವ್ ಚೇರ್ಮನ್ ಬಿ.ಎಸ್.ಪ್ರಶಾಂತ್ ಮಾತನಾಡಿ ಸಮ್ಮೇಳನ ಯಶಸ್ವಿಗೆ ದುಡಿದ ಎಲ್ಲಾ ಸದಸ್ಯರಿಗೂ ಧನ್ಯವಾದ ಅರ್ಪಿಸಿದರಲ್ಲದೆ, ನಮ್ಮ ಸಮುದಾಯದ ಗಣ್ಯರು ನಿಧನರಾದಾಗ ನಗರ ಪಾಲಿಕೆ ವಾಹನದಲ್ಲಿ ಮೃತದೇಹ ಸಾಗಿಸುವ ಪರದಾಟ ತಪ್ಪಿಸಲು 30 ಲಕ್ಷ ವೆಚ್ಚದಲ್ಲಿ ಅಂತಿಮ ಯಾತ್ರೆ ವಾಹನ ವ್ಯವಸ್ಥೆ ಮಾಡಲಾಗಿದೆ. ಇದರ ಸದುಪಯೋಗಪಡಿಸಿಕೊಳ್ಳುವಂತೆ ಸಮುದಾಯದವರಲ್ಲಿ ಮನವಿ ಮಾಡಿದರು.

ಅಲ್ಲಮಪ್ರಭುವಿನ ವಚನ ವಾಚಿಸುವ ಮೂಲಕ ಮಾತು ಆರಂಭಿಸಿದ ನಟ ಡಾಲಿ ಧನಂಜಯ್, ಶರಣರಿಗಿಂತ ಯಾರೂ ದೊಡ್ಡವರಿಲ್ಲ. ನನಗಿಂತ ಕಿರಿಯರಿಲ್ಲ ಎಂಬ ಮಾತಿಗೆ ಬದ್ಧವಾಗಿ ನನ್ನ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೇನೆ. ನೀವು ನಿಮ್ಮ ಕ್ಷೇತ್ರದಲ್ಲಿ ಕೆಲಸ ಮಾಡಿ ದೇಶದ ಉನ್ನತಿಗೆ ದುಡಿಯೋಣ. ಈ ನಿಟ್ಟಿನಲ್ಲಿ ಐಎಲ್‌ವೈಎಫ್ ಕಾರ್ಯ ಉತ್ತಮ ಎಂದರು.

ಈ ವೇಳೆ ಗುಂಡ್ಲುಪೇಟೆ ಶಾಸಕ ಗಣೇಶ್ ಪ್ರಸಾದ್, ಕಾಡಾ ಛೇರ್ಮನ್ ಮರಿಸ್ವಾಮಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮೈಸೂರು ಘಟಕದ ಅಧ್ಯಕ್ಷ ಹಿನಕಲ್ ಬಸವರಾಜ್, ಡಿಸಿಸಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಐಎಲ್‌ವೈಎಫ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಸಂತೋಷ್ ಕೆಂಚಾಂಬ, ಮೈಸೂರು ಚಾಪ್ಟರ್ ಅಧ್ಯಕ್ಷ ಮಹದೇವಪ್ರಸಾದ್, ಗೌರವಕಾರ್ಯದರ್ಶಿ ಸಂತೋಷ್ ಸೋಮರಾಜು, ರೋಹಿತ್ ಪಾಟೀಲ್, ಉಪಾಧ್ಯಕ್ಷ ಕೆ.ಎಚ್.ಕಿರಣ್, ಜಂಟಿ ಕಾರ್ಯದರ್ಶಿ ಟಿ.ಎಸ್.ಶಶಿಕಿರಣ್, ತೀರ್ಥ ಸ್ವಾಮಿ, ಖಜಾಂಚಿ ಎ.ಪಿ.ಮನು, ಮೈಸೂರು ಛಾಪ್ಟರ್ ಅಡ್ಮಿನ್ ಸಿ.ಬಿ.ಸ್ವಾಮಿ, ಐಎಲ್‌ವೈಎಫ್ ಚಾಮರಾಜನಗರ ಘಟಕದ ಉಪಾಧ್ಯಕ್ಷ ಎಂ.ಮಹೇಶ್, ಕಾರ್ಯಕಾರಿ ಸಮಿತಿ ಸದಸ್ಯರಾದ ಎಚ್.ಎಸ್.ವೀರೇಶ್, ಡಾ.ಧರ್ಮಪ್ರಸಾದ್, ಎನ್.ಜಿ.ಗಿರೀಶ್, ಆಯರಹಳ್ಳಿ ಪಿ.ವಿರೂಪಾಕ್ಷ ಸೇರಿದಂತೆ ಇತರರಿದ್ದರು. ವೇದಿಕೆ ಕಾರ್ಯಕ್ರಮದ ನಂತರ ಖ್ಯಾತ ಗಾಯಕಿ ಅನನ್ಯಭಟ್ ತಂಡದಿಂದ ಗಾಯನ ಕಾರ್ಯಕ್ರಮದ ಮೂಲಕ ತೆರೆಕಂಡಿತು.

ಹೊತ್ತಿ ಉರಿದ 25ಕ್ಕೂ ಹೆಚ್ಚು ಟೆಂಟ್‌ಗಳು

ಸದ್ಯ ಬೆಂಕಿಯನ್ನು ನಿಯಂತ್ರಿಸಲಾಗಿದ್ದು, ಎಲ್ಲರೂ ಸುರಕ್ಷಿತರಾಗಿದ್ದಾರೆ. ಯಾರಿಗೂ ತೊಂದರೆಯಾಗಿಲ್ಲ. ಅಗ್ನಿ ಅವಘಡದ ಕುರಿತು ಸೂಕ್ತ ತನಿಖೆ ನಡೆಸಲಾಗುವುದು ಎಂದು ಹೇಳಿದ್ದಾರೆ. ಮಹಾಕುಂಭಮೇಳಕ್ಕೆ ಆಗಮಿಸುವ ಭಕ್ತರು ಉಳಿದುಕೊಳ್ಳಲು ಟೆಂಟ್‌ಗಳ ವ್ಯವಸ್ಥೆ ಮಾಡಲಾಗಿದೆ. ಇದಕ್ಕೆ ಭಕ್ತರು ಹಣ ಪಾವತಿಸಬೇಕು. ಟೆಂಟ್‌ನಲ್ಲಿ ಇರುವುದರೊಂದಿಗೆ ಆಹಾರ ಮಾಡಿಕೊಳ್ಳುವುದಕ್ಕೂ ಸಂಪೂರ್ಣ ವ್ಯವಸ್ಥೆ ಕಲ್ಪಿಸಲಾಗಿದೆ. ಹೀಗಿರುವಾಗ ಟೆಂಟ್‌ನಲ್ಲಿಟ್ಟಿದ್ದ ಸಿಲಿಂಡರ್ ಸ್ಫೋಟಗೊಂಡು ಬೆಂಕಿ ಹೊತ್ತಿಕೊಂಡಿರುವುದಾಗಿ ಶಂಕಿಸಲಾಗಿದೆ. ಪ್ರಯಾಗ್ ರಾಜ್‌ನ ಮಹಾಕುಂಭ ಮೇಳದಲ್ಲಿ ಭಾರೀ ಅಗ್ನಿ ಅವಘಡ ಸಂಭವಿದ ಸ್ಥಳಕ್ಕೆ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಅಗ್ನಿ ಅವಘಡದ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡಿದ್ದಾರೆ. ಪ್ರಯಾಗರಾಜ್‌ನಲ್ಲಿ ಸಂಭವಿಸಿದ ಬೆಂಕಿ ಅವಘಡದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರಿಗೆ ಕರೆ ಮಾಡಿ, ಘಟನೆ ಕುರಿತು ವಿಚಾರಿಸಿದ್ದಾರೆ. ಪ್ರಾಥಮಿಕ ಮಾಹಿತಿ ಪ್ರಕಾರ, ಬೆಂಕಿಯನ್ನು ನಂದಿಸಲಾಗಿದೆ. ಯಾವುದೇ ಸಾವುನೋವುಗಳು ವರದಿಯಾಗಿಲ್ಲ.

ರೌಡಿ ಶೀಟರ್ ಭೀಕರ ಹತ್ಯೆ

ಜೊತೆ ರಿಷಿಯನ್ನು ಕಳುಹಿಸಿದ ದುಷ್ಕರ್ಮಿಗಳು ಸುಪ್ರಿತ್‌ನನ್ನು ಸ್ಥಳಕ್ಕೆ ಕರೆತರುವಂತೆ ತಾಕೀತು ಮಾಡಿದ್ದಾರೆ. ಅಷ್ಟರಾಗಲೆ ಮನೆಗೆ ಬಂದಿದ್ದ ಸುಪ್ರಿತ್ ಮನೆ ಬಳಿ ಬಂದಿದ್ದು, ಕಾರ್ತಿಕ್ ಮತ್ತು ರಿಷಿ ಜೊತೆ ಬೈಕಿನಲ್ಲಿ ಜಮೀನಿನ ಬಳಿ ಇರುವ ಶೆಡ್‌ಗೆ ಆಗಮಿಸುತ್ತಿದ್ದಂತೆ ಅದಕ್ಕಾಗಿಯೇ ಕಾಯುತ್ತಿದ್ದ ದುಷ್ಕರ್ಮಿಗಳ ಗುಂಪು ಏಕಾಏಕಿ ಸುಪ್ರೀತ್ ಮೇಲೆ ಮಾರಕಾಸ್ತ್ರಗಳಿಂದ ಅಟ್ಯಾಕ್ ಮಾಡಿದ್ದಾರೆ. ಅಲ್ಲದೇ ಸುಪ್ರೀತ್ ತಲೆಯ ಮೇಲೆ ಕಲ್ಲು ಎತ್ತಿ ಹಾಕಿ ಭೀಕರವಾಗಿ ಹತ್ಯೆ ಮಾಡಿದ್ದಾರೆ. ಹತ್ಯೆಗೂ ಮೊದಲು ಸುಪ್ರೀತ್ ಬಟ್ಟೆ ಬಿಚ್ಚಿಸಿ, ಟೀ ಶರ್ಟ್ ಒಂದನ್ನು ಅಲ್ಲಿಯೇ ಬಿಟ್ಟು ಪ್ಯಾಂಟ್ ಸುಟ್ಟು ಹಾಕಿದ್ದಾರೆ. ಜೊತೆಗೆ ಹತ್ಯೆಗೆ ಬಳಸಿದ ಕಲ್ಲನ್ನು ಸಹಾ ಆರೋಪಿಗಳು ಎತ್ತಿಕೊಂಡು ಪರಾರಿಯಾಗಿದ್ದಾರೆ.

ಹಿನ್ನೆಲೆ: 2023ರ ಅ.2 ರಂದು ನಡೆದಿದ್ದ ಕುಂಟ ವಿನಿ ಕೊಲೆ ಪ್ರಕರಣ ಸಂಬಂಧ, ರೌಡಿಶೀಟರ್ ಸುಪ್ರೀತ್ ಹತ್ಯೆ ನಡೆದಿದೆ ಎನ್ನಲಾಗಿದೆ. ತಮ್ಮನ ಕೊಲೆಗೆ ಪ್ರತಿಕಾರಕವಾಗಿ ಜೈಲಿನಲ್ಲಿರುವ ಕುಂಟ ವಿನಿ ಸಹೋದರ ಪ್ರಮೋದ್ ಹಾಗೂ ಆತನ ಸಹಚರ ಕೋಳಿ ಅಭಿ ಜೈಲಿನಲ್ಲಿಯೇ ಇದ್ದುಕೊಂಡು ಪಕ್ಕಾ ಸ್ಕೆಚ್ ಹಾಕಿ, ತಮ್ಮ ಸಹಚರರ ಮೂಲಕ ರೌಡಿಶೀಟರ್ ಸುಪ್ರೀತ್‌ನನ್ನು ಕೊಲೆ ಮಾಡಿಸಿರುವ ಶಂಕೆ ಮೂಡಿದೆ.

ಕೊಲೆಯಾದ ಸುಪ್ರೀತ್ 2023ರ ಅ.2 ರಂದು ನಡೆದ ರೌಡಿಶೀಟರ್ ವಿನೋದ್ ಅಲಿಯಾಸ್ ಕುಂಟ ಎಂಬಾತನ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿ ಜೈಲು ಪಾಲಾಗಿ, ಆರು ತಿಂಗಳಲ್ಲಿ ಜಾಮೀನಿನ ಮೇಲೆ ಹೊರ ಬಂದಿದ್ದ. ಆನಂತರ ಮತ್ತೊಂದು ಕೊಲೆ ಯತ್ನ ಪ್ರಕರಣ ಸಂಬಂಧ ಮತ್ತೊಮ್ಮ ಜೈಲು ಪಾಲಾಗಿ 2024 ನವೆಂಬರ್ 14 ರಂದು ಜಾಮೀನು ಪಡೆದು ಜೈಲಿನಿಂದ ಹೊರಬಂದಿದ್ದ. ಇದೀಗ ಕೊಲೆಯಾಗಿರುವ ಸುಪ್ರೀತ್‌ನ ಆತ್ಮೀಯ ಸ್ನೇಹಿತ ಪಾಲಹಳ್ಳಿ ಗ್ರಾಮದ ಪ್ರಜ್ವಲ್ ಅಲಿಯಾಸ್ ಪಾಪು ಎಂಬಾತನನ್ನು ಇದೇ ಕುಂಟ ವಿನಿ ಸಹೋದರ ಪ್ರಮೋದ್ ಅಂಡ್ ಟೀಂ 2024ರ ಫೆ.12 ರಂದು ಹಾಡುಹಗಲೇ ಪಾಲಹಳ್ಳಿಯಲ್ಲಿ ಹತ್ಯೆ ಮಾಡಿತ್ತು. ತನ್ನ ತಮ್ಮನ ಕೊಲೆಗೆ ಪ್ರತೀಕಾರವಾಗಿ ಪ್ರಜ್ವಲ್‌ನ ಹತ್ಯೆ ಮಾಡಿದ್ದರು. ಅದರ ಬೆನ್ನಲ್ಲೇ ಇದೀಗ ಪ್ರಜ್ವಲ್‌ನ ಸ್ನೇಹಿತ ರೌಡಿಶೀಟರ್ ಸುಪ್ರೀತ್ ನನ್ನ ಭೀಕರವಾಗಿ ಹತ್ಯೆ ಮಾಡಲಾಗಿದೆ.

ಕಳೆದ ಒಂದೂವರೆ ವರ್ಷದ ಅವಧಿಯಲ್ಲಿ ಪಾಲಹಳ್ಳಿ ಗ್ರಾಮದಲ್ಲಿ ನಡೆಯುತ್ತಿರುವ ಹತ್ಯೆಗಳನ್ನು ನೋಡಿದ ಗ್ರಾಮಸ್ಥರು ಬೆಚ್ಚಿ ಬಿದ್ದಿದ್ದಾರೆ. ಈ ಸಂಬಂಧ ಶ್ರೀರಂಗಪಟ್ಟಣ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕೊಲೆ ನಡೆದ ರಾತ್ರಿಯೇ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಹಾಗೂ ಎಎಸ್‌ಪಿ ಸಿ.ಇ.ತಿಮ್ಮಯ್ಯ, ಡಿವೈಎಸ್‌ಪಿ ಮುರಳಿ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದಾರೆ ಹಾಗೂ ಪೊಲೀಸರು ಆರೋಪಿಗಳ ಬಂಧನಕ್ಕೆ ಬಲೆ ಬೀಸಿದ್ದಾರೆ.

ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ


ರಸ್ತೆ, ಚರಂಡಿ ಕಾಮಗಾರಿಗೆ ಶಾಸಕ ಡಿ.ರವಿಶಂಕರ್ ಚಾಲನೆ ನೀಡಿದರು.

ಕೆ.ಆರ್.ನಗರ, ಜ.19– ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ನಾನು ಕಂಕಣ ಬದ್ಧನಾಗಿದ್ದು, ಆ ನಿಟ್ಟಿನಲ್ಲಿ ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ಜನರ ನಿರೀಕ್ಷೆಗೆ ತಕ್ಕಂತೆ ಕಾರ್ಯ ನಿರ್ವಹಿಸುತ್ತೇನೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ರೇಷ್ಮೆ ಹುಳು ಬೀಜ ಉತ್ಪಾದನಾ ಕೇಂದ್ರದ ಆವರಣದ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಮತದಾರರ ಆಶಯಕ್ಕೆ ಸ್ಪಂದಿಸಿ ಕೆಲಸ ಮಾಡುವುದೇ ನನ್ನ ಪ್ರಮುಖ ಗುರಿ ಎಂದರು.

ಈವರೆಗೆ ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕುಗಳ ಅಭಿವೃದ್ಧಿಗೆ 500 ಕೋಟಿ ರೂ. ಅನುದಾನ ತಂದಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಹಣ ಬಿಡುಗಡೆ ಮಾಡಿಸಿ ಆದ್ಯತೆ ಮೇರೆಗೆ ಮೂಲ ಸೌಕರ್ಯ ಕಲ್ಪಿಸುವುದಾಗಿ ಭರವಸೆ ನೀಡಿದ ಶಾಸಕರು ಸಾರ್ವಜನಿಕರು ನಮ್ಮೊಂದಿಗೆ ಕೈ ಜೋಡಿಸಿದರೆ ಕ್ಷೇತ್ರವನ್ನು ಮಾದರಿ ಮಾಡಬಹುದು ಎಂದರು.

30 ಲಕ್ಷ ರೂ. ವೆಚ್ಚದಲ್ಲಿ ಈ ಕಾಮಗಾರಿ ಕೈಗೊಂಡಿದ್ದು, ಮುಂದಿನ ದಿನಗಳಲ್ಲಿ ಎಲ್ಲಾ ಸರ್ಕಾರಿ ಕಚೇರಿಗಳನ್ನು ಮೇಲ್ದರ್ಜೆಗೇರಿಸಿ ಅಲ್ಲಿಗೆ ಬರುವ ಸಾರ್ವಜನಿಕರಿಗೆ ಸವಲತ್ತು ಕಲ್ಪಿಸಿ ಅದರೊಂದಿಗೆ ಕೆಲಸಗಳು ವೇಗವಾಗಿ ನಡೆಯುವಂತೆ ಮಾಡಲು ನಾನು ನಿರ್ಧಾರ ಮಾಡಿದ್ದೇನೆ ಎಂದರು.

ಈ ವೇಳೆ ಪುರಸಭಾಧ್ಯಕ್ಷ ಶಿವುನಾಯಕ್, ಸದಸ್ಯರಾದ ಕೆ.ಜಿ.ಸುಬ್ರಹ್ಮಣ್ಯ, ಶಂಕರಸ್ವಾಮಿ, ಸೌಮ್ಯ, ಮಾಜಿ ಸದಸ್ಯ ಕೆ.ವಿನಯ್, ಗ್ರಾಪಂ ಮಾಜಿ ಅಧ್ಯಕ್ಷ ಪ್ರಕಾಶ್, ಮಾಜಿ ಸದಸ್ಯ ಮಹದೇವ್, ಮುಖಂಡರಾದ ಕಂಚಿಮಂಜು, ಗೌತಮ್ ಜಾಧವ್, ಕೃಷ್ಣೇಗೌಡ, ಕೆ.ಹೆಚ್.ಬಡಿಗೌಡ, ಮುತ್ತುರಾಜ್, ಗುತ್ತಿಗೆದಾರರಾದ ಬ್ಯಾಡರಹಳ್ಳಿಮುರುಳಿ, ಅರಕೆರೆ ಶರತ್, ಲೋಕೋಪಯೋಗಿ ಇಲಾಖೆ ಎಇಇ ಸುಮಿತ, ಇಂಜಿನಿಯರ್‌ಗಳಾದ ಶಿವಲೀಲಾ, ಮಹದೇವಸ್ವಾಮಿ ಮತ್ತಿತರರಿದ್ದರು.

ಶ್ರೀಕಂಠೇಶ್ವರನ ದರ್ಶನ ಪಡೆದ ನಟ ಡಾಲಿ ಧನಂಜಯ

ನಂಜನಗೂಡು, ಜ.19– ಇಲ್ಲಿನ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ನಟ ಡಾಲಿ ಧನಂಜಯ ಭಾನುವಾರ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ತಮ್ಮ ಮದುವೆ ಆಮಂತ್ರಣ ಪತ್ರಿಕೆಯನ್ನು ಶ್ರೀಕಂಠೇಶ್ವರಸ್ವಾಮಿ ಗುಡಿಯಲ್ಲಿರಿಸಿ ಪ್ರಾರ್ಥನೆ ಸಲ್ಲಿಸಿದ ಡಾಲಿ ಧನಂಜಯ, ದೇವಾಲಯದ ಒಳಾವರಣದಲ್ಲಿರುವ ಪಾರ್ವತಮ್ಮ, ಚಂಡಿಕೇಶ್ವರ, ಗಣಪತಿ, ನಾರಾಯಣಸ್ವಾಮಿ ಹಾಗೂ ಸುಬ್ರಹ್ಮಣ್ಯ ಸ್ವಾಮಿಗೆ ಪೂಜೆ ಸಲ್ಲಿಸಿದರು. ದೇವಾಲಯಕ್ಕೆ ಆಗಮಿಸಿದ ನಟ ಡಾಲಿ ಧನಂಜಯ ಅವರನ್ನು ಶಾಸಕ ದರ್ಶನ್ ಬರಮಾಡಿಕೊಂಡರು.


ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ನಟ ಡಾಲಿ ಧನಂಜಯ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ದೇವರ ದರ್ಶನ ಪಡೆದು ಸುದ್ದಿಗಾರರೊಂದಿಗೆ ಮಾತನಾಡಿದ ನಟ ಡಾಲಿ ಧನಂಜಯ್, ಮದುವೆ ಹಿನ್ನೆಲೆಯಲ್ಲಿ ಈ ದಿನ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಬಂದು ಪೂಜೆ ಸಲ್ಲಿಸಿದ್ದೇನೆ. ಜೊತೆಗೆ ಶಾಸಕ ದರ್ಶನ್ ಅವರಿಗೆ ಮದುವೆ ಆಮಂತ್ರಣ ಪತ್ರಿಕೆ ನೀಡಿ ಆಹ್ವಾನ ನೀಡಿದ್ದೇನೆ ಎಂದು ಹೇಳಿದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿಮಹೇಶ್, ಸಿ.ಎಂ.ಶಂಕರ್, ನಗರಸಭಾಧ್ಯಕ್ಷಶ್ರೀಕಂಠಸ್ವಾಮಿ, ಅಶೋಕ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಗ್ಯಾರಂಟಿ ಯೋಜನೆ ತಲುಪಿಸಲು ಪ್ರಾಮಾಣಿಕ ಪ್ರಯತ್ನ: ಶಾಸಕ ಅನಿಲ್


ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಕಚೇರಿಯನ್ನು ಶಾಸಕ ಅನಿಲ್ ಉದ್ಘಾಟಿಸಿದರು.

ಸರಗೂರು, ಜ.19– ಜನಸಾಮಾನ್ಯರಿಗೆ ಗ್ಯಾರಂಟಿ ಯೋಜನೆಗಳು ತಲುಪದಿದ್ದರೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಕಚೇರಿಗೆ ಬಂದು ದೂರು ನೀಡಿದರೆ ದೂರುದಾರರಿಗೆ ಉಚಿತ ಯೋಜನೆ ತಲುಪಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಶಾಸಕ ಅನಿಲ್ ತಿಳಿಸಿದರು.

ಪಟ್ಟಣದ ತಾಪಂ ಕಚೇರಿ ಬಳಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಪ್ರಣಾಳಿಕೆಯಲ್ಲಿ ತಿಳಿಸಿದಂತೆ ಐದು ಗ್ಯಾರಂಟಿಗಳನ್ನು ಘೋಷಿಸುವ ಮೂಲಕ ನುಡಿದಂತೆ ನಡೆದಿದೆ. ಅಲ್ಲದೇ ಗ್ಯಾರಂಟಿ ಯೋಜನೆಗಳಿಗೆ ಹೆಚ್ಚು ಒತ್ತು ನೀಡುತ್ತಿದೆ. ಇದೀಗ ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಸಮಿತಿ ರಚಿಸಿದ್ದು, ಸಮಿತಿ ಕಚೇರಿ ಉದ್ಘಾಟಿಸಲಾಗಿದೆ. ಅರ್ಹ ಫಲಾನುಭವಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು. ಈ ಅನುಷ್ಠಾನ ಸಮಿತಿ ನಿರ್ವಹಣೆಯನ್ನು ರಾಜ್ಯ ಸರ್ಕಾರ ಮಾಡುತ್ತಿದೆ ಎಂದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಚಲುವರಾಜು ಮಾತನಾಡಿದರು. ತಹಸೀಲ್ದಾರ್ ಮೋಹನಕುಮಾರಿ, ಇಓ ಪ್ರೇಮಕುಮಾರ್, ಯೋಜನಾಧಿಕಾರಿ ಮಹದೇವಸ್ವಾಮಿ, ಜಿಪಂ ಮಾಜಿ ಸದಸ್ಯ ಪಿ.ರವಿ, ಎಪಿಎಂಸಿ ಮಾಜಿ ಅಧ್ಯಕ್ಷ ದೇವಲಾಪುರ ಸಿದ್ದರಾಜು, ಸಮಿತಿ ಸದಸ್ಯರಾದ ಮಹೇಂದ್ರ, ಮಂಜುನಾಥ, ಭಾಗ್ಯ, ಮಹದೇವಮ್ಮ, ಡಿ.ಸಿ.ಮಹೇಶ್, ರವಿಕುಮಾರ್, ದೇವರಾಜು, ಮಹದೇವೇಗೌಡ, ಈರನಾಯಕ, ಪಂಚಾಯಿತಿ ಸದಸ್ಯೆ ಹೇಮಾವತಿ ರಮೇಶ್, ತ್ರಿಶಂಭು, ಶಿವರಾಜು, ಪರಶಿವಮೂರ್ತಿ, ಕುಂದೂರು ಮೂರ್ತಿ, ಅಜಿತ್, ಶಂಭುಲಿಂಗನಾಯಕ, ರಮೇಶ್, ಗಂಗಾಧರ್ ಇನ್ನಿತರರಿದ್ದರು.

ರೋಗ ನಿರ್ಮೂಲನೆಗೆ ಸರ್ಕಾರದಿಂದ ಯೋಜನೆ ಜಾರಿ

ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್

ಹೆಚ್.ಡಿ.ಕೋಟೆ, ಜ.19– ಕುಡುಗೋಲು ಕಣ ರೋಗ ನಿರ್ಮೂಲನೆಗೆ ರಾಜ್ಯ ಸರ್ಕಾರ ಮಹತ್ವರವಾದ ಯೋಜನೆ ಜಾರಿಗೆ ತಂದಿದೆ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ತಿಳಿಸಿದರು.



ಕಾರ್ಯಕ್ರಮಕ್ಕೆ ಶಾಸಕ ಅನಿಲ್ ಚಾಲನೆ ನೀಡಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ನಡೆದ ಕುಡುಗೋಲು ಕಣ ರೋಗ ತಪಾಸಣಾ ಮತ್ತು ಜಾಗೃತಿ ಶಿಬಿರದಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ಪರಿಶಿಷ್ಟ ಪಂಗಡದ ಶೇ.90ರಷ್ಟು ಜನರಿಗೆ ಪರೀಕ್ಷೆ ನಡೆಸಿ ಕಂಡು ಬಂದ 59 ಪ್ರಕರಣಗಳಿಗೆ ಉಚಿತ ಚಿಕಿತ್ಸೆ ನೀಡಲಾಗಿದೆ ಎಂದರು.

2024ರ ಜೂನ್ ತಿಂಗಳಲ್ಲಿ ಕುಡುಗೋಲು ಕಣ ರೋಗ ತಪಾಸಣಾ ಮತ್ತು ಜಾಗೃತಿ ಶಿಬಿರವನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಮೈಸೂರಿನ ಜಿಪಂ ಸಭಾಂಗಣದಲ್ಲಿ ಉದ್ಘಾಟಿಸಿದರು. ಈ ಶಿಬಿರದ ಮೂಲಕ ಈ ರೋಗ ನಿರ್ಮೂಲನೆಗೆ ಚಿಕಿತ್ಸೆ ನೀಡಲಾಗುತ್ತಿದ್ದು, ಪ್ರತಿಯೊಬ್ಬರೂ ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮ ಅಧ್ಯಕ್ಷತೆ ವಹಿಸಿ ಶಾಸಕ ಅನಿಲ್ ಮಾತನಾಡಿದರು. ಕಾರ್ಯಕ್ರಮಕ್ಕೂ ಮುನ್ನಾ ಶಾಲಾ ಮಕ್ಕಳು, ಆಶಾ, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಾರ್ವಜನಿಕರು ಪಟ್ಟಣದ ಜೂನಿಯರ್ ಕಾಲೇಜು ಆವರಣದಿಂದ ಹೊರಟು ಪ್ರಮುಖ ಬೀದಿಗಳಲ್ಲಿ ಜಾಥಾ ನಡೆಸಿ ಕುಡುಗೋಲು ಕಣ ರೋಗದ ಬಗ್ಗೆ ಜಾಗೃತಿ ಮೂಡಿಸಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಶ್ರೀನಿವಾಸ್, ಡಾ.ವಿಜಯ್, ಡಾ.ಅಖಿಲ, ಎನ್.ಬೇಗೂರು ಗ್ರಾಪಂ ಅಧ್ಯಕ್ಷ ಶೈಲೇಂದ್ರ, ತಾಲೂಕು ಸಂಯೋಜಕ ಪುಟ್ಟಬಸವ, ಜಿಲ್ಲಾ ಗಿರಿಜನ ಅಭಿವೃದ್ಧಿ ಅಧಿಕಾರಿ ಮಲ್ಲೇಶ್, ಪರಿಶಿಷ್ಟ ಕಲ್ಯಾಣ ವರ್ಗಗಳ ತಾಲೂಕು ಅಧಿಕಾರಿ ಮಹೇಶ್, ಗಂಗಾಧರ್, ಅಣ್ಣೂರು ನಾಗರಾಜು, ದಯಾನಂದ್, ಮುಖಂಡರಾದ ವೇಣುಗೋಪಾಲ್, ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಸಿಬ್ಬಂದಿ, ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ ಸಿಬ್ಬಂದಿ, ಸಮುದಾಯ ಆರೋಗ್ಯಾಧಿಕಾರಿಗಳು, ಆಶಾ ಕಾರ್ಯಕರ್ತೆಯರು, ಶಾಲೆ ಮಕ್ಕಳು, ಸಾರ್ವಜನಿಕರು ಹಾಜರಿದ್ದರು.

ಸಮಿತಿಗೆ ಆಯ್ಕೆ



ತಿ.ನರಸೀಪುರ, ಜ.19– ಮೈಸೂರು ಜಿಲ್ಲಾ ಸಫಾಯಿ ಕರ್ಮಚಾರಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಕುಟುಂಬಗಳನ್ನು ಗುರುತಿಸಿ ಅವಲಂಬಿತ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲು ಜಿಲ್ಲಾ ಸಮೀಕ್ಷೆ (ಸರ್ವೆ ಕಮಿಟಿ) ಸಮಿತಿ ಸದಸ್ಯರಾಗಿ ಶರತ್ ಕುಮಾರ್ ಅವರ ಪತ್ನಿ ಪವಿತ್ರ ಅವರನ್ನು ಆಯ್ಕೆ ಮಾಡಿ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಆದೇಶ ಹೊರಡಿಸಿದ್ದಾರೆ.

ಪಶು ವೈದ್ಯ ಡಾ.ಎನ್.ಕುಮಾರ್‌ಗೆ ಸನ್ಮಾನ


ಮೈಸೂರು ಜಿಲ್ಲಾ ಹಾಲು ಒಕ್ಕೂಟದಲ್ಲಿ 40 ವರ್ಷ ಸೇವೆ ಸಲ್ಲಿಸಿ ನಿವೃತ್ತರಾದ ಪಶು ವೈದ್ಯ ಡಾ.ಎನ್.ಕುಮಾರ್ ಅವರನ್ನು ಹೆಚ್.ಡಿ.ಕೋಟೆಯ ಹ್ಯಾಂಡ್‌ಪೋಸ್ಟ್‌ನಲ್ಲಿರುವ ಜಯಮ್ಮ ಸಿದ್ದೇಗೌಡ ಕಲ್ಯಾಣ ಮಂಟಪದಲ್ಲಿ ಮೈಮುಲ್ ನಿರ್ದೇಶಕ ಈರೇಗೌಡ ಸನ್ಮಾನಿಸಿದರು. ಈ ವೇಳೆ ಮೈಮುಲ್ ವ್ಯವಸ್ಥಾಪಕರಾದ ಕರಿಬಸವರಾಜು, ಡಾ.ತಾರನಾಥ್, ವಿಸ್ತರಣಾಧಿಕಾರಿಗಳಾದ ಆರೀಫ್ ಇಕ್ಬಾಲ್, ಪ್ರಭು ಶಂಕರ್, ರಾಮಪ್ಪ, ಯೋಗೇಶ್, ತಹೀರಾ, ಡಾ.ಮುಕುಲ್, ಬಸವರಾಜು, ಅಮೃತಮ್ಮಣಿ, ಲತಾ, ಶಿಲ್ಪ, ಶುಭವತಿ, ದೀಪಿಕಾ ಇತರರಿದ್ದರು.

ಪೂರ್ವಭಾವಿ ಸಭೆ

ನಂಜನಗೂಡು, ಜ.19– ನಗರದ ಸರ್ವತೋಮುಖ ಅಭಿವೃದ್ಧಿ ಹಿತದೃಷ್ಟಿಯಿಂದ ನಗರಸಭೆಯ 2025–26ನೇ ಸಾಲಿನ ಬಜೆಟ್‌ಗೆ ಸಂಬಂಧಿಸಿದಂತೆ ಜ.21ರಂದು ಮಧ್ಯಾಹ್ನ 3 ಗಂಟೆಗೆ ನಗರದ ಅಂಬೇಡ್ಕರ್ ಭವನದಲ್ಲಿ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ. ಸಭೆಗೆ ನಾಗರಿಕರು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ತಮ್ಮ ಸಲಹೆ ಸೂಚನೆಗಳನ್ನು ನೀಡಬೇಕು ಎಂದು ಪ್ರಕಟಣೆ ತಿಳಿಸಿದೆ.

ಹನುಮನಾಳು ಡೈರಿ ಚುನಾವಣೆ: ಸಿದ್ದೇಗೌಡ ಬಣಕ್ಕೆ ಜಯ

ತಿ.ನರಸೀಪುರ, ಜ.19– ತಾಲೂಕಿನ ಹನುಮನಾಳು ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ ಸಿದ್ದೇಗೌಡ ಬಣದ ಸದಸ್ಯರು ಭರ್ಜರಿ ಜಯ ಗಳಿಸಿದ್ದಾರೆ.


ಸಿದ್ದೇಗೌಡ ಬಣದ ಸದಸ್ಯರು ವಿಜಯೋತ್ಸವ ಆಚರಿಸಿದರು.

ಪ.ಜಾತಿ ಕ್ಷೇತ್ರದಿಂದ ನಂಜುಂಡಪ್ಪ, ಪ.ವರ್ಗದಿಂದ ನಾಗರಾಜು, ಹಿಂದುಳಿದ ವರ್ಗ 'ಎ' ಮಹಿಳಾ ಕ್ಷೇತ್ರದಿಂದ ಮಾಯಮ್ಮ, ಹಿಂದುಳಿದ ವರ್ಗ 'ಬಿ' ಹನುಮನಾಳು ಸಿದ್ದೇಗೌಡ, ಸಾಮಾನ್ಯ ಮಹಿಳಾ ಕ್ಷೇತ್ರದಿಂದ ಸವಿತಾ ಹಾಗೂ ಸುಮಿತ್ರ ಅವಿರೋಧವಾಗಿ ಆಯ್ಕೆಯಾದರೇ, ಇಂದು ನಡೆದ ಚುನಾವಣೆಯಲ್ಲಿ ಸಿದ್ದೇಗೌಡ, ಭಾಸ್ಕರ್, ಶಂಕರ್, ಮಹೇಶ್, ನಾಗರಾಜು, ಗವಿಸಿದ್ದೇಗೌಡ ಆಯ್ಕೆಯಾಗಿದ್ದಾರೆ.

ನೂತನ ನಿರ್ದೇಶಕ ಹನುಮನಾಳು ಸಿದ್ದೇಗೌಡ ಮಾತನಾಡಿ, ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿದ ಸಂಘದ ಎಲ್ಲಾ ರೈತ ಮುಖಂಡರು ಹಾಗೂ ಗ್ರಾಮಸ್ಥರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಮುಂದಿನ ದಿನಗಳಲ್ಲಿ ಎಲ್ಲರ ಸಹಕಾರ, ಮಾರ್ಗದರ್ಶನದೊಂದಿಗೆ ಅಭಿವೃದ್ಧಿ ಕಾರ್ಯ ರೂಪಿಸಿ ಅವುಗಳನ್ನು ಅನುಷ್ಠಾನಗೊಳಿಸುವ ಪ್ರಾಮಾಣಿಕ ಕೆಲಸ ಮಾಡುತ್ತೇನೆ ಎಂದರು.

ನಿರ್ದೇಶಕರು ಹಾಗೂ ಹಾಲು ಉತ್ಪಾದಕರ ಸಹಕಾರದಿಂದ ಡೈರಿ ಉತ್ತಮ ಸ್ಥಿತಿಯಲ್ಲಿ ನಡೆಯುತ್ತಿದೆ. ಹಾಲು ಸಂಗ್ರಹಣೆ, ಹಣ ಬಟವಾಡೆ ಪ್ರಕ್ರಿಯೆ ಯಾವುದೇ ಗೊಂದಲಗಳಿಲ್ಲದೇ ಸಾಗಿದೆ. ಸಂಘವು ಮುಂದಿನ ದಿನಗಳಲ್ಲಿ ಹೆಚ್ಚಿನ ಅಭಿವೃದ್ಧಿ ಹೊಂದಲು ನಿರ್ದೇಶಕರ ಸಹಕಾರ ಅಗತ್ಯ. ರೈತರು ಡೈರಿಗೆ ಗುಣಮಟ್ಟದ ಹಾಲು ಪೂರೈಕೆ ಮಾಡಬೇಕು. ಆ ಮೂಲಕ ಸಂಘದ ಬೆಳವಣಿಗೆಗೆ ಸಹಕಾರ ನೀಡಬೇಕು ಎಂದರು.

ಹಿರಿಯ ಮುಖಂಡ ಮರಿಗೌಡ ಮಾತನಾಡಿ, ನೂತನ ನಿರ್ದೇಶಕರು ಹಾಲು ಉತ್ಪಾದಕರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡಬೇಕು. ಮೈಮುಲ್‌ನಿಂದ ದೊರಕುವ ಸವಲತ್ತುಗಳನ್ನು ಪ್ರಾಮಾಣಿಕವಾಗಿ ರೈತರಿಗೆ ತಲುಪಿಸಬೇಕು. ಹೆಚ್ಚು ಸಾಲ ನೀಡುವ ಮೂಲಕ ಹೈನುಗಾರಿಕೆಗೆ ಪೂರಕವಾದ ವಾತಾವರಣ ಕಲ್ಪಿಸಿಕೊಡಬೇಕೆಂದು ಸಲಹೆ ನೀಡಿದರು.

ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆ ಸಿಡಿಓ ಅಸೀನ ಕಾರ್ಯ ನಿರ್ವಹಿಸಿದ್ದರು. ಸಿಇಓ ಕುಮಾರ್ ಹಾಗೂ ಮುಖಂಡರು, ಗ್ರಾಮಸ್ಥರು ಹಾಜರಿದ್ದರು.

ವಿಜೃಂಭಣೆಯ ಶ್ರೀಆಂಜನೇಯಸ್ವಾಮಿ ತೆಪ್ಪೋತ್ಸವ

ಹನಗೋಡು, ಜ.19– ಇಲ್ಲಿಗೆ ಸಮೀಪದ ದೊಡ್ಡಹೆಜ್ಜೂರು ಗ್ರಾಮದಲ್ಲಿ ಶ್ರೀಆಂಜನೇಯಸ್ವಾಮಿ ತೆಪ್ಪೋತ್ಸವ ನೂರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.


ಶ್ರೀಆಂಜನೇಯಸ್ವಾಮಿ ತೆಪ್ಪೋತ್ಸವ ವಿಜೃಂಭಣೆಯಿಂದ ನಡೆಯಿತು.

ದೇವಾಲಯದ ಪ್ರಧಾನ ಅರ್ಚಕ ಸಂಪತ್ ಕುಮಾರ್ ನೇತೃತ್ವದಲ್ಲಿ ದೇವಾಲಯದಿಂದ ಮೆರವಣಿಗೆ ಮೂಲಕ ಉತ್ಸವ ಮೂರ್ತಿಯನ್ನು ಕರೆತಂದು ಲಕ್ಷ್ಮಣ ತೀರ್ಥ ನದಿ ದಡದಲ್ಲಿ ಪೂಜೆ ಸಲ್ಲಿಸಲಾಯಿತು. ಬಳಿಕ ವಿವಿಧ ಹೂಗಳಿಂದ ಸಿಂಗರಿಸಲಾಗಿದ್ದ ತೆಪ್ಪದಲ್ಲಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ನಂತರ ನದಿ ಮಧ್ಯ ಭಾಗಕ್ಕೆ ಹೋಗಿ 3 ಬಾರಿ ತಿರುಗಿಸುತ್ತಿದ್ದಂತೆಯೇ ದಡದಲ್ಲಿ ನೆರೆದಿದ್ದ ನೂರಾರು ಭಕ್ತರು ಆಂಜನೇಯಸ್ವಾಮಿಗೆ ಜೈಕಾರ ಮೊಳಗಿಸಿದರು. ತೆಪ್ಪೋತ್ಸವದ ಬಳಿಕ ಉತ್ಸವ ಮೂರ್ತಿಯನ್ನು ಮೆರವಣಿಗೆಯಲ್ಲಿ ದೇವಾಲಯಕ್ಕೆ ರವಾನಿಸಲಾಯಿತು. ಇದೇ ವೇಳೆ ದೇವಾಲಯ ನಿರ್ಮಾಣಕ್ಕೆ ಧನ ಸಹಾಯ ಮಾಡಿದ ಮಡಿಕೇರಿ ಪೊಲೀಸ್ ಇನ್ಸ್‌ಪೆಕ್ಟರ್ ಪಿ.ಕೆ.ರಾಜು ಅವರನ್ನು ದೇವಾಲಯ ಸೇವಾ ಸಮಿತಿಯಿಂದ ಸನ್ಮಾನಿಸಲಾಯಿತು.

ಈ ವೇಳೆ ದೇವಾಲಯ ಸೇವಾ ಸಮಿತಿ ಅಧ್ಯಕ್ಷ ಶೇಖರೇಗೌಡ, ಕಾರ್ಯದರ್ಶಿ ನಟರಾಜ್, ಬಿಜೆಪಿ ಮುಖಂಡ ಮಂಜುನಾಥ್, ಗ್ರಾಪಂ ಮಾಜಿ ಅಧ್ಯಕ್ಷ ದಾ.ರಾ.ಮಹೇಶ್, ಹನಗೋಡು ಸಹಕಾರ ಬ್ಯಾಂಕ್ ಅಧ್ಯಕ್ಷ ಹನುಮ ಸೇರಿದಂತೆ ದೇವಾಲಯ ಸೇವಾ ಸಮಿತಿ ಸದಸ್ಯರು ಹಾಗೂ ಗ್ರಾಮಸ್ಥರು ಇದ್ದರು. ಹುಣಸೂರು ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಮುನಿಯಪ್ಪ ಬಂದೋಬಸ್ತ್ ಕೈಗೊಂಡಿದ್ದರು.

ರೈತರ ಬದುಕಿನ ಮೇಲೆ ಬೆಳಕು ಚೆಲ್ಲುವ 'ದಿ ಇಂಕ್' ಚಿತ್ರ ಏಪ್ರಿಲ್‌ನಲ್ಲಿ ತೆರೆಗೆ

ಮೈಸೂರು, ಜ.19(ಜಿಎ)– ರೈತರು ಕೃಷಿ ವೇಳೆ ಮುನ್ನೆಚ್ಚರಿಕೆಯಿಲ್ಲದೇ ರಾಸಾಯನಿಕ ಬಳಸುವುದರಿಂದ ಆಗುವ ಅನಾಹುತ ಕುರಿತಂತೆ ಸಸ್ಪನ್ಸ್, ಥ್ರಿಲ್ಲರ್ ವೈಜ್ಞಾನಿಕ ಚಲನಚಿತ್ರ 'ದಿ ಇಂಕ್' ಹೆಸರಿನಲ್ಲಿ ಶೇ.50ರಷ್ಟು ಚಿತ್ರೀಕರಣ ಮುಗಿಸಿದೆ. ಇದು ಬರುವ ಏಪ್ರಿಲ್‌ನಲ್ಲಿ ತೆರೆ ಕಾಣಲಿದೆ ಎಂದು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ನಟ ಕಾರ್ತಿಕ್ ತಿಳಿಸಿದರು. ವಿಜ್ಞಾನಿಗಳು ಕಂಡು ಹಿಡಿದ ಒಂದು ಸೂತ್ರದ ಸುತ್ತ ಚಿತ್ರದ ಕಥೆ ಸಾಗುತ್ತದೆ. ಇದರಲ್ಲಿ ಎರಡು ಹಾಡು ಹಾಗೂ ಒಂದು ಸಾಹಸ ದೃಶ್ಯವಿದೆ. ಇದು ಗ್ರಾಮೀಣ ಸೊಗಡಿನ ಚಿತ್ರವಾಗಿದೆ ಎಂದರು. ಗೋಷ್ಠಿಯಲ್ಲಿ ನಟಿ ಸುಹಾಸಿನಿ ಗಣೇಶ್, ಉಮೇಶ್, ಸುಜಿತ್ ಕೆ.ಜಿಗಣಿ, ಅರ್ಜುನ್ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಅಧ್ಯಯನದ ಹವ್ಯಾಸ ರೂಢಿಸಿಕೊಳ್ಳಿ


ಮಡುವಿನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವಾರ್ಷಿಕೋತ್ಸವ ನಡೆಯಿತು.

ಮಲ್ಕುಂಡಿ, ಜ.19– ವಿದ್ಯಾರ್ಥಿಗಳು ಪ್ರಾಥಮಿಕ ಹಂತದಲ್ಲಿಯೇ ಉತ್ತಮ ಅಧ್ಯಯನ ಹವ್ಯಾಸ ರೂಢಿಸಿಕೊಳ್ಳಬೇಕು ಹಾಗೂ ಮಕ್ಕಳ ಆರೋಗ್ಯದ ಬಗ್ಗೆ ಪೋಷಕರು ಹೆಚ್ಚಿನ ಗಮನ ಹರಿಸಬೇಕು ಎಂದು ಎಸ್‌ಡಿಎಂಸಿ ಅಧ್ಯಕ್ಷ ಸತೀಶ್ ತಿಳಿಸಿದರು.

ಮಡುವಿನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಗುಣಮಟ್ಟದ ಶಿಕ್ಷಣ ನೀಡಬೇಕು. ಖಾಸಗಿ ಶಾಲೆಗಿಂತ ಸರ್ಕಾರಿ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಸರ್ಕಾರಿ ಶಾಲೆಯಲ್ಲಿ ಓದಿದವರು ಉನ್ನತ ಹುದ್ದೆಯಲ್ಲಿ ಇದ್ದಾರೆ. ಗ್ರಾಮೀಣ ಭಾಗದ ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಲು ಮುಂದಾಗಬೇಕಿದೆ. ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ಭಾಗವಹಿಸಬೇಕು. ಇತ್ತೀಚಿನ ದಿನಗಳಲ್ಲಿ ಮಕ್ಕಳು ಮೊಬೈಲ್ ಬಳಸುವುದು ಹೆಚ್ಚಾಗಿದ್ದು, ಇದರ ಬಗ್ಗೆ ಪೋಷಕರು ಹೆಚ್ಚಿನ ಗಮನ ಹರಿಸಬೇಕು. ಪೋಷಕರು ತಮ್ಮ ಮಕ್ಕಳಿಗೆ ಆಸ್ತಿ ಮಾಡುವ ಬದಲು ಶಿಕ್ಷಣ ಕೊಡಿಸಿ ಎಂದರಲ್ಲದೆ ಸರ್ಕಾರ ಖಾಸಗಿ ಶಾಲೆಗೆ ಹೆಚ್ಚಿನ ಮೂಲಸೌಕರ್ಯ ಕಲ್ಪಿಸುವ ಬದಲು ಸರ್ಕಾರಿ ಶಾಲೆಗೆ ಹೆಚ್ಚಿನ ಮೂಲ ಸೌಕರ್ಯ ನೀಡಿದರೆ ಗ್ರಾಮೀಣ ಮಕ್ಕಳು ಉತ್ತಮ ಶಿಕ್ಷಣ ಪಡೆಯಲು ಸಾಧ್ಯವಾಗುತ್ತದೆ ಎಂದರು.

ಜಿಲ್ಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಮಹೇಶ್, ತಾಲೂಕು ಸಂಘದ ಕಾರ್ಯದರ್ಶಿ ರಂಗನಾಥ್, ಶಿಕ್ಷಕರ ಸಹಕಾರ ಸಂಘದ ಉಪಾಧ್ಯಕ್ಷ ಸಿದ್ದೇಶ್, ದೀಪಕ್, ಗ್ರಾಪಂ ಸದಸ್ಯ ಚನ್ನಪ್ಪ, ಅನುಪಮ, ಮುಖಂಡರಾದ ಲೋಕೇಶ್, ಮಂಜಪ್ಪ, ಎಸ್‌ಡಿಎಂಸಿ ಉಪಾಧ್ಯಕ್ಷೆ ಮಣಿಯಮ್ಮ, ಸದಸ್ಯರಾದ ಮಹೇಶ್ವರಿ, ವೆಂಕಟೇಶ್, ಸಣ್ಣಯ್ಯ, ಶ್ರೀನಿವಾಸ್, ಮಹದೇವಸ್ವಾಮಿ ಸೇರಿದಂತೆ ಇತರರಿದ್ದರು.

ಅಂಬೇಡ್ಕರ್ ಬಗ್ಗೆ ಅವಹೇಳನ ಮಾತನಾಡಿರುವ ಅಮಿತ್ ಶಾ ವಿರುದ್ಧ

ಜ.23 ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ

ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್

ತಿ.ನರಸೀಪುರ, ಜ.19– ಅಂಬೇಡ್ಕರ್ ಬಗ್ಗೆ ಹಗುರವಾಗಿ ಮಾತನಾಡಿರುವ ಕೇಂದ್ರ ಗೃಹಸಚಿವ ಅಮಿತ್ ಶಾ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಬೇಕು. ಅವರು ಅಂಬೇಡ್ಕರ ಪ್ರತಿಮೆ ಎದುರು ಮಂಡಿಯೂರಿ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿ, ಯುವ ನಾಯಕ ಪ್ರಿಯಾಂಕ್ ಖರ್ಗೆ ವಿರುದ್ಧದ ಬಿಜೆಪಿ ಪಿತೂರಿ ರಾಜಕಾರಣ ಹಿಮ್ಮೆಟ್ಟಿಸಲು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಜ.23ರಂದು ಬೆಳಗ್ಗೆ 10.30ಕ್ಕೆ ದಲಿತ ಸಂಘರ್ಷ ಸಮಿತಿಗಳ ಒಕ್ಕೂಟದಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ತಿಳಿಸಿದರು.


ಬೃಹತ್ ಪ್ರತಿಭಟನೆಯ ಕರಪತ್ರವನ್ನು ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಬಿಡುಗಡೆ ಮಾಡಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಬೃಹತ್ ಪ್ರತಿಭಟನೆ ಮಾಡೋಣ ಹೋರಾಟದ ಕರಪತ್ರ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಪ್ರಜಾಪ್ರಭುತ್ವ ಪ್ರತಿಪಾದಿಸುವ ಅಂಬೇಡ್ಕರ್ ಸಂವಿಧಾನ ಒಪ್ಪದವರು ದೇಶ ಬಿಟ್ಟು ತೊಲಗಲಿ ಎಂಬ ಘೋಷಣೆಯೊಂದಿಗೆ ದಲಿತ ಸಂಘರ್ಷ ಸಮಿತಿಗಳ ಒಕ್ಕೂಟದಿಂದ ಬೃಹತ್ ಪ್ರತಿಭಟನೆ ಆಯೋಜಿಸಲಾಗಿದ್ದು, ತಾಲೂಕು ಸೇರಿದಂತೆ ಜಿಲ್ಲೆಯಿಂದ 2 ಸಾವಿರಕ್ಕೂ ಹೆಚ್ಚಿನ ಮಂದಿ ಭಾಗವಹಿಸಬೇಕು ಎಂದು ಕರೆ ನೀಡಿದರು.

ಅಂಬೇಡ್ಕರ್ ಅಪಮಾನಿಸಿದ್ದಕ್ಕೆ ಕ್ಷಮೆ ಕೇಳಬೇಕು ಅಥವಾ ವಿಷಾದ ವ್ಯಕ್ತಪಡಿಸಬೇಕೆಂಬ ಕನಿಷ್ಠ ಸೌಜನ್ಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರಕ್ಕೆ ಬಂದಿರುವ ಕೇಂದ್ರ ಎನ್‌ಡಿಎ ಸರ್ಕಾರದಲ್ಲಿ ಸಚಿವರಾಗಿರುವ ಅಮಿತ್ ಶಾ ಅವರಿಗೆ ಇಲ್ಲದಿರುವುದು ಅವರ ಹಿನ್ನೆಲೆ ಮತ್ತು ಬಿಜೆಪಿ ಪಕ್ಷದ ಒಳ ಮರ್ಮ ತಿಳಿಸುತ್ತದೆ. ಯಾವುದೇ ಪಕ್ಷ ಅಧಿಕಾರದಲ್ಲಿದ್ದರೂ ಸಂವಿಧಾನ ಮತ್ತು ಅಂಬೇಡ್ಕರ್ ಹಾಗೂ ದಲಿತ ವಿರೋಧಿಯಾಗಿ ನಡೆದುಕೊಂಡರೆ ಹೋರಾಟ ಮಾಡುತ್ತೇವೆ. ಹಾಗಾಗಿ ಅಮಿತ್ ಶಾ ಕ್ಷಮೆ ಕೇಳುವವರೆಗೂ, ರಾಷ್ಟ್ರಪತಿಗಳು ಅವರನ್ನು ಸಚಿವ ಸ್ಥಾನದಿಂದ ವಜಾ ಗೊಳಿಸುವವರೆಗೂ ಹೋರಾಟ ಮಾಡುತ್ತೇವೆ ಎಂದರು.

ಇಂದು ಅನಿರ್ದಿಷ್ಟಾವಧಿ ಧರಣಿ: ಪಟ್ಟಣದಲ್ಲಿ ಹಲವು ದಶಕಗಳಿಂದ ಸ್ವಂತ ನೆಲೆ ಇಲ್ಲದೇ ಪರದಾಡುತ್ತಿರುವ ಪ.ಜಾತಿ ಕೊರಚ ಸಮುದಾಯದ 40 ಕುಟುಂಬಗಳಿಗೆ ನಿವೇಶನ ಮತ್ತು ವಸತಿ ಯೋಜನೆ ಮಂಜೂರಾತಿಗೆ ಒತ್ತಾಯಿಸಿ ಜ.20ರಿಂದ ತಾಲೂಕು ಕಚೇರಿ ಎದುರು ದಸಂಸ ವತಿಯಿಂದ ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಳ್ಳಲಾಗಿದೆ. ಪಟ್ಟಣದಲ್ಲಿ ಅವರಿಗೆ ಜಿಲ್ಲಾ ಹಾಗೂ ತಾಲೂಕು ಆಡಳಿತ ಶಾಶ್ವತ ನೆಲೆ ಮತ್ತು ಸೂರನ್ನು ಕಲ್ಪಿಸುವವರೆವಿಗೂ ಹೋರಾಟ ಹಿಂಪಡೆಯುವುದಿಲ್ಲ ಎಂದರು.

"ಪಟ್ಟಣದಲ್ಲಿ ಜ.21ರಂದು ಸಂಜೆ ನಡೆಯುವ ಅಂತಾರಾಷ್ಟ್ರೀಯ ಖೋಖೋ ಕ್ರೀಡಾಪಟು, ತಾಲೂಕಿನ ಹೆಮ್ಮೆಯ ಕುವರಿ ಚೈತ್ರ ಅವರ ಚೈತ್ರೋತ್ಸವದಲ್ಲಿ ದಸಂಸ ಕಾರ್ಯಕರ್ತರು ಭಾಗವಹಿಸಬೇಕು. ಕುರುಬೂರು ಗ್ರಾಮದ ಚೈತ್ರ ಅಂತಾರಾಷ್ಟ್ರೀಯ ಖೋ ಖೋ ಕ್ರೀಡೆಗೆ ಆಯ್ಕೆ ಆಗಿರುವುದು ತಾಲೂಕು, ಜಿಲ್ಲೆ ಹಾಗೂ ರಾಜ್ಯಕ್ಕೆ ಹೆಮ್ಮೆಯ ವಿಷಯವಾಗಿದೆ. ದೆಹಲಿಯಲ್ಲಿ ನಡೆಯುವ ಪಂದ್ಯಾವಳಿ ಬಳಿಕ ಪಟ್ಟಣಕ್ಕೆ ಅಂದು ಸಂಜೆ 4.30ಕ್ಕೆ ಚೈತ್ರ ಆಗಮಿಸುತ್ತಿದ್ದು, ಅವರನ್ನು ಅದ್ದೂರಿಯಾಗಿ ಸ್ವಾಗತಿಸಲು ದಸಂಸ ಕಾರ್ಯಕರ್ತರು ತಪ್ಪದೆ ಭಾಗವಹಿಸಬೇಕು.

-ಆಲಗೂಡು ಶಿವಕುಮಾರ್,
ದಸಂಸ ಜಿಲ್ಲಾ ಸಂಚಾಲಕ.

ತಾಲೂಕು ಸಂಚಾಲಕ ಸೋಮಶೇಖರ್ ಮಾತನಾಡಿದರು. ಕುಕ್ಕೂರು ರಾಜು, ಸಂಘಟನಾ ಸಂಚಾಲಕರಾದ ಕಿರಗಸೂರು ರಜನಿ, ನಾಗರಾಜ್ ಮೂರ್ತಿ, ಉಕ್ಕಲಗೆರೆ ರವಿ, ಮುಖಂಡರಾದ ತುರುಗನೂರು ಲಕ್ಷ್ಮಣ, ಸುಜ್ಜಲೂರು ಶಿವಯ್ಯ, ಕೊರಚರ ಕಾಲೋನಿ ರಾಜು, ವೆಂಕಟೇಶ್, ಕನ್ನಹಳ್ಳಿ ಶಶಿಕುಮಾರ್, ಮಂಜುನಾಥ್, ಸಂಪತ್ ಕುಮಾರ್, ತೊಟ್ಟವಾಡಿ ಶಾಂತರಾಜು, ಚಾಮನಹಳ್ಳಿ ರಂಗಸ್ವಾಮಿ, ಮಹದೇವಸ್ವಾಮಿ, ವಾಟಾಳ್ ಪ್ರಭು, ಮುತ್ತು ಹಾಗೂ ಇತರರಿದ್ದರು.

ಮೈಸೂರು ಮಿತ್ರ

ತಿ.ನರಸೀಪುರ ಕುಂಭಮೇಳ ಪೂರ್ವಭಾವಿ ಸಭೆ

ಭಕ್ತರಿಗೆ ಅಗತ್ಯ ಮೂಲ ಸೌಕರ್ಯ ಜೊತೆಗೆ ಭದ್ರತೆ

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ

ಮೈಸೂರು, ಜ.19(ಎಂಟಿವೈ)– ಮೈಸೂರು ಜಿಲ್ಲೆಯ ತಿ.ನರಸೀಪುರದ ತ್ರಿವೇಣಿ ಸಂಗಮದಲ್ಲಿ ಫೆ.10ರಿಂದ 12ರವರೆಗೆ ನಡೆಯಲಿರುವ 13ನೇ ಕುಂಭಮೇಳಕ್ಕೆ ಬರುವ ಭಕ್ತರಿಗೆ ಅಗತ್ಯ ಮೂಲ ಭೂತ ಸೌಲಭ್ಯ ಕಲ್ಪಿಸುವುದರೊಂದಿಗೆ ಭದ್ರತೆಗೆ ಅಗತ್ಯ ಕ್ರಮಕೈಗೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೂಚನೆ ನೀಡಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಕುಂಭಮೇಳ–2025ರ ಅಂಗವಾಗಿ ಪೂರ್ವಭಾವಿ ಸಭೆಯ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನರಲ್ಲಿ ಧಾರ್ಮಿಕ ಸೌಹಾರ್ದತೆ ಮೂಡಿಸಲು, ವೈಚಾರಿಕ ತಳಹದಿಯ ಮೇಲೆ ಸಹೋದರತ್ವ ಮೂಡಿಸಲು 1989ರಿಂದ ಪ್ರತಿ ಮೂರು ವರ್ಷಗಳಿಗೊಮ್ಮೆ ತ್ರಿವೇಣಿ ಸಂಗಮದಲ್ಲಿ ಕುಂಭಮೇಳ ನಡೆಸಲಾಗುತ್ತಿದೆ. ಈ ಧಾರ್ಮಿಕ ಆಚರಣೆಗೆ ಸರ್ಕಾರ ಎಲ್ಲ ರೀತಿಯ ಬೆಂಬಲ ನೀಡುತ್ತಿದೆ ಎಂದರು.

ಕುಂಭಮೇಳದಲ್ಲಿ ಸ್ವಚ್ಛತೆ ಕಾಪಾಡಬೇಕು. ಪ್ಲಾಸ್ಟಿಕ್ ಮುಕ್ತ ಪ್ರದೇಶ ಎಂದು ಘೋಷಣೆ ಮಾಡಬೇಕು. ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಮೊಬೈಲ್ ಟಾಯ್ಲೆಟ್ ವ್ಯವಸ್ಥೆ ಮಾಡಬೇಕು. ಸಾಂಸ್ಕೃತಿಕ ಹಾಗೂ ಜನಪದ ಸಂಗೀತ ಕಾರ್ಯಕ್ರಮ ಆಯೋಜಿಸಬೇಕು. ಸ್ಥಳೀಯ ಕಲಾವಿದರಿಗೆ ಅವಕಾಶ ನೀಡಬೇಕು. ಸಾರಿಗೆ ಸಂಸ್ಥೆಯಿಂದ ಹೆಚ್ಚಿನ ಬಸ್ ವ್ಯವಸ್ಥೆ ಮಾಡಬೇಕು ಎಂದು ಸೂಚನೆ ನೀಡಿದರು.

ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಕುಂಭಮೇಳ ನಡೆಯುವ 3 ದಿನವೂ ವಿವಿಧ ಕಾರ್ಯಕ್ರಮಗಳು ಜರುಗುತ್ತವೆ. ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಲಕ್ಷಾಂತರ ಭಕ್ತರು ಆಗಮಿಸುವ ನಿರೀಕ್ಷೆ ಇದೆ. ಫೆ.11ರಂದು ಕಾವೇರಿ ಆರತಿ ಮಾಡಲಾಗುತ್ತದೆ. ಸ್ನಾನ ಘಟ್ಟಗಳಲ್ಲಿ ಸ್ವಚ್ಛತೆ ಹಾಗೂ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ನಿಗದಿತ ಸ್ಥಳಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಬೇಕು. ಉಚಿತ ಅನ್ನದಾನ ಮಾಡುವ ಕಡೆ ಸ್ವಚ್ಛತೆ ಕಾಪಾಡಬೇಕು. ಫೈರ್ ಸೇಫ್ಟಿ ಕೈಗೊಳ್ಳಬೇಕು. ಕುಟೀರಗಳ ಬಳಿ ಭದ್ರತೆ ವ್ಯವಸ್ಥೆ ಕೈಗೊಳ್ಳಬೇಕು. ರಸ್ತೆಗಳು ಉತ್ತಮವಾಗಿ ಇರುವಂತೆ ನೋಡಿಕೊಳ್ಳಬೇಕು ಎಂದರು.

ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಮಾತನಾಡಿ, 1989 ರಿಂದ ಕುಂಭ'ಮೇಳ' ಆಚರಣೆ ಪ್ರಾರಂಭವಾಯಿತು. ಕೋವಿಡ್ ಇದ್ದುದರಿಂದ 2021ರಲ್ಲಿ ಕುಂಭಮೇಳ ನಡೆಯಲಿಲ್ಲ. ನದಿಯಲ್ಲಿ ಸ್ನಾನ ಮಾಡಲು 5 ಕಡೆ ಜಾಗ ಗುರುತಿಸಲಾಗಿದೆ. 1 ಯಾಗ ಶಾಲೆ ನಿರ್ಮಾಣ ಮಾಡಲಾಗುವುದು. 6 ಕುಟೀರಗಳನ್ನು ನಿರ್ಮಾಣ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದರು.



ಜಲದರ್ಶಿನಿ ಅತಿಥಿ ಗೃಹದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

10 ಕೋಟಿ ರೂ.ಗೆ ಪ್ರಸ್ತಾವನೆ

ತಿ.ನರಸೀಪುರದಲ್ಲಿ ಕುಂಭಮೇಳ ಆಯೋಜನೆಗೆ 10 ಕೋಟಿ ರೂ. ಪ್ರಸ್ತಾವನೆ ಸಲ್ಲಿಸಲು ಉದ್ದೇಶಿಸಲಾಗಿದೆ. ಮೇಳದ ಕಾರ್ಯಕ್ರಮಕ್ಕೆ ಅಂದಾಜು 5 ಕೋಟಿ ರೂ. ಬೇಕಾಗುತ್ತದೆ ಎಂದು ಅಧಿಕಾರಿಗಳು ಕ್ರಿಯಾಯೋಜನೆ ಸಿದ್ಧಪಡಿಸಿದ್ದಾರೆ. 2019ರಲ್ಲಿ 1 ಕೋಟಿ ರೂ. ಬಾಕಿ ಬರಬೇಕಿದೆ. ಎಲ್ಲವೂ ಸೇರಿ 10 ಕೋಟಿ ರೂ. ನೀಡುವಂತೆ ಕೋರಲಾಗುವುದು

– ಡಾ.ಹೆಚ್.ಸಿ.ಮಹದೇವಪ್ಪ,
ಜಿಲ್ಲಾ ಉಸ್ತುವಾರಿ ಸಚಿವ

ಲೇಸರ್ ಪ್ರದರ್ಶನ ಬೇಡ

2019ರಲ್ಲಿ ಲೇಸರ್ ಪ್ರದರ್ಶನ ಏರ್ಪಡಿಸಲಾಗಿತ್ತು. ಅದು ಚೆನ್ನಾಗಿರಲಿಲ್ಲ ಎಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದರು. ಅಲ್ಲದೆ, ಲೇಸರ್ ಡಿಜೆ ಶಬ್ದದಂತೆ ಇತ್ತು ಎಂದು ಆರೋಪಿಸಿದ್ದರು. ಅದರ ಬದಲು ಸಾಂಸ್ಕೃತಿಕ ಕಾರ್ಯಕ್ರಮಗಳು ದೇಶೀಯ ಸಂಸ್ಕೃತಿಯನ್ನು ಬಿಂಬಿಸುವಂತೆ ಮಾಡಬೇಕು.

– ಡಾ.ಯತೀಂದ್ರ ಸಿದ್ದರಾಮಯ್ಯ,
ವಿಧಾನಪರಿಷತ್ ಸದಸ್ಯ

ಸಭೆಯಲ್ಲಿ ಜಿ.ಪಂ ಸಿಇಓ ಕೆ.ಎಂ. ಗಾಯತ್ರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ವನಂಗಾನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಗೇಮ್ ಚೇಂಜರ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಫತೇ(ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಭೂ ಮಂತರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುಐ (ಕ)	4 ಪ್ರದರ್ಶನಗಳು
ರಾಜಕಮಲ್	
ಡಾಕು ಮಹಾರಾಜ್ (ತೆ)	4 ಪ್ರದರ್ಶನಗಳು
ಸಂಗಂ	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಲಿಡೋ	
ಭೂ ಮಂತರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಾರ್ಕೊ (ಹಿ)	4 ಪ್ರದರ್ಶನಗಳು
ಪ್ರಭಾ	
ಮದಗಜ ರಾಜ (ತ)	5 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಆಫ್ಟರ್ ದಿ ಬ್ರೇಕಪ್ (ಕ): ಬೆ.9.40ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12.10ಕ್ಕೆ, ಸಂ.5.20ಕ್ಕೆ, ರಾ.7.45ಕ್ಕೆ, ಯುಐ (2024) (ಕ): ಮ.2.35ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಸೋನಿಕ್ ದಿ ಹೆಡ್ಜಾಗ್ 3(ಇಂ): ಬೆ.11.25ಕ್ಕೆ, ಸಂ.4.30ಕ್ಕೆ, ದೇಶಕ್ಕಾರನ್ (ಮ): ಮ.1.55ಕ್ಕೆ, ಮಾರ್ಕೊ (ಹಿಂ): ರಾ.7ಕ್ಕೆ, ಮಾರ್ಕೊ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಹರಿದಾಸರ ದಿನಚರಿ (ಕ): ಬೆ.10.30ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಮ.1.40ಕ್ಕೆ, ಸಂ.4.30ಕ್ಕೆ, ಎ ಲೆಜೆಂಡ್ (ಇಂ): ರಾ.7.20ಕ್ಕೆ, ಐಡೆಂಟಿಟಿ (ಮ): ರಾ.10.05ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7.05ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪುಷ್ಪಾ 2 (ಕ): ಮ.1ಕ್ಕೆ, ಸ್ವೇಚ್ಛಾ (ಕ): ಸಂ.4.40ಕ್ಕೆ, ಯುಐ (ಕ): ಸಂ.6.55ಕ್ಕೆ, ದೇಶಕ್ಕಾರನ್ (ಮ): ರಾ.9.25ಕ್ಕೆ.
ಸ್ಕ್ರೀನ್ 2	ಮ್ಯಾಕ್ಸ್ (ಕ): ಮ.1.10ಕ್ಕೆ, ಮ.3.50ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.11.25ಕ್ಕೆ, ಯುಐ (ಕ): ಮ.1.45ಕ್ಕೆ, ಮ್ಯಾಕ್ಸ್ (ಕ): ಸಂ.6.25ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.11ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.1.45ಕ್ಕೆ, ಸಂ.6.55ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಸಂ.4.25ಕ್ಕೆ, ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹೆಚ್.ವಿ.ರಾಜೀವ್‌ಗೆ ಸನ್ಮಾನ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ವಿಶ್ವಾಮಿತ್ರ ಸಮ್ಮೇಳನದಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭ ಉಪಾಧ್ಯಕ್ಷರಾದ ನು.ಶ್ರೀಕಂಠಕುಮಾರ್, ದಿವಾಕರ್, ಮುರಳೀಧರ್, ಸುನೀಲ್ ಮತ್ತಿತರರು ಉಪಸ್ಥಿತರಿದ್ದರು

ವಿದ್ಯಾಮಿತ್ರ ಅಕಾಡೆಮಿ ಫಾರ್ ಎಕ್ಸ್‌ಲೆನ್ಸ್‌ನಿಂದ ಕಲಾಸಂಜೆ

ಮೈಸೂರು: ಮೈಸೂರಿನ ಕೇರ್ಗಳ್ಳಿಯಲ್ಲಿರುವ ವಿದ್ಯಾಮಿತ್ರ ಅಕಾಡೆಮಿ ಫಾರ್ ಎಕ್ಸಲೆನ್ಸ್‌ನ ವಾರ್ಷಿಕೋತ್ಸವ ಕಲಾಸಂಜೆ ಕಾರ್ಯಕ್ರಮವನ್ನು ಜ.28ರಂದು ಸಂಜೆ 6 ಗಂಟೆಗೆ ಕೇರ್ಗಳ್ಳಿಯಲ್ಲಿರುವ ಹೊಂಬಾಳಮ್ಮ ಸಿದ್ದರಾಮೇಶ್ವರ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ವಿದ್ಯಾಮಿತ್ರ ಎಜುಕೇಷನ್ ಅಂಡ್ ಕಲ್ಚರಲ್ ಟ್ರಸ್ಟ್ ಅಧ್ಯಕ್ಷ ಎಸ್.ರಾಧಾಕೃಷ್ಣ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಮಹಾರಾಜ ವಿದ್ಯಾಸಂಸ್ಥೆಯ ಅಧ್ಯಕ್ಷ ಡಾ.ಎಸ್.ಮುರಳಿ, ಶ್ರೀ ಹೊಂಬಾಳಮ್ಮ ಸಿದ್ದರಾಮೇಶ್ವರ ಟ್ರಸ್ಟ್ ಅಧ್ಯಕ್ಷ ಕೆಂಚಪ್ಪ ಅವರುಗಳು ಭಾಗವಹಿಸುವವರು ಎಂದು ವಿದ್ಯಾಮಿತ್ರ ಅಕಾಡೆಮಿ ಫಾರ್ ಎಕ್ಸ್‌ಲೆನ್ಸ್‌ನ ಶ್ರೀಮತಿ ಸರಸ್ವತಿ ಅವರು ತಿಳಿಸಿದ್ದಾರೆ. ನಂತರ ಶಾಲಾ ಮಕ್ಕಳಿಂದ ಮನರಂಜನೆ ಮತ್ತು ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದ್ದು, ಸಾರ್ವಜನಿಕರು ಮತ್ತು ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಅವರು ಕೋರಿದ್ದಾರೆ.

ಮೈಸೂರಿನಲ್ಲಿ ಫೆ.1, 2ರಂದು ಸಂಸ್ಕೃತ ಕಾವೇರಿ ಸಮ್ಮೇಳನ

ಮೈಸೂರು, ಜ. 19– ಸಂಸ್ಕೃತಿ ಭಾರತಿ, ಕರ್ನಾಟಕದ ವತಿಯಿಂದ ಫೆ.1 ಮತ್ತು 2ರಂದು ರಾಜ್ಯ ಮಟ್ಟದ ಸಂಸ್ಕೃತ ಕಾವೇರಿ–2025 ಸಂಸ್ಕೃತ ಸಮ್ಮೇಳನವನ್ನು ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಏರ್ಪಡಿಸಲಾಗಿದೆ. ಈ ಸಮ್ಮೇಳನದಲ್ಲಿ ಸುಮಾರು 1000 ಮಂದಿ ಆಯ್ದ ಸಂಸ್ಕೃತ ಕಾರ್ಯಕರ್ತರು ಆಗಮಿಸಲಿದ್ದಾರೆ.

ಸಮ್ಮೇಳನದ ಯಶಸ್ಸಿಗೆ ಮೈಸೂರಿನ ನಾಗರಿಕ ಗಣ್ಯರನ್ನೊಳಗೊಂಡ ಸ್ವಾಗತ ಸಮಿತಿ ರಚಿಸಲಾಗಿದ್ದು, ಗೌರವ ಪೋಷಕರಾಗಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದ ಸ್ವಾಮೀಜಿ, ಶ್ರೀ ಶರಚ್ಚಂದ್ರ ಸ್ವಾಮೀಜಿ ಇರುತ್ತಾರೆ. ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಗೌರವಾಧ್ಯಕ್ಷರು, ವಾಸುದೇವಭಟ್ ಪೋಷಕರು, ಅಧ್ಯಕ್ಷರಾಗಿ ಶಾಸಕ ಟಿ.ಎಸ್.ಶ್ರೀವತ್ಸ, ಉಪಾಧ್ಯಕ್ಷರಾಗಿ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಇನ್ನಿತರರು ಉಪಸ್ಥಿತರಿರಲಿದ್ದಾರೆ.

ಪ್ರತ್ಯೇಕ ಪ್ರಕರಣಗಳಲ್ಲಿ ಎರಡು ಚಿರತೆ ಸಾವು

ಇವುಗಳ ಸಾವಿಗೆ ಕಾರಣರಾದವರ ಬಂಧನಕ್ಕೆ ಆಗ್ರಹ



ಉರುಳಿಗೆ ಸಿಲುಕಿ ಸಾವನ್ನಪ್ಪಿದ ಚಿರತೆ



ವಿಷಪ್ರಾಶನವಾದ ಸತ್ತಕೋಳಿ ಸೇವಿಸಿ ಮೃತಪಟ್ಟ ಚಿರತೆ.

ಮೈಸೂರು, ಜ.19– ಬೇಟೆಯ ಉರುಳು ಹಾಗೂ ವಿಷಯುಕ್ತ ಕೋಳಿ ಸೇವನೆಯಿಂದ ಎರಡು ಹೆಣ್ಣು ಚಿರತೆಗಳು ಸಾವನ್ನಪ್ಪಿರುವ ಪ್ರತ್ಯೇಕ ಘಟನೆಗಳು ತಡವಾಗಿ ಬೆಳಕಿಗೆ ಬಂದಿದ್ದು, ಈ ಸಂಬಂಧ ಪಶುವೈದ್ಯ ಸೇರಿ ನಾಲ್ವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಕಳೆದ 2024ರ ನವೆಂಬರ್ ಹಾಗೂ ಡಿಸೆಂಬರ್‌ನಲ್ಲಿ ಚಿರತೆಗಳ ಸಾವು ಸಂಭವಿಸಿದ್ದು, ಎಫ್‌ಐಆರ್ ದಾಖಲಿಸಿಕೊಂಡಿರುವ ಅರಣ್ಯ ಇಲಾಖೆ ಅಧಿಕಾರಿಗಳು ಆರೋಪಿಗಳ ಬಂಧಿಸುವಲ್ಲಿ ಮೀನಾಮೇಷ ಎಣಿಸುತ್ತಿದ್ದಾರೆ ಎಂದು ವನ್ಯಜೀವಿ ಪ್ರೇಮಿಗಳು ಆರೋಪಿಸಿದ್ದಾರೆ.

ಪ್ರಕರಣ 1: ಮಂಡಕಳ್ಳಿ ಬಳಿ ಜಮೀನಿನಲ್ಲಿ ನ.22ರಂದು ಕಾಡುಹಂದಿ ಬೇಟೆಗೆ ಹಾಕಿದ್ದ ಉರುಳಿಗೆ ಸಿಲುಕಿದ್ದ ಚಿರತೆ ಗಂಭೀರವಾಗಿ ಗಾಯಗೊಂಡಿತ್ತು. ವಿಷಯ ತಿಳಿದ ಮೈಸೂರು ಅರಣ್ಯ ವಲಯ ಅಧಿಕಾರಿಗಳು ಚಿರತೆಯನ್ನು ಉರುಳಿನಿಂದ ಬಿಡಿಸಿ, ಕೂರ್ಗಳ್ಳಿ ಪುನರ್ವಸತಿ ಕೇಂದ್ರದಲ್ಲಿ ಚಿಕಿತ್ಸೆ ಕೊಡಿಸಿದ್ದರು. ಆದರೆ ಉರುಳಿಗೆ ಸಿಲುಕಿ ಒದ್ದಾಡಿ ತೀವ್ರವಾಗಿ ಗಾಯಗೊಂಡಿದ್ದರಿಂದ ಚಿಕಿತ್ಸೆ ಫಲಕಾರಿಯಾಗದೆ ಎರಡು ದಿನಗಳ ಬಳಿಕ ಚಿರತೆ ಸಾವನ್ನಪ್ಪಿತು. ಬಳಿಕ ಇದಕ್ಕೆ ಕಾರಣರಾದ ನಾಗೇಂದ್ರ, ರಾಘವೇಂದ್ರ ಹಾಗೂ ಕೃಷ್ಣಯ್ಯ ವಿರುದ್ಧ ಅರಣ್ಯ ಇಲಾಖೆ ಅಧಿಕಾರಿಗಳು ಎಫ್‌ಐಆರ್ ದಾಖಲಿಸಿದ್ದರು.

ಪ್ರಕರಣ 2: ಉದ್ಬೂರು ಸಮೀಪ ಜಮೀನಿನಲ್ಲಿ ಡಿ.12ರಂದು ಚಿರತೆಯ ಕಳೇಬರ ಪತ್ತೆಯಾಗಿತ್ತು. ಪರಿಶೀಲನೆ ನಡೆಸಿದ್ದ ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆ ಸಾವಿಗೆ ಕಾರಣ ತಿಳಿಯಲು ಶ್ವಾನದ ನೆರವಿನೊಂದಿಗೆ ಕಾರ್ಯಾಚರಣೆ ನಡೆಸಿದಾಗ ಅಚ್ಚರಿ ಕಾದಿತ್ತು. ಚಿರತೆ ಕಳೇಬರ ಪತ್ತೆಯಾದ ಸ್ಥಳದಿಂದ ಸುಮಾರು 200 ಮೀಟರ್ ದೂರದಲ್ಲಿರುವ ಕೋಳಿ ಫಾರಂ ಬಳಿ ಶ್ವಾನ ಕರೆದೊಯ್ದಿತ್ತು. ಅಲ್ಲಿ ದೊರೆತ ವಿಷದ ಬಾಟಲಿ ಹಾಗೂ ಚಿರತೆ ಪೋಸ್ಟ್‌ಮಾರ್ಟಂ ವರದಿಯಲ್ಲಿ ಉಲ್ಲೇಖವಾಗಿದ್ದ ವಿಷಕ್ಕೆ ಹೊಂದಿಕೆಯಾಗಿತ್ತು. ತನಿಖೆ ಮುಂದುವರೆಸಿದಾಗ ಕೋಳಿಫಾರಂ ಮಾಲೀಕರು ವಿಷಪ್ರಾಶನ ಮಾಡಿದ್ದ ಸತ್ತಕೋಳಿ ಸೇವಿಸಿ ಚಿರತೆ ಸಾವನ್ನಪ್ಪಿರುವುದಾಗಿ ತಿಳಿದುಬಂದಿತ್ತು. ಈ ಸಂಬಂಧ ಕೋಳಿಫಾರಂ ನಡೆಸುತ್ತಿದ್ದ ಪಶುವೈದ್ಯ ಮೃತ್ಯುಂಜಯ ಹಾಗೂ ಜಮೀನು ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಲಾಯಿತು.

ಏಕೆ ಬಂಧಿಸಿಲ್ಲ?: ಎಫ್‌ಐಆರ್ ದಾಖಲಾಗಿ ತಿಂಗಳುಗಳೇ ಕಳೆದರೂ ಆರೋಪಿಗಳನ್ನು ಬಂಧಿಸಿಲ್ಲ ಎಂದು ವನ್ಯಜೀವಿ ಪ್ರೇಮಿಗಳು ಆರೋಪಿಸಿದ್ದಾರೆ. ಸಣ್ಣ–ಪುಟ್ಟ ಪ್ರಕರಣಗಳಲ್ಲಿ ಕಾಡಂಚಿನ ಗ್ರಾಮದವರು ಸಿಕ್ಕಿಬಿದ್ದರೆ ತಕ್ಷಣವೇ ಅವರನ್ನು ಬಂಧಿಸುವ ಅರಣ್ಯ ಇಲಾಖೆ ಅಧಿಕಾರಿಗಳು, ಈ ಗಂಭೀರ ಪ್ರಕರಣಗಳನ್ನು ನಿರ್ಲಕ್ಷಿಸಿದ್ದಾರೆ. ಚಿರತೆಗಳ ಸಾವಿಗೆ ಕಾರಣರಾದವರ ರಕ್ಷಣೆಗೆ ಈ ರೀತಿ ವಿಳಂಬ ಧೋರಣೆ ತಾಳಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಆರೋಪ ನಿರಾಕರಣೆ: ಆದರೆ ಈ ಆರೋಪವನ್ನು ಅರಣ್ಯ ಇಲಾಖೆ ಅಧಿಕಾರಿಗಳು ನಿರಾಕರಿಸಿದ್ದಾರೆ. ಈ ಎರಡೂ ಘಟನೆಗಳನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆ. ಚಿರತೆಗಳ ಸಾವನ್ನಪ್ಪಿದ ವಿಷಯ ತಿಳಿದ ಕೂಡಲೇ ಪರಿಶೀಲನೆ ನಡೆಸಿ, ಸಂಬಂಧಪಟ್ಟವರ ವಿರುದ್ಧ ಪ್ರಕರಣ ದಾಖಲಿಸಿದ್ದೇವೆ. ಇದರಲ್ಲಿ ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ. ನಿಯಮಾನುಸಾರ ನಾವು ಕ್ರಮ ವಹಿಸಿದ್ದೇವೆ ಎಂದು ಡಿಸಿಎಫ್ ಡಾ. ಕೆ.ಎನ್.ಬಸವರಾಜು ಸ್ಪಷ್ಟಪಡಿಸಿದ್ದಾರೆ.

ಯಾರದೋ ಬೇಜವಾಬ್ದಾರಿಗೆ ಈ ಜಲ್ಲಿಕಲ್ಲು ಜೀವ ತೆಗೆದೀತು ಜೋಕೆ...!

ಸುರಕ್ಷತಾ ಕ್ರಮಗಳಿಲ್ಲದೇ ಕಟ್ಟಡ ನಿರ್ಮಾಣ ಸಾಮಗ್ರಿ ಸಾಗಣೆ; ಪೊಲೀಸರ ನಿರ್ಲಕ್ಷ್ಯಕ್ಕೆ ಸಾಕ್ಷಿ



ಮಂಚೇಗೌಡನಕೊಪ್ಪಲು ಸಮೀಪ ಡಾ.ಎಂ.ಹೆಚ್.ಅಂಬರೀಶ್ ರಸ್ತೆಯಲ್ಲಿ ಟಿಪ್ಪರ್‌ನಲ್ಲಿ ಸಾಗಿಸುತ್ತಿದ್ದಾಗ ಸುರಿದಿರುವ ಜಲ್ಲಿಕಲ್ಲು.



ಮೈಸೂರಿನ ವಿಜಯನಗರದ ಡಾ.ಎಂ.ಹೆಚ್.ಅಂಬರೀಶ್ ರಸ್ತೆಯಲ್ಲಿ ಇಟ್ಟಿಗೆಗಳನ್ನು ಟಾರ್ಪಾಲ್‌ನಿಂದ ಮುಚ್ಚದೇ ಟ್ರ್ಯಾಕ್ಟರ್‌ನಲ್ಲಿ ಸಾಗಿಸುತ್ತಿರುವುದು.

ಮೈಸೂರು,ಜ.19(ಪಿಎಂ)– ಜಲ್ಲಿಕಲ್ಲು ಜೀವ ತೆಗೆದೀತು ಜೋಕೆ...! ಹೌದು, ಮೈಸೂರು ನಗರದಲ್ಲಿ ಜಲ್ಲಿಕಲ್ಲು ಸಾಗಣೆ ವೇಳೆ ಅಸುರಕ್ಷತೆ ಹಾಗೂ ಅಪಾಯ ಎದ್ದು ಕಾಣುತ್ತಿದೆ. ದ್ವಿಚಕ್ರ ವಾಹನ ಸವಾರರು ಜಾಗರೂಕತೆ ಮರೆತು ಸಾಗಿದರೆ ರಸ್ತೆಯಲ್ಲಿ ಚೆಲ್ಲಾಪಿಲ್ಲಿಯಾಗಿ ಹರಡಿರುವ ಜಲ್ಲಿಕಲ್ಲುಗಳು ಅವರ ಪ್ರಾಣಕ್ಕೇ ಕುತ್ತು ತರಲಿವೆ.

ಟಿಪ್ಪರ್, ಲಾರಿ ಹಾಗೂ ಟ್ರ್ಯಾಕ್ಟರ್ ಮೊದಲಾದ ವಾಹನಗಳಲ್ಲಿ ಜಲ್ಲಿಕಲ್ಲನ್ನು ಸಾಗಿಸುವಾಗ ಸುರಕ್ಷತೆಯನ್ನೇ ಮರೆತು ಸಾಗುವುದು ನಗರದಲ್ಲಿ ಬಹುತೇಕ ಸಾಮಾನ್ಯವಾಗಿದೆ. ಓವರ್‌ಲೋಡ್ ಮಾಡುತ್ತಿರುವುದೂ ಅಲ್ಲದೆ, ಸೂಕ್ತ ರೀತಿಯಲ್ಲಿ ಟಾರ್ಪಾಲ್ ಮುಚ್ಚದೆ ಸಾಗಾಟ ಮಾಡಲಾಗುತ್ತಿದೆ.

ಇಂತಹ ನಿರ್ಲಕ್ಷ್ಯದ ಪರಿಣಾಮ ಬ್ರೇಕ್ ಹಾಕಿದಾಗ, ಹಂಪ್‌ನಲ್ಲಿ ಸಾಗುವಾಗ, ಕಡಿದಾದ ಸ್ಥಳದಲ್ಲಿ ಜಲ್ಲಿಕಲ್ಲು ರಸ್ತೆಯಲ್ಲಿ ಸುರಿಯುತ್ತಿದೆ. ಮೈಸೂರಿನ ಹಲವು ರಸ್ತೆಗಳಲ್ಲಿ ಈ ರೀತಿ ಜಲ್ಲಿ ರಾಶಿ ಬಿದ್ದಿರುವುದು ಸಾಮಾನ್ಯವಾಗಿದೆ. ಇದರ ಮೇಲೆ ದ್ವಿಚಕ್ರ ವಾಹನ ಸವಾರರು ಸಾಗಿದರೆ ಸ್ಕಿಡ್ ಆಗಿ ಬಿದ್ದು ಗಾಯಗೊಳ್ಳುವ ಇಲ್ಲವೇ ದುರದೃಷ್ಟವಶಾತ್ ಪ್ರಾಣವನ್ನೇ ಕಳೆದುಕೊಳ್ಳುವ ಅಪಾಯ ಎದುರಾಗಿದೆ.



ಇನ್ಫೋಸಿಸ್ ಸಮೀಪದ ರಸ್ತೆಯೊಂದರಲ್ಲಿ ಟಾರ್ಪಾಲ್ ಮುಚ್ಚದೇ ಟ್ರ್ಯಾಕ್ಟರ್‌ನಲ್ಲಿ ಎಂಸ್ಯಾಂಡ್ ಸಾಗಿಸುತ್ತಿರುವುದನ್ನು ಕಾಣಬಹುದು.

ಹೀಗೆ ಅಸುರಕ್ಷತೆಯಿಂದ ಜಲ್ಲಿಕಲ್ಲು ಸಾಗಿಸುವ ವೇಳೆ ರಸ್ತೆಯ ಅಲ್ಲಲ್ಲಿ ಅವು ಸುರಿಯುವುದರಿಂದ ನಾಗರಿಕರ ವಾಹನಗಳು ಅವುಗಳ ಮೇಲೆಯೇ ಸಾಗುವುದು ಅನಿವಾರ್ಯ. ಇಂತಹ ಸಂದರ್ಭದಲ್ಲಿ ವಾಹನಗಳ ಟೈರ್‌ಗಳ ತುದಿಗೆ ಜಲ್ಲಿಕಲ್ಲು ಸಿಲುಕಿ ರಭಸವಾಗಿ ರಸ್ತೆಯ ಬದಿಗೆ ಅಪ್ಪಳಿಸುವುದೂ ಉಂಟು. ಅವುಗಳು ಪಾದಚಾರಿಗಳು ಇಲ್ಲವೇ ಇನ್ನಿತರ ವಾಹನ ಸವಾರರಿಗೆ ತಗುಲಿದರೆ ಸಂಭವಿಸುವ ಅನಾಹುತಕ್ಕೆ ಹೊಣೆ ಯಾರು? ಎಂಬ ಪ್ರಶ್ನೆ ನಾಗರಿಕರದ್ದಾಗಿದೆ.

> “ಜಲ್ಲಿಕಲ್ಲು, ಇಟ್ಟಿಗೆ ಮತ್ತು ಎಂ ಸ್ಯಾಂಡ್ ದೂಳು ಗಾಳಿಯಲ್ಲಿ ತೇಲಿ ಬಂದು ಹಿಂಬದಿ ವಾಹನ ಸವಾರರ ಕಣ್ಣಿಗೆ ಬೀಳುತ್ತಿದ್ದು, ವಿಶೇಷವಾಗಿ ದ್ವಿಚಕ್ರ ವಾಹನ ಸವಾರರು ಇದರ ದುಷ್ಪರಿಣಾಮ ಎದುರಿಸುವುದು ನಿತ್ಯ ಸಾಮಾನ್ಯ ಎನ್ನುವಂತಾಗಿದೆ. ಪಾದಚಾರಿಗಳೂ ಇದೇ ಕಿರಿಕಿರಿ ಅನುಭವಿಸುತ್ತಿದ್ದಾರೆ. ಅಸುರಕ್ಷಿತವಾಗಿ ರಸ್ತೆಗಳಲ್ಲಿ ಚಲಿಸುವ ಇಂತಹ ವಾಹನಗಳ ವಿರುದ್ಧ ಕ್ರಮ ವಹಿಸದೇ ಇದ್ದಲ್ಲಿ ಇನ್ನಿತರ ವಾಹನ ಸವಾರರು ತಮ್ಮದಲ್ಲದ ತಪ್ಪಿಗೆ ಪ್ರಾಣವನ್ನೇ ಕಳೆದುಕೊಳ್ಳುವ ಅಪಾಯ ಇದ್ದೇ ಇದೆ. ಸಾರಿಗೆ ಇಲಾಖೆ, ಸಂಚಾರ ಪೊಲೀಸರು ಇಂತಹ ನಿರ್ಲಕ್ಷ್ಯ ಪ್ರವೃತ್ತಿಗೆ ಕಡಿವಾಣ ಹಾಕಲು ಇದುವರೆಗೆ ಮುಂದಾದಂತೆ ಕಾಣುತ್ತಿಲ್ಲ. ಹಾಗಾಗಿ ಹಲವು ಸರಕು ಸಾಗಾಣಿಕೆ ವಾಹನಗಳು ಸುರಕ್ಷತೆ ಬಗ್ಗೆಯೇ ಎಚ್ಚರ ವಹಿಸದೇ ಸಂಚಾರ ಮಾಡುತ್ತಿವೆ. ಇನ್ನಾದರೂ ಸಂಬಂಧಿಸಿದ ಇಲಾಖೆಗಳು ಇದನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ವಹಿಸುವರೇ ಕಾದು ನೋಡಬೇಕಿದೆ.

ಜಲ್ಲಿಕಲ್ಲು ಮಾತ್ರವಲ್ಲ, ಕಾಂಕ್ರಿಟ್ ಮಿಕ್ಸರ್, ಎಂ ಸ್ಯಾಂಡ್, ಇಟ್ಟಿಗೆ ಸೇರಿದಂತೆ ವಿವಿಧ ಕಟ್ಟಡ ನಿರ್ಮಾಣ ಸಾಮಗ್ರಿ ಸಾಗಣೆ ಮಾಡುವ ಟಿಪ್ಪರ್, ಲಾರಿ ಮತ್ತು ಟ್ರ್ಯಾಕ್ಟರ್‌ಗಳಲ್ಲಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದೇ ಇರುವುದು ಕಣ್ಣಿಗೆ ರಾಚುತ್ತಿದೆ. ಪರಿಣಾಮ ನಾಗರಿಕರು ಕಿರಿಕಿರಿ ಅನುಭವಿಸುವ ಸನ್ನಿವೇಶ ಮೈಸೂರಿನಲ್ಲಿ ಸಾಮಾನ್ಯವಾಗಿದೆ. ಕಟ್ಟಡ ನಿರ್ಮಾಣಕ್ಕೆ ಅಗತ್ಯವಾದ ಸರಕು ಪೂರೈಸುವ ವಾಹನಗಳು ನಿತ್ಯ ನಗರದಲ್ಲಿ ಸಂಚರಿಸುವುದನ್ನು ಕಾಣಬಹುದು. ಆದರೆ ಇಂತಹ ಬಹುತೇಕ ವಾಹನಗಳಲ್ಲಿ ಸುರಕ್ಷತಾ ಕ್ರಮಕ್ಕೆ ಆದ್ಯತೆಯೇ ಇಲ್ಲವಾಗಿದೆ. ಟಾರ್ಪಾಲ್ ಮುಚ್ಚದೇ ಜಲ್ಲಿಕಲ್ಲು, ಇಟ್ಟಿಗೆ ಮತ್ತು ಎಂ ಸ್ಯಾಂಡ್ ಸಾಗಿಸುವ ಕಾರಣ ಹಿಂಬದಿ ವಾಹನ ಸವಾರರು ಆತಂಕದಲ್ಲೇ ಸಾಗಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

ಅಂಬೇಡ್ಕರ್ ಭವನ ಕಾಮಗಾರಿ ಪೂರ್ಣಗೊಳಿಸಲು ಒತ್ತಾಯಿಸಿ ಎಎಪಿ ಪ್ರತಿಭಟನೆ



ಡಾ.ಅಂಬೇಡ್ಕರ್ ಭವನ ಕಾಮಗಾರಿ ಪೂರ್ಣಗೊಳಿಸುವಂತೆ ಒತ್ತಾಯಿಸಿ ಮೈಸೂರಿನ ಅಂಬೇಡ್ಕರ್ ಭವನದ ಮುಂದೆ ಎಎಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು,ಜ.19(ಎಂಟಿವೈ)– ಸ್ಥಗಿತಗೊಂಡಿರುವ ಡಾ.ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಒತ್ತಾಯಿಸಿ ಆಮ್ ಆದ್ಮಿ ಪಾರ್ಟಿ ಜಿಲ್ಲಾ ಘಟಕದ ವತಿಯಿಂದ ಪ್ರತಿಭಟನೆ ನಡೆಯಿತು. “ದಿವಾನ್ಸ್ ರಸ್ತೆಯಲ್ಲಿರುವ ಅಂಬೇಡ್ಕರ್ ಭವನದ ಎದುರು ಸಮಾವೇಶಗೊಂಡ ಕಾರ್ಯಕರ್ತರು ಸರ್ಕಾರ ಮತ್ತು ಜನಪ್ರತಿನಿಧಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕಳೆದ 8 ವರ್ಷಗಳಿಂದ ಕಾಮಗಾರಿ ಸ್ಥಗಿತಗೊಂಡಿದೆ. ಭಾಷಣಕ್ಕೆ ಮತ ಗಳಿಕೆಗೆ ಮಾತ್ರ ಅಂಬೇಡ್ಕರ್ ಬೇಕು. ಅವರ ಹೆಸರಿನಲ್ಲಿ ಭವನ ನಿರ್ಮಿಸಿ, ಕಸ ಕಡ್ಡಿಗಳನ್ನು ಹಾಕಲು ಖಾಲಿ ಬಿಡಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರಿಗೆ ಒಮ್ಮೆಯಾದರೂ ಭವನಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲು ಸಮಯವೇ ಸಿಕ್ಕಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಾಣ ಕುರುಡುತನ ಪ್ರದರ್ಶಿಸುತ್ತಿದ್ದಾರೆ. ಈಗಲಾದರೂ ಸರ್ಕಾರ ಎಚ್ಚೆತ್ತುಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಎಎಪಿ ಜಿಲ್ಲಾಧ್ಯಕ್ಷ ರಂಗಯ್ಯ, ಸಂಘಟನ ಕಾರ್ಯದರ್ಶಿ ವಿಶ್ವನಾಥ ಕುಲಕರ್ಣಿ, ನಗರ ಘಟಕದ ಅಧ್ಯಕ್ಷ ಸೋಮಶೇಖರ್, ಯುವ ಘಟಕದ ಅಧ್ಯಕ್ಷ ಅನಂತರಾಜ್ ಸೂರ್ಯ, ಉಷಾ ಸಂಪತ್‌ಕುಮಾರ್ ಪಾಲ್ಗೊಂಡಿದ್ದರು.

ಕೆ.ಪಿ.ನಾಗರಾಜ್‌ಗೆ ರಾಜ್ಯ ಪ್ರಶಸ್ತಿ



ತುಮಕೂರಿನಲ್ಲಿ ನಡೆದ 39ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಮೈಸೂರಿನ ಪಬ್ಲಿಕ್ ಟಿವಿ ಹಿರಿಯ ವರದಿಗಾರ ಕೆ.ಪಿ.ನಾಗರಾಜ್ ಅವರಿಗೆ ವಿದ್ಯುನ್ಮಾನ ವಿಭಾಗದಲ್ಲಿ ಸಾಮಾಜಿಕ–ಮಾನವೀಯ ವರದಿಗೆ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಶಿವಾನಂದ್ ತಗಡೂರು ಪ್ರಶಸ್ತಿ ಪ್ರದಾನ ಮಾಡಿದರು.

ಮಹಾ ಕುಂಭಮೇಳ ವೈವಿಧ್ಯತೆಯಲ್ಲಿ ಏಕತೆಯ ಹಬ್ಬ

ವರ್ಷದ ಮೊದಲ ಮನ್ ಕೀ ಬಾತ್‌ನಲ್ಲಿ ಪ್ರಧಾನಿ ಮೋದಿ

ನವದೆಹಲಿ, ಜ.19– 2025ನೇ ಇಸವಿಯಲ್ಲಿ ತಮ್ಮ ರೇಡಿಯೊ ಕಾರ್ಯಕ್ರಮ ಮನ್ ಕೀ ಬಾತ್‌ನಲ್ಲಿ ಮೊದಲ ಬಾರಿಗೆ ಪ್ರಧಾನಿ ನರೇಂದ್ರ ಮೋದಿ ಕುಂಭ ಮೇಳವನ್ನು 'ವೈವಿಧ್ಯತೆಯಲ್ಲಿ ಏಕತೆ'ಯ ಹಬ್ಬ ಎಂದು ಕರೆದಿದ್ದಾರೆ. ಪ್ರಯಾಗ್‌ರಾಜ್‌ನಲ್ಲಿ ಮಹಾ ಕುಂಭ ಮೇಳ ಆರಂಭವಾಗಿದೆ. ಶತಮಾನದ ಮರೆಯಲಾಗದ ಮಾನವೀಯತೆಯ ಸಮುದ್ರ ಅದ್ಭುತ ದೃಶ್ಯಗಳು, ಸಮಾನತೆ ಮತ್ತು ಸಾಮರಸ್ಯದ ಅಸಾಧಾರಣ ಸಂಗಮ. ಈ ಬಾರಿ, ಕುಂಭಮೇಳದಲ್ಲಿ ಅನೇಕ ದೈವಿಕ ಜೋಡಣೆಗಳು ಸಹ ಸಂಗಮಿಸುತ್ತಿವೆ. ಈ ಕುಂಭ ಮೇಳ ಹಬ್ಬವು ವೈವಿಧ್ಯತೆಯಲ್ಲಿ ಏಕತೆಯ ಹಬ್ಬವನ್ನು ಆಚರಿಸುತ್ತದೆ ಎಂದು ಹೇಳಿದರು.

ನಮ್ಮ ಸಂಪ್ರದಾಯಗಳು ಇಡೀ ಭಾರತವನ್ನು ಹೇಗೆ ಒಟ್ಟಿಗೆ ಬಂಧಿಸುತ್ತವೆ ಎಂಬುದನ್ನು ಕುಂಭ ಮೇಳ ಕಾರ್ಯಕ್ರಮವು ನಮಗೆ ಹೇಳುತ್ತದೆ. ನಂಬಿಕೆಗಳನ್ನು ಪಾಲಿಸುವ ವಿಧಾನಗಳು ಉತ್ತರದಿಂದ ದಕ್ಷಿಣಕ್ಕೆ ಒಂದೇ ಆಗಿರುತ್ತವೆ. ಒಂದೆಡೆ, ಪ್ರಯಾಗ್ ರಾಜ್, ಉಜ್ಜಯಿನಿ, ನಾಸಿಕ್ ಮತ್ತು ಹರಿದ್ವಾರದಲ್ಲಿ ಕುಂಭಮೇಳವನ್ನು ಆಯೋಜಿಸಲಾಗಿದೆ; ಮತ್ತೊಂದೆಡೆ, ದಕ್ಷಿಣ ಭಾಗದಲ್ಲಿ, ಗೋದಾವರಿ, ಕೃಷ್ಣ, ನರ್ಮದಾ ಮತ್ತು ಕಾವೇರಿ ನದಿಗಳ ದಡದಲ್ಲಿ ಪುಷ್ಕರವನ್ನು ಆಯೋಜಿಸಲಾಗಿದೆ ಎಂದರು.



ಈ ಬಾರಿ ಕುಂಭಮೇಳದ ಆಯೋಜನೆಯಲ್ಲಿ ವ್ಯಾಪಕವಾಗಿ ಡಿಜಿಟಲ್ ಬಳಕೆಯಾಗಿದೆ ಎಂದರು. ಈ ಬಾರಿ ನಾವು ಕುಂಭಮೇಳದಲ್ಲಿ ಡಿಜಿಟಲ್ ಹೆಜ್ಜೆಗುರುತುಗಳನ್ನು ಇಷ್ಟು ದೊಡ್ಡ ಪ್ರಮಾಣದಲ್ಲಿ ವೀಕ್ಷಿಸುತ್ತಿದ್ದೇವೆ. ಕುಂಭಮೇಳದ ಈ ಜಾಗತಿಕ ಜನಪ್ರಿಯತೆ ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆಯ ವಿಷಯವಾಗಿದೆ ಎಂದರು.

ಗಣರಾಜ್ಯೋತ್ಸವ: ನಾನು ದೇಶವಾಸಿಗಳಿಗೆ ಮುಂಚಿತವಾಗಿಯೇ ಗಣರಾಜ್ಯೋತ್ಸವದ ಶುಭಾಶಯಗಳನ್ನು ಕೋರುತ್ತೇನೆ ಎಂದ ಮೋದಿ, ಈ ಗಣರಾಜ್ಯೋತ್ಸವವು ಬಹಳ ವಿಶೇಷವಾಗಿದೆ. ಇದು ಭಾರತ ಗಣರಾಜ್ಯದ 75 ನೇ ವಾರ್ಷಿಕೋತ್ಸವ. ಈ ವರ್ಷ ಭಾರತದ ಸಂವಿಧಾನದ ಅನುಷ್ಠಾನದ 75 ವರ್ಷಗಳನ್ನು ಸೂಚಿಸುತ್ತದೆ. ನಮ್ಮ ಪವಿತ್ರ ಸಂವಿಧಾನವನ್ನು ನಮಗೆ ನೀಡಿದ ಸಂವಿಧಾನ ಸಭೆಯ ಎಲ್ಲಾ ಮಹಾನ್ ವ್ಯಕ್ತಿಗಳಿಗೆ ನಾನು ನಮಸ್ಕರಿಸುತ್ತೇನೆ ಎಂದು ಹೇಳಿದರು.

ಭಾರತದ ಸಂವಿಧಾನ ರಚನಾ ಸಭೆಗೆ ಸಂಬಂಧಿಸಿದ ಮಹಾನ್ ನಾಯಕರಾದ ಡಾ. ರಾಜೇಂದ್ರ ಪ್ರಸಾದ್, ಡಾ. ಬಿ.ಆರ್ ಅಂಬೇಡ್ಕರ್ ಹಾಗೂ ಶ್ಯಾಮ್ ಪ್ರಸಾದ್ ಮುಖರ್ಜಿಯವರ ಧ್ವನಿಯನ್ನು ಕೇಳಿಸಿ ದೇಶದ ಜನರು ಅವರಿಂದ ಸ್ಫೂರ್ತಿ ಪಡೆಯಬೇಕು ಎಂದು ಹೇಳಿದರು.

ಗಣರಾಜ್ಯೋತ್ಸವದ ಒಂದು ದಿನ ಮೊದಲು, ಜ.25 ರಾಷ್ಟ್ರೀಯ ಮತದಾರರ ದಿನ. ಈ ದಿನ ಭಾರತದ ಚುನಾವಣಾ ಆಯೋಗ ಸ್ಥಾಪನೆಯಾದ ಕಾರಣ ಈ ದಿನ ಮುಖ್ಯವಾಗಿದೆ. ನಮ್ಮ ಸಂವಿಧಾನ ನಿರ್ಮಿಸಿದವರು ಸಂವಿಧಾನದಲ್ಲಿ ನಮ್ಮ ಚುನಾವಣಾ ಆಯೋಗಕ್ಕೆ ಮತ್ತು ಪ್ರಜಾಪ್ರಭುತ್ವದಲ್ಲಿ ಜನರ ಭಾಗವಹಿಸುವಿಕೆಗೆ ಸಮಾನವಾಗಿ ಪ್ರಮುಖ ಸ್ಥಾನವನ್ನು ನೀಡಿದ್ದಾರೆ ಎಂದರು.

ನಮ್ಮ ಮತದಾನ ಪ್ರಕ್ರಿಯೆಯನ್ನು ಕಾಲಕಾಲಕ್ಕೆ ಆಧುನೀಕರಿಸಿ ಬಲಪಡಿಸಿದ ಚುನಾವಣಾ ಆಯೋಗಕ್ಕೂ ನಾನು ಧನ್ಯವಾದ ಹೇಳಲು ಬಯಸುತ್ತೇನೆ. ಜನರ ಶಕ್ತಿಗೆ ಹೆಚ್ಚಿನ ಶಕ್ತಿಯನ್ನು ನೀಡಲು ಆಯೋಗವು ತಂತ್ರಜ್ಞಾನದ ಶಕ್ತಿಯನ್ನು ಬಳಸಿದೆ ಎಂದು ಹೇಳಿದರು.

ಸುಭಾಷ್ ಚಂದ್ರ ಬೋಸ್‌ಗೆ ಗೌರವ ಸಲ್ಲಿಕೆ: ಜನವರಿ 23 ರಂದು 'ಪರಾಕ್ರಮ್ ದಿವಸ್' ಎಂದು ಆಚರಿಸಲಾಗುವ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಜನ್ಮ ದಿನಾಚರಣೆಗೆ ಮುಂಚಿತವಾಗಿ ಪ್ರಧಾನಿ ಮೋದಿ ಅವರನ್ನು ಸ್ಮರಿಸಿದರು. ಯುವಕರು ಅವರ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಮತ್ತು ಸ್ವಾತಂತ್ರ್ಯ ಹೋರಾಟಗಾರರಿಂದ ಸ್ಫೂರ್ತಿ ಪಡೆಯುವಂತೆ ಒತ್ತಾಯಿಸಿದರು.

ಈ ಕಥೆ ನಿಮಗೆ ಚಲನಚಿತ್ರ ದೃಶ್ಯದಂತೆ ಕಾಣಿಸಬಹುದು. ಅಂತಹ ಧೈರ್ಯವನ್ನು ಪ್ರದರ್ಶಿಸಲು ಈ ವ್ಯಕ್ತಿ ಎಂತಹ ಧೈರ್ಯವನ್ನು ಹೊಂದಿದ್ದಾನೆ ಎಂದು ನೀವು ಆಶ್ಚರ್ಯಪಡುತ್ತಿರಬಹುದು! ವಾಸ್ತವವಾಗಿ, ಈ ವ್ಯಕ್ತಿ ಬೇರೆ ಯಾರೂ ಅಲ್ಲ, ನಮ್ಮ ದೇಶದ ಮಹಾನ್ ವ್ಯಕ್ತಿತ್ವ, ನೇತಾಜಿ ಸುಭಾಷ್ ಚಂದ್ರ ಬೋಸ್. ನಾವು ಈಗ ಜನವರಿ 23 ರಂದು ಅವರ ಜನ್ಮ ವಾರ್ಷಿಕೋತ್ಸವವನ್ನು 'ಪರಾಕ್ರಮ ದಿವಸ್' ಎಂದು ಆಚರಿಸುತ್ತೇವೆ. ಅವರ ಶೌರ್ಯಕ್ಕೆ ಸಂಬಂಧಿಸಿದ ಈ ಕಥೆಯು ಅವರ ಪರಾಕ್ರಮದ ಒಂದು ನೋಟವನ್ನು ನೀಡುತ್ತದೆ' ಎಂದು ಪ್ರಧಾನಿ ಮೋದಿ ಹೇಳಿದರು.

ಇಡಿಯಿಂದ ಮುಟ್ಟುಗೋಲು ಆಗಿರುವ ನಿವೇಶನಗಳ ವಿವರ ಬಹಿರಂಗಕ್ಕೆ ಸ್ನೇಹಮಯಿ ಕೃಷ್ಣರಿಂದ ಮುಡಾ ಆಯುಕ್ತರಿಗೆ ಮನವಿ

ಮೈಸೂರು, ಜ.19(ಜಿಎ)–ಜಾರಿ ನಿರ್ದೇಶನಾಲಯ (ಇಡಿ) ಮುಟ್ಟುಗೋಲು ಹಾಕಿಕೊಂಡಿರುವ 142 ನಿವೇಶನಗಳ ವಿವರಗಳನ್ನು ಬಹಿರಂಗಪಡಿಸಬೇಕೆಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಆಯುಕ್ತರಿಗೆ ತಾವು ಮನವಿ ಮಾಡಿರುವುದಾಗಿ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಹೇಳಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಇಡಿಯಿಂದ ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿರುವ ನಿವೇಶನಗಳ ಸಂಪೂರ್ಣ ವಿವರ ಬಹಿರಂಗವಾಗದಿದ್ದರೆ ಅಮಾಯಕರಿಗೆ ಅನ್ಯಾಯವಾಗುತ್ತದೆ ಎಂಬ ಕಾರಣದಿಂದ ತಾವು ಈ ಮನವಿ ಸಲ್ಲಿಸಿರುವುದಾಗಿ ಹೇಳಿದ ಅವರು, ನಿವೇಶನಗಳ ವಿವರಗಳನ್ನು ಬಹಿರಂಗಪಡಿಸುವ ಮೂಲಕ ಅಮಾಯಕರು ಸಂಕಷ್ಟಕ್ಕೆ ಸಿಲುಕುವುದನ್ನು ತಡೆಯಬೇಕೆಂದು ಆಗ್ರಹಿಸಿದರು.

ಮುಡಾದಿಂದ ಅಕ್ರಮವಾಗಿ ನಿವೇಶನ ಪಡೆದಿರುವವರು ತಮ್ಮ ನಿವೇಶನಗಳು ಮುಡಾದಿಂದ ಮುಟ್ಟುಗೋಲು ಆಗುತ್ತಿದ್ದಂತೆಯೇ ಕಡಿಮೆ ದರಕ್ಕೆ ನಿವೇಶನಗಳನ್ನು ಮಾರಾಟ ಮಾಡುವ ಸಾಧ್ಯತೆ ಇದೆ. ಕಡಿಮೆ ಬೆಲೆಗೆ ಮುಡಾ ನಿವೇಶನ ಸಿಗುತ್ತದೆ ಎಂಬ ಕಾರಣದಿಂದ ಅಮಾಯಕರು ಅದನ್ನು ಖರೀದಿಸಿ ಅನ್ಯಾಯಕ್ಕೊಳಗಾಗುತ್ತಾರೆ. ಅದನ್ನು ತಪ್ಪಿಸುವ ಸಲುವಾಗಿ 142 ನಿವೇಶನಗಳ ಸಂಪೂರ್ಣ ವಿವರವನ್ನು ಮುಡಾ ಕಚೇರಿಯ ನೋಟಿಸ್ ಬೋರ್ಡ್‌ನಲ್ಲಿ ಪ್ರಕಟಿಸಬೇಕು ಹಾಗೂ ಮಾಧ್ಯಮಗಳಿಗೆ ಮಾಹಿತಿ ನೀಡಬೇಕೆಂದು ಮನವಿ ಮಾಡಿರುವುದಾಗಿ ಅವರು ಹೇಳಿದರು.

ಇಂಡಿಯನ್ ಸ್ಟೇಟ್ ಹೇಳಿಕೆ – ರಾಹುಲ್ ಗಾಂಧಿ ವಿರುದ್ಧ ಎಫ್‌ಐಆರ್

ನವದೆಹಲಿ, ಜ.19–ಕಾಂಗ್ರೆಸ್ ಪಕ್ಷವು ಈಗ ಆರ್‌ಎಸ್‌ಎಸ್, ಬಿಜೆಪಿ ಮತ್ತು ಭಾರತ ಸರ್ಕಾರದ (ಇಂಡಿಯನ್ ಸ್ಟೇಟ್) ವಿರುದ್ಧ ಹೋರಾಡುತ್ತಿದೆ ಎಂದು ಹೇಳಿದ್ದ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಗುವಾಹಟಿಯ ಗಾಂಧಿ ಬಸ್ತಿ ಪ್ರದೇಶದ ನಿವಾಸಿಯೊಬ್ಬರು ಪೊಲೀಸರಿಗೆ ದೂರು ನೀಡಿದ್ದಾರೆ. ರಾಹುಲ್ ಗಾಂಧಿ ಅವರ ಹೇಳಿಕೆಯು ದೇಶದ ಭದ್ರತೆಗೆ ಮತ್ತು ಸಾರ್ವಜನಿಕ ವ್ಯವಸ್ಥೆಗೆ ಗಂಭೀರ ಬೆದರಿಕೆ ಒಡ್ಡುತ್ತದೆ ಎಂದು ಆರೋಪಿಸಲಾಗಿದೆ.



ಅಲ್ಲದೇ ರಾಹುಲ್ ಗಾಂಧಿಯ ಹೇಳಿಕೆ ವಾಕ್ ಸ್ವಾತಂತ್ರ್ಯದ ಮಿತಿ ಮೀರಿದೆ. ಅವರ ಹೇಳಿಕೆ ರಾಷ್ಟ್ರೀಯ ಭದ್ರತೆಗೆ ಕಂಟಕ ತರುವಂತಿವೆ. ಅಶಾಂತಿ, ಪ್ರತ್ಯೇಕತಾವಾದದ ಭಾವನೆ ಮೂಡಿಸುತ್ತಿದೆ. ಕೂಡಲೇ ರಾಹುಲ್ ಗಾಂಧಿಯ ಹೇಳಿಕೆಗಳಿಗೆ ಕಡಿವಾಣ ಹಾಕಿ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ದೂರಿನ ಅನ್ವಯ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 152ರ ಅಡಿಯಲ್ಲಿ ಪ್ರಕರಣ ದಾಖಲಾಗಿದೆ. ಈ ಮಧ್ಯೆ ರಾಹುಲ್ ಗಾಂಧಿಗೆ ಚರಿತ್ರೆಯ ಬಗ್ಗೆ ಏನೂ ಗೊತ್ತಿಲ್ಲ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ವಾಗ್ದಾಳಿ ನಡೆಸಿದ್ದಾರೆ. ವಿಷಯಗಳನ್ನು ಅರ್ಥ ಮಾಡಿಕೊಳ್ಳದ ರಾಹುಲ್, ಯಾರೋ ಬರೆದುಕೊಟ್ಟ ಚೀಟಿಯನ್ನು ಹಿಡಿದು ಓದುತ್ತಿದ್ದಾರೆ ಎಂದು ಟೀಕಿಸಿದ್ದಾರೆ.

ಶಾಸಕರ ನೇತೃತ್ವದಲ್ಲಿ ತಾಲ್ಲೂಕು ಶಿಕ್ಷಣ ಸುಧಾರಣಾ ಸಮಿತಿ ರಚನೆ

ಬೆಂಗಳೂರು: ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ, ಹಾಜರಾತಿ, ಕಲಿಕೆ, ಮಾನವ ಸಂಪನ್ಮೂಲದ ಸಮರ್ಪಕ ಬಳಕೆ ಇತ್ಯಾದಿ ಅಂಶಗಳ ಕುರಿತು ಚರ್ಚಿಸಿ, ಸುಧಾರಣೆ ತರುವ ಉದ್ದೇಶದಿಂದ 'ತಾಲೂಕು ಮಟ್ಟದ ಶಿಕ್ಷಣ ಸುಧಾರಣಾ ಸಮಿತಿ ರಚಿಸಲು ಶಿಕ್ಷಣ ಇಲಾಖೆ ಮುಂದಾಗಿದೆ.

ಶಾಸಕರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರನ್ನು ಸಂಪರ್ಕಿಸಿ ಈ ಸಮಿತಿ ರಚಿಸಬೇಕು ಎಂದು ಎಲ್ಲ ಉಪ ನಿರ್ದೇಶಕರಿಗೆ (ಆಡಳಿತ) ಶಾಲಾ ಶಿಕ್ಷಣ ಇಲಾಖೆಯ ನಿರ್ದೇಶಕರು (ಪ್ರೌಢ ಶಿಕ್ಷಣ) ಸೂಚನೆ ನೀಡಿದ್ದಾರೆ. ಆಯಾ ತಾಲೂಕು ವ್ಯಾಪ್ತಿಯ ಶಾಸಕರು ಈ ಸಮಿತಿಯ ಅಧ್ಯಕ್ಷರಾಗಲಿದ್ದು, ಕ್ಷೇತ್ರ ಶಿಕ್ಷಣಾಧಿಕಾರಿ ಸದಸ್ಯ ಕಾರ್ಯದರ್ಶಿ ಆಗಿ ಇರಲಿದ್ದಾರೆ.

ತಹಶೀಲ್ದಾರ್, ತಾಲೂಕು ಕಾರ್ಯನಿರ್ವಹಣಾಧಿಕಾರಿ, ಪಂಚಾಯತ್‌ರಾಜ್ ಇಲಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್, ತಾಲ್ಲೂಕಿನಲ್ಲಿ ಅತೀ ಹೆಚ್ಚು ದಾಖಲಾತಿ ಇರುವ ಪ್ರೌಢಶಾಲೆ ಮತ್ತು ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರು, ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರು, ಡಯಟ್‌ನ ಹಿರಿಯ ಉಪನ್ಯಾಸಕರು (ಒಬ್ಬರು ತಾಲೂಕು ನೋಡಲ್ ಅಧಿಕಾರಿ), ತಾಲೂಕಿನಲ್ಲಿ ಹೆಚ್ಚಿನ ದಾಖಲಾತಿ ಇರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಎಸ್‌ಡಿಎಂ ಪ್ರತಿನಿಧಿಗಳು (ತಲಾ ಒಬ್ಬರು), ಸರ್ಕಾರ ನಾಮ ನಿರ್ದೇಶಿತ ಐವರು ಈ ಸಮಿತಿಯಲ್ಲಿ ಸದಸ್ಯರಾಗಿರುತ್ತಾರೆ.

ಸರ್ಕಾರ ನಾಮನಿರ್ದೇಶನ ಮಾಡುವ ಐವರಲ್ಲಿ ಒಬ್ಬರು ಪದವೀಧರರು, ಉಳಿದಂತೆ ಎಸ್‌ಸಿ/ ಎಸ್‌ಟಿ, ಮಹಿಳೆ, ಹಿಂದುಳಿದ ಮತ್ತು ಸಾಮಾನ್ಯ ಗುಂಪಿನ ಇಬ್ಬರು ಇರಬೇಕು ಎಂದೂ ಆದೇಶದಲ್ಲಿ ವಿವರಿಸಲಾಗಿದೆ.

ಸಮಿತಿಯ ಕಾರ್ಯಗಳೇನು?: ತಾಲೂಕಿನಲ್ಲಿ ಎಲ್ಲ ಅರ್ಹ ಮಕ್ಕಳ ಶಾಲಾ ದಾಖಲಾತಿ, ಹಾಜರಾತಿ ಮತ್ತು ಮಕ್ಕಳ ಕಲಿಕಾ ಮಟ್ಟವನ್ನು ವೃದ್ಧಿಸುವುದು, ಪ್ರಾಥಮಿಕ ಶಿಕ್ಷಣದಿಂದ ಪ್ರೌಢ ಶಿಕ್ಷಣದವರೆಗೆ ಶಾಲೆ ಬಿಟ್ಟು ಹೋಗುವಿಕೆ ಪ್ರಮಾಣವನ್ನು ಶೂನ್ಯಕ್ಕೆ ಇಳಿಸುವುದು, ಸರ್ಕಾರಿ ಶಾಲೆಯ ಅಭಿವೃದ್ಧಿಗೆ ಸಮುದಾಯದ ಪಾಲ್ಗೊಳ್ಳುವಿಕೆ, ಸಿಎಸ್‌ಆರ್ ಕಾರ್ಯಕ್ರಮದ ಮೂಲಕ ನೆರವು ಒದಗಿಸುವುದು ಈ ಸಮಿತಿಯ ಕಾರ್ಯವಾಗಿದೆ.

ಹಳೆ ಪಿಂಚಣಿ ವ್ಯವಸ್ಥೆ ಜಾರಿಗೆ ಹಕ್ಕೊತ್ತಾಯ ಧರಣಿ

ಬೆಂಗಳೂರು: ಹಳೆ ಪಿಂಚಣಿ ವ್ಯವಸ್ಥೆ (ಒಪಿಎಸ್) ಜಾರಿಗೆ ಒತ್ತಾಯಿಸಿ ಫೆ.7ರಿಂದ ಅಹೋರಾತ್ರಿ ಧರಣಿ ನಡೆಸುತ್ತೇವೆ ಎಂದು ಕರ್ನಾಟಕ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘದ ರಾಜ್ಯಾಧ್ಯಕ್ಷ ಶಾಂತಾರಾಮ ಅವರು ಹೇಳಿದ್ದಾರೆ.

ಒಪಿಎಸ್ ಮರುಜಾರಿ ಮಾಡುತ್ತೇವೆ ಎಂದು 2024ರ ಜನವರಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದ್ದರು. ಅಷ್ಟರಲ್ಲಿ ಕೇಂದ್ರ ಸರ್ಕಾರವು ಏಕೀಕೃತ ಪಿಂಚಣಿ ವ್ಯವಸ್ಥೆ (ಎನ್‌ಎಂಒಪಿಎಸ್) ಜಾರಿಗೆ ತಂದಿತು. ನಮ್ಮ ಸಂಘವು ಎನ್‌ಎಂಒಪಿಎಸ್ ಅನ್ನು ತಿರಸ್ಕರಿಸುತ್ತದೆ ಎಂದಿದ್ದಾರೆ. ಒಪಿಎಸ್ ಮರುಜಾರಿಯನ್ನು ಈ ಸಾಲಿನ ಬಜೆಟ್‌ನಲ್ಲಿ ಘೋಷಿಸಬೇಕು. ಇಲ್ಲದಿದ್ದಲ್ಲಿ ಒಪಿಎಸ್ ಹಕ್ಕೊತ್ತಾಯ ಧರಣಿ ನಡೆಸುತ್ತೇವೆ ಎಂದು ಪ್ರಧಾನ ಕಾರ್ಯದರ್ಶಿ ಸಿದ್ದಪ್ಪ ಸಂಗಣ್ಣನವರ ಹೇಳಿದ್ದಾರೆ.

ಜ.23ರಂದು ಮೈಸೂರಲ್ಲಿ ಕಲಾಕುಂಚದಿಂದ ಮಕ್ಕಳಿಗೆ ಉಚಿತ ಕಾರ್ಯಾಗಾರ

ಮೈಸೂರು, ಜ.19– ಮೈಸೂರಿನ ಹೂಟಗಳ್ಳಿ ಸರ್ಕಾರಿ ಪ್ರೌಢಶಾಲೆ ಮತ್ತು ದಾವಣಗೆರೆಯ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಜ.23 ರಂದು ಬೆಳಗ್ಗೆ 10.30 ಗಂಟೆಗೆ ಮೈಸೂರು ಜಿಲ್ಲೆಯ ಹೂಟಗಳ್ಳಿ ಸರ್ಕಾರಿ ಪ್ರೌಢಶಾಲೆಯ ಶಾರದಾ ಸಭಾಂಗಣದಲ್ಲಿ 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಪರೀಕ್ಷಾ ಪೂರ್ವ ಸಿದ್ಧತಾ ಉಚಿತ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆ ಅಧ್ಯಕ್ಷ ಕೆ.ಹೆಚ್. ಮಂಜುನಾಥ್ ತಿಳಿಸಿದ್ದಾರೆ.

ಸಮಾರಂಭದ ಉದ್ಘಾಟನೆಯನ್ನು ಮೈಸೂರಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಪ್ರಕಾಶ್ ನೆರವೇರಿಸಲಿದ್ದಾರೆ. ಅಧ್ಯಕ್ಷತೆಯನ್ನು ಜಿಲ್ಲಾ ಪಂಚಾಯಿತಿಯ ಶಾಲಾ ಶಿಕ್ಷಣ ಇಲಾಖೆಯ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸಂಗೀತಾ ಪಿ.ನಾಡಿಗ್ ವಹಿಸಿಕೊಳ್ಳಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮೈಸೂರು ಜಿಲ್ಲೆಯ ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಜಿಲ್ಲಾಧ್ಯಕ್ಷ ನಾಗರಾಜ್ ವಿ.ಬೈರಿ ಆಗಮಿಸಲಿದ್ದಾರೆ. ಕಲಾಕುಂಚದ ಪ್ರಧಾನ ಕಾರ್ಯದರ್ಶಿ ಕೆ.ಸಿ.ಉಮೇಶ್, ಸಮಿತಿ ಸದಸ್ಯರಾದ ಶ್ರೀಮತಿ ಶಿಲ್ಪಾ ಉಮೇಶ್ ವೇದಿಕೆಯಲ್ಲಿ ಉಪಸ್ಥಿತರಿರುತ್ತಾರೆ.

ಶೈಕ್ಷಣಿಕ ಕಾಳಜಿಯ ಈ ಕಾರ್ಯಕ್ರಮಕ್ಕೆ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು, ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಈ ಸಮಾರಂಭ ಯಶಸ್ವಿಗೊಳಿಸಬೇಕಾಗಿ ಕಲಾಕುಂಚ ಕಚೇರಿ ಕಾರ್ಯದರ್ಶಿ ಎಂ.ಎಸ್.ಪ್ರಸಾದ್ ವಿನಂತಿಸಿದ್ದಾರೆ.

8ನೇ ತರಗತಿ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು,ಜ.19– ಉಪನಿರ್ದೇಶಕರ ಕಾರ್ಯಾಲಯ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ವತಿಯಿಂದ ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಡೆಹರಾಡೂನ್‌ನಲ್ಲಿ 8 ನೇ ತರಗತಿಗಾಗಿ ಪ್ರವೇಶ ಬಯಸುವ ಕರ್ನಾಟಕ ರಾಜ್ಯದ ಬಾಲಕ ಮತ್ತು ಬಾಲಕಿಯರಿಗೆ ಪ್ರವೇಶಕ್ಕಾಗಿ ಅರ್ಹತಾ ಪ್ರವೇಶ ಪರೀಕ್ಷೆಯನ್ನು ಜೂ.1 ರಂದು ಬೆಂಗಳೂರು ಕೇಂದ್ರದಲ್ಲಿ ನಡೆಸಲಾಗುವುದು.

ಅರ್ಹ ಅಭ್ಯರ್ಥಿಗಳು ಯಾವುದೇ ಸರ್ಕಾರದಿಂದ ಮಾನ್ಯತೆ ಪಡೆದಿರುವ ಶಾಲೆಯಲ್ಲಿ 7ನೇ ತರಗತಿ ಓದುತ್ತಿರುವ ಅಥವಾ ಉತ್ತೀರ್ಣವಾಗಿರುವ 11 1/2 ವರ್ಷದಿಂದ 13 ವರ್ಷದೊಳಗಿರುವ (02–01–2013 ರಿಂದ 15–07–2014 ರೊಳಗೆ ಜನಿಸಿರುವ) ಬಾಲಕ ಬಾಲಕಿಯರು ಮಾರ್ಚ್ 31ರ ಒಳಗಾಗಿ ಅರ್ಜಿ ನಮೂನೆಯನ್ನು ದ್ವಿ ಪ್ರತಿಯಲ್ಲಿ ನಿರ್ದೇಶಕರು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಭವನ್, ನಂ. 58 ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ರಸ್ತೆ ಬೆಂಗಳೂರು 560025 ಇವರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ದೂ.ಸಂಖ್ಯೆ 080–25589459 ಅಥವಾ ಸಮೀಪದಲ್ಲಿರುವ ತಮ್ಮ ಜಿಲ್ಲಾ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಕಾರ್ಯಾಲಯವನ್ನು ಸಂಪರ್ಕಿಸಬಹುದು ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಸಿರು ನಮ್ಮ ಉಸಿರು

ಹಳೆ ಮೈಸೂರು ಪ್ರಾಂತ್ಯ ಪ್ರವಾಸೋದ್ಯಮ ಕಣಜ

ಹಿರಿಯ ಕಾನೂನು ಸಲಹೆಗಾರ ಡಾ.ಎಂ.ಎನ್.ಭೀಮೇಶ್ ಅಭಿಮತ



ವೀರಶೈವ–ಲಿಂಗಾಯತ ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್–2025ರ 'ಮುಂದಿನ ಪೀಳಿಗೆಯ ನಾಯಕರ ಸಬಲೀಕರಣ' ವಿಚಾರ ಸಂಕಿರಣ ನಡೆಯಿತು.

> ತಂತ್ರಜ್ಞಾನ ಬೆಳೆದಂತೆ ಜನರ ಭಾವನೆಗಳು ಬದಲಾಗುತ್ತಿವೆ. ಅದರಂತೆ ನಿರ್ಮಾಣ ಕ್ಷೇತ್ರದಲ್ಲೂ ಬದಲಾವಣೆ ಆಗುತ್ತಿವೆ. ಬೆಂಗಳೂರು ಸೇರಿದಂತೆ ಬೃಹತ್ ನಗರಪಾಲಿಕೆ ವ್ಯಾಪ್ತಿಯಲ್ಲಿ ಅಂಗಡಿ ಮನೆ ಮುಕ್ತ ಕಟ್ಟಡಗಳ ನಿರ್ಮಾಣಕ್ಕೆ ಹೆಚ್ಚಿನ ಬೇಡಿಕೆ ಗ್ರಾಹಕರಿಂದ ಬರುತ್ತಿವೆ.
> – ಡಿ.ಎಸ್.ಮಲ್ಲಿಕಾರ್ಜುನ

ಮೈಸೂರು, ಜ.19(ಎಸ್‌ಪಿಎನ್)– ಅಮೆರಿಕಾ ಸೇರಿದಂತೆ ಯುರೋಪ್ ಯೂನಿಯನ್ ಒಕ್ಕೂಟದ ದೇಶಗಳಲ್ಲೂ ಇಲ್ಲದಂತಹ ಪ್ರವಾಸಿ ತಾಣಗಳು ಭಾರತದಲ್ಲಿವೆ. ಅದರಲ್ಲೂ ಹಳೆ ಮೈಸೂರು ಪ್ರಾಂತ್ಯದ ಜಿಲ್ಲೆಗಳು ಪ್ರವಾಸೋದ್ಯಮದ ಕಣಜ ಎಂದರೆ ತಪ್ಪಾಗಲಾರದು ಎಂದು ಹಿರಿಯ ಕಾನೂನು ಸಲಹೆಗಾರ ಡಾ.ಎಂ.ಎನ್.ಭೀಮೇಶ್ ಅಭಿಪ್ರಾಯಪಟ್ಟರು.

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಅಂತರರಾಷ್ಟ್ರೀಯ ಲಿಂಗಾಯತ ಯೂತ್ ಫೋರಂ (ಐಎಲ್‌ವೈಎಫ್)ಮೈಸೂರು ಘಟಕದ ವತಿಯಿಂದ ಏರ್ಪಡಿಸಿದ್ದ ವೀರಶೈವ–ಲಿಂಗಾಯತ ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್–2025ನ 'ಮುಂದಿನ ಪೀಳಿಗೆಯ ನಾಯಕರ ಸಬಲೀಕರಣ' ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಮಾತನಾಡಿದರು.

ಮೈಸೂರಿನ ಅಭಿವೃದ್ಧಿಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್, ದಿವಾನರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್ ಅವರನ್ನು ಕರ್ನಾಟಕ ಜನತೆ ಸದಾ ನೆನಪಿಸಿಕೊಳ್ಳಬೇಕು. ಮೈಸೂರಿನ ಪ್ರವಾಸೋದ್ಯಮ, ಅಭಿವೃದ್ಧಿಗೆ ತಮ್ಮದೇ ಕೊಡುಗೆ ನೀಡಿದ್ದಾರಲ್ಲದೆ, ವಿವಿಧ ಉತ್ಪನ್ನಗಳಿಗೆ ಮೈಸೂರು ಬ್ರಾಂಡ್ ರೂಪಿಸುವಲ್ಲಿ ಇವರ ಪಾತ್ರ ಮಹತ್ವದ್ದು. ಹಾಗಾಗಿ ಹೊಸ ಉದ್ಯಮ ಸ್ಥಾಪಿಸುವವರು, ನಿಮ್ಮ ಕನಸಿನ ಯೋಜನೆ ರೂಪಿಸಲು ಮೊದಲು ಕಾನೂನು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ, ಪ್ರಾಜೆಕ್ಟ್‌ಗಳ ಹೆಸರುಗಳನ್ನು ಮಾರುಕಟ್ಟೆಗೆ ಪರಿಚಯಿಸುವಂತೆ ಸಲಹೆ ನೀಡಿದರು.

ಜೆಎಸ್‌ಎಸ್ ಎಸ್‌ಜೆಸಿಇ ಸಿಇಓ ಬಿ.ಶಿವಶಂಕರ್ ಅವರು, ಯುವಕರು ತಮ್ಮಲ್ಲಿನ ಆಸಕ್ತಿದಾಯಕ ಕ್ಷೇತ್ರದ ಕೌಶಲ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿ, ಮುಂದಿನ ಬದುಕು ರೂಪಿಸಿಕೊಳ್ಳಿ ಎಂದು ಸಲಹೆ ಎಂದರು.